
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 9, 2011 ಪುಟ 20 ರೂ. 12/-

ನಗೆ ಹಬ್ಬವನ್ನು ನುಂಗಿದ ಕೋಮು ವಿಷ





ಬಂಡಲ್ ಬ್ರಹ್ಮಾಂಡ

ರಾಜನರ್ತಕಿ ರಾಜ್ಯಸಭೆಗೆ

ಉಡುಪಿ
ೋಗಲಾಡಿ
ಸಭಾಪತಿ
ಪ್ರತ್ಯಕ್ಷ

ಹುಬ್ಬಳ್ಳಿ
ಕಾರಾಗೃಹದಲ್ಲಿ
ಕೈದಿಗಳ
ಕಾಳಗ

ಮಂಡ್ಯ
ರಾಮಸ್ವಾಮಿಯ
ಎತ್ತುವಳಿ
ರಾಮಾಯಣ

ಎತ್ತ ಸಾಗಿದೆ ಅರಬ್ ಆಂದೋಲನ?

ನೋ ಕಾಮೆಂಟ್ಸ್

"ಒಂದು ವೇಳೆ ಈಜಿಪ್ಟ್‌ನಲ್ಲಿ ಸರ್ವಾಧಿಕಾರಿ ಮುಬಾರಕ್ ವಿರುದ್ಧ ಹೋರಾಡುತ್ತಿರುವವರು ಅಮೆರಿಕದ ತಥಾಕಥಿತ ಡೆಮಾಕ್ರಾಟ್ ಪಕ್ಷಕ್ಕೆ ಸೇರಿದವರಾಗಿದ್ದರೆ ಏನಾಗುತ್ತಿತ್ತು? ವಾಸ್ತವವಾಗಿ ಅಮೆರಿಕದ ಡೆಮಾಕ್ರಟಿಕ್ ಪಾರ್ಟಿಯು ಚುನಾವಣಾ ವ್ಯವಸ್ಥೆಯಡಿಯಲ್ಲಿನ ನವ ಉದಾರವಾದಿ ಆರ್ಥಿಕ ವ್ಯವಸ್ಥೆಗೆ ಒಳಪಟ್ಟಿರುವ ವಿರೋಧ ಪಕ್ಷೀಯ ರಾಜಕಾರಣವನ್ನೇ ಪ್ರತಿನಿಧಿಸುತ್ತದೆ. ಹೀಗಾಗಿ ಈಜಿಪ್ಟಿನ ಸಂದರ್ಭದಲ್ಲಿ ಅವು ಜನರ ಹೋರಾಟಕ್ಕೆ ಬೆಂಬಲವನ್ನು ಸೂಚಿಸುತ್ತಲೇ ಪ್ರಭುತ್ವದ ಜೊತೆಗೆ ನಿಲ್ಲುತ್ತಿದ್ದವು. ಈ ಡೆಮಾಕ್ರಾಟರು ಈಜಿಪ್ಟಿನಲ್ಲಿದ್ದಿದ್ದರೆ ಪ್ರಾಯಶಃ ಮುಬಾರಕ್ ಮುಂದಿಟ್ಟ ಸುಧಾರಣೆಗಳನ್ನು ಒಪ್ಪಿಕೊಂಡುಬಿಡುತ್ತಿದ್ದರು. ಆ ಸುಧಾರಣೆಗಳು ಅತ್ಯುತ್ತಮ ಎಂಬ ಕಾರಣಕ್ಕೆ ಅಲ್ಲ, ಬದಲಿಗೆ ಅದಕ್ಕೆ ಕೇವಲ ಬಾಯ್ಮಾತಿನ ಭರವಸೆಗಳಿಗೆ ಒಪ್ಪಿಕೊಳ್ಳುವ ಚಾಳಿಯಿರುವುದರಿಂದ! ಮುಬಾರಕ್ ಸೂಚಿಸಿದಂತೆ, ಉಪಾಧ್ಯಕ್ಷ ಸುಲೇಮಾನ್‌ನನ್ನು, ಅವನು ಎಷ್ಟೇ ಕ್ರೂರಿಯೆಂದು ಸಾಬೀತಾಗಿದ್ದರೂ, ಅಧ್ಯಕ್ಷ ಎಂದು ಒಪ್ಪಿಕೊಂಡುಬಿಡುತ್ತಿದ್ದರು. ಕಾರಣ ಅವನು ಒಳ್ಳೆಯವನು ಅಂತೇನೂ ಅಲ್ಲ, ಆದರೆ ಮುಬಾರಕ್‌ಗಿಂತ ಕಡಿಮೆ ಕ್ರೂರಿ ಎನ್ನುವ ಕಾರಣಕ್ಕೆ! ಈಜಿಪ್ಟಿನಲ್ಲಿ ಅಮೆರಿಕದ ಡೆಮಾಕ್ರಾಟ್ ಪಕ್ಷವಿಲ್ಲ ಎನ್ನುವುದು ಆ ದೇಶದ ಪುಣ್ಯ."

- ಸ್ಟೀವನ್ ಸಲೇಟಿಯಾ, ಚಿಂತಕ

"ಇಂದಿನ ರಾಜಕೀಯ ವ್ಯವಸ್ಥೆ ಅರೆಹುಚ್ಚನಂಥ ಸ್ಥಿತಿಯಲ್ಲಿದೆ. ಸಂಸ್ಕೃತಿ ಸಾಯುತ್ತಿದೆ. ಧರ್ಮದ ಹೆಸರಿನಲ್ಲಿ ಹಿಂಸೆ ನಡೆಯುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲೂ ನೈತಿಕತೆ ಅಧಃಪತನವಾಗುತ್ತಿರುವುದು ಆತಂಕ ಮೂಡಿಸುತ್ತಿದೆ."

- ಗೊ.ರು. ಚನ್ನಬಸಪ್ಪ

"ಬದ್ಧತೆ ಎಂಬುದು ಆಕ್ಸಿಜನ್ ಇದ್ದಹಾಗೆ. ನೀವು ಮೇಲುಮೇಲಕ್ಕೆ ಏರುತ್ತಿದ್ದಂತೆ ಅದರ ಲಭ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ."

- ಸಂಜಯ್ ಝಾ, ಚಿಂತಕ

ನಂಬಿದ್ರೆನಂಬಿ ಬಿಟ್ರೆಬಿಡಿ



"ಹಿರಿಯ ಐಎಫ್‌ಎಸ್ ಅಧಿಕಾರಿ ಯು.ವಿ.ಸಿಂಗ್ ಅವರು ಕಲುಷಿತ ಪ್ರದೇಶ ಪರಿಶೀಲನೆಗೆ ಸಮವಸ್ತ್ರ ಧರಿಸಿ ಹೋಗಬೇಕಿತ್ತು, ಆಗ ಅವರ ಮೇಲೆ ಹಲ್ಲೆ ನಡೆಯುತ್ತಿರಲಿಲ್ಲ."

- ಮೇಯರ್ ನಟರಾಜ್

ಗೋವಿನ ಹೆಸರಲ್ಲಿ ಸಂಘಿ ರಿಯಲ್ ಎಸ್ಟೇಟ್!

"ರಾಜ್ಯದಲ್ಲಿ ಗೋಶಾಲೆಗಳನ್ನು ತೆರೆಯಲು ಮುಂದೆ ಬರುವ ಸಂಘ-ಸಂಸ್ಥೆಗಳಿಗೆ ಮಾರುಕಟ್ಟೆ ಮೌಲ್ಯದ ಶೇ.20ರ ದರದಲ್ಲಿ ಗೋಮಾಳ ಭೂಮಿಯನ್ನು ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ."

- ವರದಿ

ಭಟ್ಟಂಗಿತನದ ಪರಮಾವಧಿ

"ಗೋ ಸಂರಕ್ಷಣಾ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಜಾನುವಾರು ಹತ್ಯೆ ತಡೆಯಬೇಕು. ಪ್ರಾಣಿರಕ್ಷಾ ಕೇಂದ್ರವನ್ನು ತೆರೆಯಲು ರಾಜ್ಯದಲ್ಲಿ ಏಟ-ಬಿಟ ಮಾದರಿಯಲ್ಲಿ ಸೂಕ್ತ ವಾತಾವರಣ ನಿರ್ಮಿಸಬೇಕಿದೆ. ರಾಜ್ಯ ಮಂಡಿಸುತ್ತಿರುವ ಕೃಷಿ ಬಜೆಟ್ಟು ರಾಷ್ಟ್ರಕ್ಕೆ ಮಾದರಿಯಾಗಬೇಕು."

- ಸ್ವಾಮಿ ದಯಾನಂದ

ಅರಬ್ ದೇಶಗಳ ಮುಂದಿನ ನಡೆ ಎತ್ತ ಕಡೆಗೆ..?

ನೈಜ 'ಪ್ರಜಾತಂತ್ರ'ದೆಡೆಗೋ... ಕೇವಲ ಚುನಾವಣಾ ಪ್ರಜಾ'ತಂತ್ರ'ದೆಡೆಗೋ?



ಟುನಿಸಿಯಾದಿಂದ ಪ್ರಾರಂಭವಾದ ಅರಬ್ ದೇಶಗಳಲ್ಲಿನ ಪ್ರಜಾತಾಂತ್ರಿಕ ಕ್ರಾಂತಿ ಈಜಿಪ್ಟ್ ಅನ್ನು ಹಾದು ಬಹರೈನ್, ಜೋರ್ಡಾನ್, ಮೊರಕ್ಕೊಗಳನ್ನು ದಾಟಿ ಈಗ ಲಿಬ್ಯಾವನ್ನು ಆವರಿಸಿಕೊಳ್ಳುತ್ತಿದೆ. ಲಿಬ್ಯಾದಲ್ಲಂತೂ ಸರ್ವಾಧಿಕಾರಿ ಗಡಾಫಿ ತನ್ನದೇ ಜನರ ಮೇಲೆ ಕ್ಷಿಪಣಿ ದಾಳಿಗಳನ್ನು ನಡೆಸಿ ಜನ ಸಂಗ್ರಾಮವನ್ನು ಹತ್ತಿಕ್ಕುವ ಪ್ರಯತ್ನ ನಡೆಸಿದ್ದಾನೆ. ಈಜಿಪ್ಟ್ ಮತ್ತು ಟುನಿಸಿಯಾಗಳಲ್ಲೂ ಸಾವಿರಕ್ಕೂ ಹೆಚ್ಚು ಜನ ಬಂಡಾಯಗಾರರ ಪ್ರಾಣಗಳನ್ನು ಅಲ್ಲಿನ ಸರ್ವಾಧಿಕಾರಿ ಬೆನ್ ಅಲಿ ಮತ್ತು ಮುಬಾರಕ್ ಪ್ರಭುತ್ವಗಳು ಬಲಿ ತೆಗೆದುಕೊಂಡವು. ಆದರೆ ಆ ಸರ್ಕಾರಗಳ ಬ್ರಹ್ಮಾಂಡ ಭ್ರಷ್ಟಾಚಾರ, ನಿರಂಕುಶತ್ವ, ಸಾಮ್ರಾಜ್ಯಶಾಹಿ ಪರ ನೀತಿಗಳಿಂದಾಗಿ ನಿರುದ್ಯೋಗ, ಹಸಿವು, ಅನಾರೋಗ್ಯ, ರೋಗರುಜಿನಗಳಿಗೆ ತುತ್ತಾಗಿದ್ದ ಜನತೆ ಈ ಬಾರಿ ಈ ಸರ್ಕಾರಗಳ ಹೊರರೂಪದ ವಿರುದ್ಧ ಮಾತ್ರವಲ್ಲದೆ ಅದರ ಸಾರ ರೂಪವಾದ ಜನವಿರೋಧಿ ನೀತಿಗಳ ವಿರುದ್ಧವೇ ಸಿಡಿದೆದ್ದಿದ್ದರು. ಈಜಿಪ್ಟ್‌ನ ತಾಹಿರಿ ಚೌಕದಲ್ಲಿ ಜನವರಿ 25ರಿಂದ ಫೆಬ್ರವರಿ 11ರಂದು ಮುಬಾರಕ್ ರಾಜೀನಾಮೆ ಕೊಡುವವರೆಗೂ ನೆರೆದಿದ್ದ ಹತ್ತು ಲಕ್ಷಕ್ಕೂ ಹೆಚ್ಚು ಜನಸಾಗರಕ್ಕೆ ಈಜಿಪ್ಟ್‌ನ ಇಡೀ ಎಂಟು ಕೋಟಿ ಜನ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ ಕೊಟ್ಟಿದ್ದರಿಂದಲೇ 18 ದಿನಗಳ ಆ ಪ್ರಜಾತಾಂತ್ರಿಕ ಕ್ರಾಂತಿ ಅಂತಿಮವಾಗಿ ಮುಬಾರಕ್‌ನನ್ನು ಇಳಿಸುವಲ್ಲಿ ಯಶಸ್ವಿಯಾಯಿತು. ಟುನಿಸಿಯಾದಲ್ಲಿ ಇದಕ್ಕಿಂತ ತೀವ್ರವಾದ ದಮನವನ್ನು ಜನರ ಮೇಲೆ ಹರಿಬಿಟ್ಟರೂ ಅಂತಿಮವಾಗಿ ಅಮೆರಿಕದ ಗುಲಾಮ ಸರ್ವಾಧಿಕಾರಿ ಬೆನ್ ಅಲಿ ಅಧಿಕಾರವನ್ನು ಬಿಡಲೇಬೇಕಾಯಿತು.

ಇಪ್ಪತ್ತೊಂದನೇ ಶತಮಾನದ ಆರಂಭದಲ್ಲಿ ಇರಾಕ್ ಮತ್ತು ಅಫಘಾನಿಸ್ತಾನದ ಮೇಲೆ ಅಮೆರಿಕ ಮಾಡಿದ ಆಕ್ರಮಣದ ವಿರುದ್ಧ ವಿಶ್ವಾದ್ಯಂತ ಮತ್ತು ಅರಬ್ ದೇಶಗಳಲ್ಲಿ ನಡೆದ ಬೃಹತ್ ಜನಾಂದೋಲನ, 2007ರಲ್ಲಿ ನೇಪಾಳದಲ್ಲಿ ಸರ್ವಾಧಿಕಾರಿ ರಾಜಸತ್ತೆಯ ವಿರುದ್ಧ ನೇಪಾಳಿ ಜನತೆ ನಡೆಸಿದ ಯಶಸ್ವಿ ಹೋರಾಟಗಳ ತರುವಾಯ ಅರಬ್ ಜನತೆ ನಡೆಸುತ್ತಿರುವ ಈ ಪ್ರಜಾಸತ್ತಾತ್ಮಕ ಕ್ರಾಂತಿಯೇ ಜಗತ್ತು ಕಾಣುತ್ತಿರುವ ಜನತೆಯ ರಾಜಕಾರಣದ ಮತ್ತು ಜನಸಂಗ್ರಾಮದ ಅತಿ ದೊಡ್ಡ ಪ್ರತಿರೋಧಗಳು!

ಆದರೂ ಅಮೆರಿಕನ್ ಹಿತಾಸಕ್ತಿಯನ್ನು ಒಡಲಲ್ಲಿಟ್ಟುಕೊಂಡಿರುವ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾಧ್ಯಮಗಳು ಈ ಹೋರಾಟಗಳ ಮಹತ್ವವನ್ನು ಸಾಧ್ಯವಾದಷ್ಟು ಗೌಣಗೊಳಿಸಲು ಪ್ರಯತ್ನಿಸುತ್ತಿವೆ. ಮೊದಲು ಇದು ಮುಲ್ಲಾಗಳು ಮತ್ತು ಇಸ್ಲಾಮಿಕ್ ಮೂಲಭೂತವಾದಿಗಳು ಉದಾರವಾದಿ ಪ್ರಭುತ್ವದ ವಿರುದ್ಧ ನಡೆಸುತ್ತಿರುವ ಭಯೋತ್ಪಾದಕ ಹೋರಾಟವೆಂದು ಬಣ್ಣಿಸಿದವು. ಆದರೆ ಅದರಲ್ಲಿ ಭಾಗವಹಿಸಿದ ಜನರ ಬೇಡಿಕೆಗಳು ನಿರುದ್ಯೋಗ, ಬಡತನ, ಆಹಾರ, ಆರೋಗ್ಯ, ಭ್ರಷ್ಟಾಚಾರದ ವಿರೋಧಿ ಸೆಕ್ಯುಲಾರ್ ಮತ್ತು ಪ್ರಗತಿಪರವಾಗಿದ್ದರಿಂದ ಅನಿವಾರ್ಯವಾಗಿ ಮಾಧ್ಯಮಗಳು ಈ ಪ್ರಚಾರವನ್ನು ನಿಲ್ಲಿಸಲೇಬೇಕಾಯಿತು. ನಂತರದಲ್ಲಿ ಇದು ಇಂಟರ್‌ನೆಟ್ ಜಮಾನದ ಯುವಕರು ನಡೆಸುತ್ತಿರುವ, ಇದ್ದಕ್ಕಿದ್ದಂತೆ ಸ್ಫೋಟಗೊಂಡ ಹೋರಾಟವೆಂಬ ಪ್ರಚಾರ ಪ್ರಾರಂಭವಾಯಿತು. ಆದರೆ ಹೋರಾಟದಲ್ಲಿ ಭಾಗವಹಿಸಿದವರಲ್ಲಿ ಮತ್ತು ಸತ್ತವರಲ್ಲಿ ಮುದುಕರು, ಕಾರ್ಮಿಕರು ಮತ್ತು ಮಹಿಳೆಯರು ಸಹ ಸರಿಪ್ರಮಾಣದಲ್ಲಿ ಇದ್ದರಾದ್ದರಿಂದ ಆ ಅಪಪ್ರಚಾರವೂ ಅರಬ್ ಕ್ರಾಂತಿಯ ಮಹತ್ವವನ್ನು ಗೌಣಗೊಳಿಸಲು ಸಾಧ್ಯವಾಗಲಿಲ್ಲ. ಈಗ ಈ ದಂಗೆಗಳು 'ಕೇವಲ ಮುಬಾರಕ್ ಅಥವಾ ಬೆನ್ ಅಲಿಯಂಥಾ ಸರ್ವಾಧಿಕಾರಿಗಳ ಆಡಳಿತ ಪದ್ಧತಿಯ ವಿರುದ್ಧ ದಿಢೀರನೇ ವ್ಯಕ್ತವಾದ ಜನಪ್ರತಿರೋಧ'ವೆಂದು ಸೀಮಿತಗೊಳಿಸುವ ಪ್ರಯತ್ನ ನಡೆಯುತ್ತಿದೆ. ಅಂದರೆ ಜನರ ಹೋರಾಟವನ್ನು ಆಡಳಿತ ಪದ್ಧತಿಯ ರೂಪಕ್ಕೆ ಮಾತ್ರ ಸೀಮಿತಗೊಳಿಸಿ ಆಡಳಿತದ ಸಾರಾಂಶವಾದ ಜನವಿರೋಧಿ, ಶ್ರೀಮಂತರ ಪರ, ಸಾಮ್ರಾಜ್ಯಶಾಹಿ ಪರ ರಾಜಕೀಯ, ಆರ್ಥಿಕತೆಯ ವಿರುದ್ಧವಿದ್ದ ಅಂಶವನ್ನು ಸಾಧ್ಯವಾದಷ್ಟು ಕಡೆಗಣಿಸುವ ಪ್ರಯತ್ನ ನಡೆಯುತ್ತಿದೆ.

ಪ್ರಾಯಶಃ ಅರಬ್ ಜನತೆಯ ಈ ಐತಿಹಾಸಿಕ ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿಯು ವ್ಯವಸ್ಥೆ ಎದುರಿಸುತ್ತಿರುವ ಅತಿ ದೊಡ್ಡ ಸವಾಲು. ಏಕೆಂದರೆ ಅಂತಿಮವಾಗಿ ಈಜಿಪ್ಟ್‌ನಲ್ಲಿ ಮುಬಾರಕ್ ರಾಜೀನಾಮೆ ಕೊಟ್ಟ, ಟುನಿಸಿಯಾದಲ್ಲಿ ಬೆನ್ ಅಲಿ ದೇಶ ಬಿಟ್ಟು ಓಡಿಹೋದ, ಆದರೆ ಆ ಜಾಗದಲ್ಲಿ ಬಂದಿರುವುದು ಏನು? ಈವರೆಗೆ ಅರಬ್ ದೇಶಗಳನ್ನು ಸುಲಿದು ತಿಂದ ಸರ್ವಾಧಿಕಾರಕ್ಕೆ ಬದಲಾಗಿ ಆಡಳಿತ ವಹಿಸಿಕೊಂಡಿರುವ ಶಕ್ತಿಗಳು ಯಾವ ಮಾರ್ಪಾಡುಗಳನ್ನು ತರುತ್ತೇವೆ ಎಂದು ಹೇಳುತ್ತಿದ್ದಾರೋ ಆ ಮಾರ್ಪಾಡುಗಳನ್ನು ತರುತ್ತಾರೆಯೇ? ಯಾವ ಆರ್ಥಿಕ ನೀತಿಗಳ ವಿರುದ್ಧ ಜನ ಗುಂಡುಗಳಿಗೂ ಎದೆಗೊಟ್ಟರೋ ಆ ಆರ್ಥಿಕ ಬದಲಾವಣೆಗಳನ್ನು ತರುತ್ತಾರೆಯೇ?



ಈ ದೃಷ್ಟಿಯಿಂದ ನೋಡಿದರೆ ಅರಬ್ ಕ್ರಾಂತಿಕಾರಿ ಹೋರಾಟಗಳಿಗಿದು ಅತ್ಯಂತ ಸೂಕ್ಷ್ಮ ಕಾಲಘಟ್ಟ. ಈಜಿಪ್ಟ್‌ನಲ್ಲಿ ಸರ್ವಾಧಿಕಾರಿ ಮುಬಾರಕ್‌ನನ್ನು ಕಿತ್ತೊಗೆದ ಹೋರಾಟಗಾರರು ಮುಬಾರಕ್‌ನ ಇಡೀ ಕ್ಯಾಬಿನೆಟ್ಟು ರಾಜೀನಾಮೆ ಕೊಡಬೇಕೆಂದೂ, ಈಜಿಪ್ಟ್‌ಗೆ ಜನತೆಯ ಆಶಯಗಳನ್ನು ಈಡೇರಿಸುವಂಥಾ ಹೊಸ ಸಂವಿಧಾನ ರಚನೆಯಾಗಬೇಕೆಂದೂ ಆಗ್ರಹಿಸಿ ಹೋರಾಟ ಮುಂದುವರೆಸಿದ್ದರು. ಆ ಕಾರಣಕ್ಕಾಗಿಯೇ ಆ 18 ದಿನಗಳ ಅವಧಿಯಲ್ಲಿ ಮುಬಾರಕ್‌ನ ಬದಲಿಗೆ ಅದೇ ಆಡಳಿತದ ಇತರ ಯಾವುದೇ ವ್ಯಕ್ತಿಯನ್ನು ಪರ್ಯಾಯವಾಗಿ ಸೂಚಿಸಿದರೂ ಹೋರಾಟಗಾರರು ಒಪ್ಪಲಿಲ್ಲ. ಮುಬಾರಕ್ ರಾಜೀನಾಮೆ ಕೊಟ್ಟ ಮೇಲೆ ಈಗ ಸೇನೆಯೇ ಅಧಿಕಾರವನ್ನು ವಹಿಸಿಕೊಂಡು ಇನ್ನಾರು ತಿಂಗಳಲ್ಲಿ ಹೊಸ ಚುನಾವಣೆಯನ್ನು ನಡೆಸುವುದಾಗಿ ಘೋಷಿಸಿದೆ. ದುರಂತವೆಂದರೆ ಮುಬಾರಕ್‌ನ ಸರ್ವಾಧಿಕಾರದ ಬೇರುಗಳು ಇದ್ದದ್ದೇ ಈ ಸೇನೆಯಲ್ಲಿ, ಅಲ್ಲಿ ಸೇನೆಯೇ ಆರ್ಥಿಕತೆ, ಜನಜೀವನ ಎಲ್ಲವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ರೂಪದಲ್ಲಿ ನಿಯಂತ್ರಿಸುತ್ತದೆ. ಪ್ರತಿ ವರ್ಷ ಈಜಿಪ್ಟ್ ಸೇನೆಗೆ ಅಮೆರಿಕ 1.4 ಬಿಲಿಯನ್ ಡಾಲರ್ ಸಹಾಯಧನ ನೀಡುತ್ತದೆ. ಅಮೆರಿಕದ ಸಾಕುಮಗು ಇಸ್ರೇಲನ್ನು ಬಿಟ್ಟರೆ ಅತಿ ಹೆಚ್ಚು ಮಿಲಿಟರಿ ಸಹಾಯ ಪಡೆದುಕೊಳ್ಳುತ್ತಿರುವುದು ಈಜಿಪ್ಟ್!

ಶಿವಸುಂದರ್



ಚಾರ್ವಾಕ

ಹೀಗಾಗಿಯೇ ಈಜಿಪ್ಟ್ ಮೇಲಿರುವ ಅಮೆರಿಕದ ಅಧಿಪತ್ಯ ಮತ್ತು ಇಸ್ರೇಲ್ ವಿಷಯದಲ್ಲಿ ಈಜಿಪ್ಟ್ ನಿಲುವು ಬದಲಾಗುತ್ತದೆಂದು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಅಲ್ಲದೆ ಬರಲಿರುವ 'ಚುನಾಯಿತ ಸರ್ಕಾರ'ಕ್ಕೆ ಸೇನೆಯನ್ನು ಮೀರಿ ನಿಲ್ಲುವ ಪ್ರಜಾತಾಂತ್ರಿಕ ಇಚ್ಛಾ ಶಕ್ತಿ ಇಲ್ಲವಾದರೆ ಅಧಿಕಾರದಲ್ಲಿರುವ ವ್ಯಕ್ತಿ ಬದಲಾಗಬಹುದೇ ವಿನಃ ಆಡಳಿತವಲ್ಲ.

ತನ್ನ ಸುದೀರ್ಘ ಸಾಮ್ರಾಜ್ಯಶಾಹಿ ಅಧಿಪತ್ಯದಲ್ಲಿ ಕ್ರಾಂತಿಗಳನ್ನು ವಿಫಲಗೊಳಿಸುವಲ್ಲಿ ಪರಿಣಿತಿ ಪಡೆದಿರುವ ಅಮೆರಿಕ ಈಗ ಈಜಿಪ್ಟ್ ಹಾಗೂ ತನ್ನ ಕೃಪಾಪೋಷಿತ ಸರ್ವಾಧಿಕಾರಿಗಳಿರುವ ಇತರೆ ದೇಶಗಳಲ್ಲಿ ಎದ್ದಿರುವ ನೈಜ ಪ್ರಜಾಸತ್ತೆಯ ಪರವಾದ ಕ್ರಾಂತಿಯ ಅಲೆಯನ್ನು ಸೋಲಿಸಲು ಕುತಂತ್ರವನ್ನು ಹೆಣೆದಿದೆ.

ಅದು **"Mubarakism without Mubarak!"** - ಮುಬಾರಕ್ ಇಲ್ಲದೆ ಮುಬಾರಕ್ ರೀತಿಯ ಆಡಳಿತ!

ಅಮೆರಿಕ ಸಾಮ್ರಾಜ್ಯಶಾಹಿ ಸಾಧ್ಯವಾದಷ್ಟೂ ಬಡದೇಶಗಳಲ್ಲಿ ತನ್ನ ಪರವಾದ ಸರ್ವಾಧಿಕಾರವನ್ನೇ ಉಳಿಸಿಕೊಳ್ಳಲು ಬಯಸುತ್ತದೆ. ಏಕೆಂದರೆ ಪ್ರಜಾತಂತ್ರಕ್ಕಿಂತ ಸರ್ವಾಧಿಕಾರಗಳಲ್ಲಿ ನಂಬುಗೆಯ ನಾಯಿಗಳು ಸಿಕ್ಕುವುದು ಸುಲಭ. ಅಮೆರಿಕವು ಡೊಮಿನಿಯನ್ ಗಣರಾಜ್ಯದಲ್ಲಿ ಟ್ರುಜಿಲೋನ ಸರ್ವಾಧಿಕಾರತ್ವವನ್ನೂ, 1950ರ ದಶಕದಲ್ಲಿ ವಿಯೆಟ್ನಾಮಿನಲ್ಲಿ ಡೈಯೆಮ್, ನಿಕರಾಗುವದಲ್ಲಿ ಸೊಮೊರ್ಝಾ ಆಡಳಿತವನ್ನು ಬೆಂಬಲಿಸಿತಲ್ಲದೆ, 1952ರಲ್ಲಿ ಕ್ಯೂಬಾ, 1964ರಲ್ಲಿ ಬ್ರೆಜಿಲ್, 1973ರಲ್ಲಿ ಚಿಲಿ, 1976ರ... ಅರ್ಜೆಂಟೈನಾದಲ್ಲಿ ಆಡಳಿತಾರೂಢ ಅಮೆರಿಕನ್ ವಿರೋ... ಸರ್ಕಾರಗಳ ವಿರುದ್ಧ ಆ ದೇಶಗಳ ಸೇನೆಯ ಮೂಲಕ ಕ್ಷಿ... ಕ್ರಾಂತಿ ನಡೆಸಿತು. ಆದರೆ ದೇಶಪ್ರೇಮಿ ಜನಸಾಗರ ತಮ... ದೇಶಗಳ ಅಮೆರಿಕನ್ ಗುಲಾಮಿ ಸರ್ವಾಧಿಕಾರಿಗಳ ವಿರು... ಸಂಗ್ರಾಮವನ್ನು ಶುರು ಮಾಡಿದಾಗ ಅನಿವಾರ್ಯವಾಗಿ ... ಸರ್ವಾಧಿಕಾರಿಗಳನ್ನು ಬದಲು ಮಾಡಿ ಅವರಿಗೆ ತಮ... ದೇಶಗಳಲ್ಲಿ ಪುನರ್‌ವಸತಿ ಕಲ್ಪಿಸಿತು. ಈ ತಂತ್ರ ಸಾಧ್ಯವಾಗದಿದ್ದಾ... ಪ್ರಜಾತಂತ್ರಕ್ಕಾಗಿ ಹೋರಾಡುತ್ತಿದ್ದ ಶಕ್ತಿಗಳ ನಾಯಕಗಣದ... ಒಂದು ಸ್ತರವನ್ನು ಭ್ರಷ್ಟಗೊಳಿಸಿ ತನ್ನ ದಲ್ಲಾಳಿಗಳನ್ನಾ... ಮಾಡಿಕೊಳ್ಳುತ್ತದೆ. ಈ ಹಿಂದೆ ಚಿಲಿ, ಇತ್ತೀಚೆಗೆ ಇರಾ... ಮತ್ತು ಅಫಘಾನಿಸ್ತಾನಗಳಲ್ಲಿ ನಡೆದದ್ದು ಅಮೆರಿಕದ ... ಕುತಂತ್ರಕ್ಕೆ ಹಲವು ಉದಾಹರಣೆಗಳು.

ಇಂದು ವಿಶ್ವದ ಪ್ರಭಾವಶಾಲಿ ಪ್ರಜಾತಂತ್ರವೆಂಬ ಹೆಗ್ಗಳಿ...ಯನ್ನು ಉಳಿಸಿಕೊಳ್ಳಲು ಬಯಸುವ, ಇತರೆ ದೇಶಗಳ... ಪ್ರಜಾತಂತ್ರದ ರಚನೆಗಳನ್ನು ಮಾತ್ರ ಇಟ್ಟುಕೊಂಡು ಆ ಮೂ...ಕವೇ ಸರ್ವಾಧಿಕಾರವನ್ನು ನಡೆಸಲು ಬಯಸುವ ಅಮೆರಿ... ತನ್ನ ಪರವಾಗಿದ್ದ ಸರ್ವಾಧಿಕಾರಿಗಳ ವಿರುದ್ಧ ಪ್ರಜಾಸತ್ತೆಗಾ... ನಡೆಯುತ್ತಿರುವ ಹೋರಾಟವನ್ನು ಪ್ರತ್ಯಕ್ಷವಾಗಿ ವಿರೋಧಿಸಲ... ಸಾಧ್ಯವಿಲ್ಲ. ಅದಕ್ಕೇ ಅನಿವಾರ್ಯವಾಗಿ ...ಲವು ಕಾಸ್ಮೆಟಿಕ... ಬದಲಾವಣೆಗಳಿಗೆ ಅಮೆರಿಕ ಒಪ್ಪಿಕೊಳ್ಳಲೇಬೇಕಾಗಿದೆ. ಆದ... ಆರ್ಥಿಕ ನೀತಿಗಳಲ್ಲಿ ಯಾವುದೇ ಬದಲಾವಣೆಯನ್ನು ತರದ... ಅರಬ್ ಪ್ರಾಂತ್ಯದಲ್ಲಿ ತನ್ನ ಹಾಗೂ ಇಸ್ರೇಲ್‌ನ ಹಿತಾಸಕ್ತಿಯನ... ರಕ್ಷಿಸುವ ರಾಜಕೀಯ ಶಕ್ತಿಗಳನ್ನು ಮಾತ್ರ ಅದು ಚುನಾವಣೆ...ಯಲ್ಲಿ ಆಯ್ದು ಬರುವಂಥಾ ತಂತ್ರವನ್ನು ಹೆಣೆಯುತ್ತಿದೆ. ಹೀಗಾಗಿ ಚುನಾವಣಾ ಪ್ರಜಾತಂತ್ರವೆಂಬುದು ಈ ದೇಶಗಳ... ನೈಜ ಪ್ರಜಾತಂತ್ರಕ್ಕೆ ವಿರುದ್ಧವಾಗಿ ಅಮೆರಿಕದ ಕುತಂತ್ರವಾಗಿಯೇ ಬಳಕೆಯಾಗಲಿದೆ.

ಅರಬ್ ದೇಶಗಳಲ್ಲಿನ ಪ್ರಜಾಸತ್ತಾತ್ಮಕ ಕ್ರಾಂತಿ ಈಗ ಆ... ಅಪಾಯಕಾರಿ, ಅನಿವಾರ್ಯ ಹಂತವನ್ನು ಹಾದುಹೋಗುತ್ತಿದೆ. 20ನೇ ಶತಮಾನದ ಉತ್ತರಾರ್ಧದ ಮತ್ತು 21ನೇ ಶತಮಾನದ... ಎಲ್ಲಾ ಸರ್ವಾಧಿಕಾರಿ ವಿರೋಧಿ ಪ್ರಜಾಸತ್ತಾತ್ಮಕ ಹೋರಾಟಗಳು ಈ ಎರಡನೇ ಹಂತದಲ್ಲೇ ಎಡವುತ್ತಿವೆ. ಈಜಿಪ್ಟ್ ಮತ್ತು ಇನ್ನಿತರ ದೇಶಗಳಲ್ಲಿನ ಹೋರಾಟ ಮೈತ್ರಿಯಲ್ಲಿ ಪ್ರಜಾತಂತ್ರದ... ರೂಪಕ್ಕೆ ಮಾತ್ರ ರಾಜಿಯಾಗಿ, ಸಾರಾಂಶದಲ್ಲಿ ಅಮೆರಿಕದ ಮತ್ತು ದೇಶೀಯ ದಲ್ಲಾಳಿಗಳ ಆಡಳಿತವನ್ನು ಮುಂದುವರೆಸಲು ಒಪ್ಪುವ ಹಾಗೂ ನಿಜವಾದ ಸಾರ್ವಭೌಮಿ ಮತ್ತು ಪ್ರಜಾತಾಂತ್ರಿಕ... ಶಕ್ತಿಗಳ ನಡುವೆ ಸಹಜ ಸಂಘರ್ಷ ಪ್ರಾರಂಭವಾಗಲಿದೆ. ಈ... ಸಂಘರ್ಷದಲ್ಲಿ ನೈಜ ಪ್ರಜಾತಾಂತ್ರಿಕ ಶಕ್ತಿಗಳು ಗೆಲ್ಲಲು ಇನ್ನ... ಹೆಚ್ಚಿನ ರಾಜಕೀಯ ಪ್ರಬುದ್ಧತೆ ಮತ್ತು ರಾಷ್ಟ್ರೀಯ ಸಂಘಟನಾ... ಶಕ್ತಿ ಅಗತ್ಯ. ಅರಬ್ ದೇಶಗಳು ಇದಕ್ಕೆ ಸಿದ್ಧವಾಗಿಲ್ಲದಿದ್ದಲ್ಲಿ ಭಾರತದಂತೆ ಆ ದೇಶದ ಜನರೂ ಮತ್ತೊಮ್ಮೆ ಮೋಸಹೋಗಲಿ...ದ್ದಾರೆ. ಹಾಗಾಗದಿರಲಿ.

...ಅಪ್ಪ' ಎಂಬ ಅಚ್ಚರಿ!

...ಪ್ಪನ ಬರವಣಿಗೆಗೆ ಅದೆಂತಹ ಶಕ್ತಿ ಇದೆ ಎಂದರೆ ...ೂ ಸಾವಿರಾರು ಜನ ಅಪ್ಪ ಬರೆದಿದ್ದ ಹಲವಾರು ...ಗಳನ್ನು ಇಡಿಯಾಗಿ ನೆನಪಿಟ್ಟುಕೊಂಡಿದ್ದಾರೆ. ...ೀ ಅದೆಷ್ಟೋ ಜನ ನೀಲು ಪದ್ಯಗಳ ಸಾಲುಗಳನ್ನೇ ...ಿ ಹಾಕುತ್ತಿರುತ್ತಾರೆ. ಇನ್ನು 'ಮರೆಯುವ ಮುನ್ನ' ...ದ ಅಭಿಮಾನಿಗಳಿಗೆ ಲೆಕ್ಕವಿಲ್ಲ.


...ರಡು ವರ್ಷಗಳ ಹಿಂದೆ ನಾವು 'ಮರೆಯುವ ... ಬರಹಗಳ ಮೊದಲ ಸಂಗ್ರಹ ಪ್ರಕಟಿಸಿದ ಕಲವೇ ...ಲ್ಲಿ ಓದುಗರೊಬ್ಬರಿಂದ ಒಂದು ಪತ್ರ ಬಂದಿತ್ತು. ...ರು ವರ್ಷಗಳ ಹಿಂದೆ ಮರೆಯುವ ಮುನ್ನ ...ದಲ್ಲಿ ಅಪ್ಪ ಬರೆದಿದ್ದ 'ನೇಗಿಲು, ಕೊಳಲು' ಎಂಬ ...ಪ್ಪಣಿ ತಮಗೆ ತುಂಬಾ ಇಷ್ಟವಾಗಿತ್ತೆಂದೂ, ಅದನ್ನು ... ಓದುವ ಆಶೆಯಾಗಿದ್ದರೂ ಪತ್ರಿಕೆಯ ಪ್ರತಿ ...ವೆಂದೂ, ಆ ಟಿಪ್ಪಣಿಯನ್ನು ಪುಸ್ತಕದಲ್ಲಿ ಪ್ರಕಟಿಸಿದ್ದಕ್ಕೆ ...ಷವಾಯಿತೆಂದೂ ಆ ಓದುಗರು ತಮ್ಮ ಪತ್ರದಲ್ಲಿ ...ದ್ದರು.

...ವಲ ಹದಿನಾರು ಸಾಲುಗಳಷ್ಟು ಉದ್ದ-ಅಥವಾ ...-ಇರುವ 'ನೇಗಿಲು, ಕೊಳಲು' ಬರಹದಲ್ಲಿ ಕೃಷಿ ... ಕಲೆ, ಸಮಾಜ ಮತ್ತು ಸಂಸ್ಕೃತಿ, ಹಳ್ಳಿ ಮತ್ತು ...ಯ, ಭಕ್ತಿ ಮತ್ತು ಜವಾಬ್ದಾರಿಗಳನ್ನು ಅಪ್ಪ ಎಷ್ಟು ...ಬೆಸೆದು ಮನಮುಟ್ಟುವಂತೆ ಬರೆದಿದ್ದರೆಂದರೆ ಇತರರ ... ಉದ್ದನೆ ಲೇಖನಗಳು ಅಥವಾ ಪುಸ್ತಕಗಳು ...ದಕ್ಕಿಂತ ಹೆಚ್ಚು ಈ ಚಿಕ್ಕ, ಚೊಕ್ಕ ಬರಹ ಹೇಳಿದೆ.

...ೇ ಮಾತು ಮರೆಯುವ ಮುನ್ನದಲ್ಲಿನ ಹಲವಾರು ...ಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಮಾರ್ಚ್ ...993ರ ಸಂಚಿಕೆಯಲ್ಲಿನ 'ಜಾತ್ಯತೀತತೆಯ ಗುಟ್ಟು' ... ಬರಹದಲ್ಲಿ '... ನಾನೇಕೆ ಸೆಕ್ಯುಲರ್ ಆಗಿರಲು ...ಸುತ್ತೇನೆ? ಇದು ಯಾವುದೋ ಯೋಜನೆ ಅಥವಾ ...ದಿಂದ ಬರುವುದಿಲ್ಲ. ನನ್ನಂಥವರು ಎಲ್ಲ ಜನ ...ಗೆ ಬದುಕಿ, ಕೆಲಸ ಮಾಡಿ ಪಡೆದ ಸಂತೋಷದಿಂದ ...ಸೆಕ್ಯುಲರ್ ಆಗುವುದು ಸಾಧ್ಯ. ತನ್ನ ಜಾತಿಯವ ...ಗೆ ಮಾತ್ರ ಉಲ್ಲಾಸ ಹೊಂದುವವ ಕ್ರಮೇಣ ...ತವಾಗಿ ನಶಿಸುತ್ತಾನೆ; ಸಾಮಾಜಿಕವಾಗಿ ಅನ್ಯಾಯದ ...ಗುತ್ತಾನೆ. ಎಲ್ಲ ಬಗೆಯ, ವಿವಿಧ ಹಿನ್ನೆಲೆಯ ಜನ ...ಕೊಡುವ ಅನುಭವಗಳು ಈ ಜಾತ್ಯತೀತ ಖುಷಿಗೆ ...' ಎಂದು ವಿವರಿಸುತ್ತಾರೆ.

...ದ ನಾಲ್ಕು ತಿಂಗಳ ನಂತರ ಜುಲೈ 7, 1993ರ ...ಲ್ಲಿ ಇನ್ನೊಂದು ಮರೆಯುವ ಮುನ್ನ ಟಿಪ್ಪಣಿಯಲ್ಲಿ ...ನು ಬಹುರೂಪಿ ಜನರನ್ನು ಇಷ್ಟಪಡುವವನು; ...lity ನನಗೆ ಬೇಕು. ಒಂದೇ ಬಗೆಯ, ಒಂದೇ ..., ಒಂದೇ ತರಹದ ಚಿಂತನೆಯ ಜನರೊಂದಿಗೆ ...ದರೆ ನಾನು ಬತ್ತಿಹೋಗುತ್ತೇನೆ. ನಿಮ್ಮೊಂದಿಗೆ ...ತಿ ನಾನು ಜೀವ ತಳೆಯುತ್ತೇನೋ, ಅವರೊಂದಿಗೆ ... ಜೀವ ಪಡೆಯುತ್ತೇನೋ, ನಮ್ಮ ಸ್ಪೆಫಿ(ನಾಯಿ) ...ಗೆ ಸುಮ್ಮನೇ ಕೂತಿದ್ದು ಬದುಕುತ್ತೇನೋ - ...ೇಳಲಿ? ಬದುಕೇ ವಿಚಿತ್ರ..." ಎಂದು ದಾಖಲಿಸು...

...ರಡನ್ನು 'ಜಾತೀಯತೆಯ ಸೂಕ್ಷ್ಮ ಅವತಾರಗಳು' ... ಲೇಖನದಲ್ಲಿ (ಟೀಕೆ ಟಿಪ್ಪಣಿ ಸಂಪುಟ-3) ...ವುದನ್ನು ಇಟ್ಟು ನೋಡಿ: "ನಮ್ಮಲ್ಲಿ ಜಾತಿ, ...ಣ್ಣ ಮಾತುಗಳೆಲ್ಲ ಒಟ್ಟಿಗೇ ಹೋಗುವುದರಿಂದ ...ೇ ಹೀಗೆ ವರ್ಣಿಸುತ್ತಿದ್ದೇನೆ. ನಮ್ಮ ಹುಡುಗರು ...ರಾಗಲು ಒಂದೇ ಮಾರ್ಗ ಆರೋಗ್ಯವಂತ ಕುತೂ...ವಿನೋದ, ವ್ಯಾಮೋಹ ಬೆಳೆಸಿಕೊಳ್ಳುವುದು; ಬುರ್ಖಾದಲ್ಲಿ ಇರುವ ತಾಯಿಯೂ ಬುರ್ಖಾದ ಹೊರಗಿರುವ ತಾಯಿಯೂ ಅದೇ ಹೃದಯದ, ಹತಾಶೆಯ, ಬಡತನದ, ಅತೃಪ್ತಿಯ, ಪ್ರೀತಿಯ ತಾಯಿಯದು. ಇದು ಗೊತ್ತಿಲ್ಲದವರಿಗೆ ಮಾತ್ರ ನಾನು ಪದೇಪದೇ ಹೇಳುವ 'ಜಾತ್ಯತೀತ ರೋಮಾಂಚನ' ಸಿಕ್ಕುವುದಿಲ್ಲ. ಎಲ್ಲರೊಂದಿಗೆ ಆಡುವವನು, ಕೆಲಸ ಮಾಡುವವನು, ಎಲ್ಲರ ಪ್ರೀತಿಗಾಗಿ ವಿಶ್ವಾಸಕ್ಕಾಗಿ ಪ್ರಯತ್ನಿಸುವವನು ನಿಜಕ್ಕೂ ಪರಿಪಕ್ವತೆಯ ದಾರಿಯಲ್ಲಿರು ತ್ತಾನೆ..."



ಈ ಮೂರೂ ಬರಹಗಳಲ್ಲಿ ಲಂಕೇಶರಿಗೆ ಬಹು ಮುಖ್ಯವಾಗಿದ್ದ ಜಾತ್ಯತೀತ ಚಿಂತನೆ, ರಾಜಕೀಯ, ಸಮಾಜ ಮತ್ತು ಜನರನ್ನು ಒಂದುಗೂಡಿಸುವ ಸಂಸ್ಕೃತಿ ಎದ್ದು ಕಾಣಿಸುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು 1993ರಲ್ಲಿ ಹಿರಿಯ ಲೇಖಕರಾದ ಶಾ.ಬಾಲುರಾವ್ ಅವರಿಗೆ ಕವನಗಳ ಅನುವಾದಕ್ಕೆ ಪ್ರಶಸ್ತಿಯನ್ನು ಘೋಷಿಸಿತ್ತು, ಅದನ್ನು ತಿರಸ್ಕರಿಸಿದ ಬಾಲುರಾವ್ ಅವರು ಹಲವಾರು ಕಾರಣಗಳನ್ನು ನೀಡಿದ್ದರು.

'ಶಾ. ಬಾಲುರಾವ್: ಪ್ರಶಸ್ತಿ ಕುರಿತು' ಎಂಬ ಬರಹದಲ್ಲಿ ಬಾಲುರಾವ್ ಅವರು ನೀಡಿರುವ ಕಾರಣಗಳನ್ನು ದಾಖಲಿಸಿದ ನಂತರ ಲಂಕೇಶರು "... ಇವೆಲ್ಲ ನಾನು ಈ ಪ್ರಶಸ್ತಿ ತಿರಸ್ಕರಿಸಲು ನೀಡಬಹುದಾದ ಕಾರಣಗಳೇ. ನನಗೆ ಈ ಸಲ ಬಂದಿರುವ ಇಂಥದೇ ಪ್ರಶಸ್ತಿಯನ್ನು ತಿರಸ್ಕರಿಸಬೇಕೆಂದಿದ್ದೆ. ಆದರೆ ನನಗೆ ವೈಯಕ್ತಿಕವಾಗಿ ಇದು ನಾಟಕೀಯವಾಗಬಹುದು ಅನ್ನಿಸಿತು; ಎರಡನೆಯದಾಗಿ ಅನೇಕ ಬಡವರಾದ ಶ್ರೇಷ್ಠ ಲೇಖಕರಿಗೆ ಪ್ರಶಸ್ತಿಯ ಹಣದ ಅವಶ್ಯಕತೆ ಇರಬಹುದು; ಪ್ರಶಸ್ತಿ ತಿರಸ್ಕರಿಸಿ ಅಂಥವರಿಗಿಂತ ನಾನು ಮೇಲು ಎಂದು ಸೂಚಿಸಿದಂತಾಗುತ್ತದೆ ಮತ್ತು ಅವರಲ್ಲಿ ಹಿಂಜರಿಕೆ, ನೋವು ಮೂಡಿಸಿದಂತಾಗುತ್ತದೆ. ಅದು ತಪ್ಪು; ಜಗತ್ತಿನ ಎಲ್ಲ ಪ್ರಶಸ್ತಿಗಳ ಹಿಂದೆಯೂ ದುಷ್ಟಶಕ್ತಿಗಳ ರಾಜಕೀಯ ಇರುವ ಸಂಭವವಿದೆ; ಮೂರನೆಯದಾಗಿ, ನೊಬೆಲ್ ಬಹುಮಾನವನ್ನು ಕೂಡ ತಿರಸ್ಕರಿಸುವ ಮನಃಸ್ಥೈರ್ಯ ಇದ್ದರೆ ಮಾತ್ರ ಈ ಬಹುಮಾನ ತಿರಸ್ಕರಿಸುವುದರಲ್ಲಿ ಅರ್ಥವಿದೆ... ಇಷ್ಟೆಲ್ಲ ಯೋಚಿಸಿ ನಾನು ಈ ಪ್ರಶಸ್ತಿಯ ಬಗ್ಗೆ ಏನೂ ಹೇಳದೆ ನಿಜವಾದ ಗೊಂದಲದಿಂದ ಸುಮ್ಮನಾಗಿದ್ದೇನೆ" ಎಂದು ಬರೆಯುತ್ತಾರೆ.

ಇಲ್ಲಿ ತನಗೆ ಕಂಡದ್ದು ಯಾವುದು ಸರಿ, ತಪ್ಪು ಎಂದು ಮಾತ್ರ ಯೋಚಿಸದೇ ಇತರೆ ಲೇಖಕರ ಅಗತ್ಯತೆಗಳ ಬಗ್ಗೆಯೂ ಚಿಂತಿಸುವ, ತನ್ನ ಕ್ರಿಯೆಯಿಂದ ಬೇರೆಯವರಿಗೆ ಇರುಸುಮುರುಸು ಮಾಡಬಾರದೆಂಬ ಸೂಕ್ಷ್ಮತೆ ಎದ್ದು ಕಾಣಿಸುತ್ತದೆ. ಸಾಮಾನ್ಯವಾಗಿ ಬಹಳಷ್ಟು ಜನ ಲಂಕೇಶರನ್ನು ಒರಟು ಮನುಷ್ಯ ಇತರರ ಬಗ್ಗೆ ಯೋಚಿಸದೇ ತನ್ನ ಲೇಖನಿಯನ್ನು ಹರಿದುಬಿಡುವ ವ್ಯಕ್ತಿ ಎಂದೇ ಗ್ರಹಿಸಿರುವುದರಿಂದ ಲಂಕೇಶರ ಒಳಗಿದ್ದ ಕಾಳಜಿಯನ್ನು ಹಿಡಿದಿರುವ ಈ ಟಿಪ್ಪಣಿ ನನಗೆ ಮುಖ್ಯವೆನಿಸಿತು.

ಮರೆಯುವ ಮುನ್ನ ಸಂಗ್ರಹ 1 ಮತ್ತು 2ರಲ್ಲಿ ಇರುವಂತೆ ಈ ಮೂರನೆ ಸಂಗ್ರಹದಲ್ಲೂ (1993 ಮತ್ತು 94ರಲ್ಲಿ ಬರೆದ ಬರಹಗಳು) ಲಂಕೇಶರಿಗೆ ಮುಖ್ಯವಾಗಿದ್ದ ಸಾಹಿತ್ಯ, ಕ್ರೀಡೆ, ಪರಿಸರ, ರಾಜಕೀಯ, ಸಮಾಜ ಇತ್ಯಾದಿ ವಿಷಯಗಳನ್ನು ಕುರಿತ ಬರಹಗಳು ಇವೆ. ಅಷ್ಟೇ ಅಲ್ಲದೆ, ವೃದ್ಧಾಪ್ಯ, ರಾಜಕಾರಣಿಗಳ ಸೋಗಲಾಡಿತನ, ಪ್ರೇಮವಿವಾಹ, ಕತೆ ಬರೆಯಲು ಕೂತಾಗ ಎದುರಾದ ಕಷ್ಟಗಳು, ತೆಂಗಿನ ಗಿಟುಕು, ಬುದ್ಧ ತೆವಲುಗಳು, ಜೋಕ್‌ಗಳು, ಇನ್ನೂ ಅದೆಷ್ಟೋ ವಿಚಾರಗಳನ್ನು ಕುರಿತ ಚಿಂತನೆಗಳಿವೆ. ಹಾಗೆಯೇ ಪ್ರತಿ ಬರಹದಲ್ಲಿ 'ರಂಜನೆ, ಬೋಧನೆ, ಪ್ರಚೋದನೆ'ಗಳೂ ಇವೆ.

1993ರಲ್ಲಿ ಅಪ್ಪನಿಗೆ 58 ವರ್ಷ ತುಂಬಿತ್ತು. ಆ ವರ್ಷದ ಮಾರ್ಚ್ 3ರ ಸಂಚಿಕೆಯಲ್ಲಿ 'ಮರ ಮತ್ತು ಮಾನವ' ಎಂಬ ಟಿಪ್ಪಣಿಯಲ್ಲಿ "ಮನುಷ್ಯ ಏಕೆ ಇಷ್ಟು ಅಸಹಾಯಕನಾಗುತ್ತಾನೆ- ಎಂದು ಕೆಲವು ಸಲ ಚಿಂತೆಯಾಗುತ್ತದೆ. ಯಾವುದೇ ಮರ, ಹಕ್ಕಿ, ಪ್ರಾಣಿ. ಹೀಗೆ ತಬ್ಬಲಿಯಾಗುವುದಿಲ್ಲ..." ಎಂದು ಹೇಳುತ್ತಾ "ಮುಪ್ಪಿನತ್ತ ನಡೆಯುತ್ತಿರುವ ನನ್ನಂಥವರಿಗೆ ಜೀವನದ ರಹಸ್ಯಗಳು ಮತ್ತು ಸ್ವಾವಲಂಬನೆಯ ಅನಿವಾರ್ಯತೆ ಹೆಚ್ಚು ತೀವ್ರವಾಗಿ ಮುಟ್ಟುತ್ತವೆ. ನಾನೇ ನನ್ನನ್ನು ಗಮನಿಸಿಕೊಂಡಿರುವಂತೆ, ನನ್ನ ಸುತ್ತ ಮತ್ತು ನನ್ನ ಮೂಲಕ ಸಾಗುವ ಪ್ರತಿಯೊಂದು ದಿನವೂ ತನ್ನ ವಿವರಗಳಿಂದ ಸೋಜಿಗ ಹುಟ್ಟಿಸುತ್ತದೆ. ಹತ್ತಾರು ವರ್ಷಗಳ ಹಿಂದೆ ನಾನು ಎಲ್ಲವನ್ನೂ ಇಷ್ಟು ವಿವರವಾಗಿ ಗಮನಿಸುತ್ತಿರಲಿಲ್ಲ ಅನ್ನಿಸುತ್ತದೆ.." ಎಂದು ದಾಖಲಿಸಿದ್ದಾರೆ.

ಅಷ್ಟು ಹೊತ್ತಿಗಾಗಲೇ ಅಪ್ಪ ಸಿಗರೇಟ್ ಸೇದುವುದನ್ನು ಬಿಟ್ಟಿದ್ದರು, ರಕ್ತದೊತ್ತಡಕ್ಕೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದರು, ಸಕ್ಕರೆ ಕಾಯಿಲೆ ಕಂಟ್ರೋಲಿನಲ್ಲಿತ್ತು, ಸ್ವಾವಲಂಬಿಯಾಗಿರುವುದು ಮುಖ್ಯವಾಗಿದ್ದ ಅಪ್ಪನನ್ನು ಆಗ ವೃದ್ಧಾಪ್ಯದ ಸ್ಥಿತಿ ಕಾಡಲಾರಂಭಿಸಿತ್ತು.

1994ರ ಜನವರಿಯಲ್ಲಿ ಅವರಿಗೆ ಸ್ಟ್ರೋಕ್ ಆಯಿತು. ಆಗ ಅವರ ಜೀವನದಲ್ಲಿ ಪ್ರಥಮ ಬಾರಿಗೆ ಆಸ್ಪತ್ರೆಯೊಂದಕ್ಕೆ ಅಡ್ಮಿಟ್ ಆಗಬೇಕಾಯಿತು. ಎಂದೂ ಕಾಯಿಲೆ ಬಂದು ಹಾಸಿಗೆ ಹಿಡಿಯದಿರದಿದ್ದ ಅಪ್ಪನಿಗೆ ಅದು ನಿಜವಾಗಲೂ ಚಡಪಡಿಕೆಯ ಕಾಲವಾಗಿತ್ತು.

ಆದರೂ ಅವರು ತಮ್ಮ ಜೀವನೋತ್ಸಾಹವನ್ನಾಗಲಿ, ಬರೆಯುವ ಸ್ಫೂರ್ತಿಯನ್ನಾಗಲಿ ಕಳೆದುಕೊಳ್ಳಲಿಲ್ಲ. ಅಪ್ಪನ ಆರೋಗ್ಯ ಕೆಟ್ಟಿದೆ ಎಂದು ಗೊತ್ತಾಗಿ ತೇಜಸ್ವಿಯವರು ಮುಡಿಗೆರೆಯಿಂದ ಫೋನ್ ಮಾಡಿದ್ದನ್ನು "ಗ್ಯಾರಂಟಿ..." ಎಂಬ ಅಂಕಣದಲ್ಲಿ ಬರೆದಿದ್ದಾರೆ. ತೇಜಸ್ವಿಯವರು ಅಪ್ಪನಿಗೆ "ಒಂದು ಮಾತಂತೂ ಖಂಡಿತ. ನಮ್ಮದು, ನಿಮ್ಮದು ಎಲ್ಲ ಗ್ಯಾರಂಟಿ ಪೀರಿಯಡ್ ಮುಗಿದು ಹೋಗಿದೆ. ಇನ್ನು ಏನಿದ್ರೂ ಆಕಸ್ಮಾತ್ತಾಗಿ ಬದುಕಿರಬೇಕು" ಎಂದು ಹೇಳಿ ನಗುತ್ತಾರೆ. ಅಪ್ಪ ಕೂಡ ನಕ್ಕು ಹೀಗೆ ಬರೆಯುತ್ತಾರೆ: "ನಮಗೆಲ್ಲ ಗ್ಯಾರಂಟಿ ಪೀರಿಯಡ್ ಮುಗಿದಿರುವುದು ನಿಜ. ಹಾಗೆಯೇ ನಮಗೆ ಯಾರೂ ಗ್ಯಾರಂಟಿ ಕೊಟ್ಟಿರಲಿಲ್ಲ ಅನ್ನೋದೂ ನಿಜ. ಈ ಬದುಕಿನಲ್ಲಿರುವ fun ಅದೇನೇ. ಅನಿಶ್ಚಿತತೆ, ಅಸ್ಥಿರತೆ ಅವೆಲ್ಲ ಇಲ್ಲವೇ ಇಲ್ಲ ಎಂಬ ಭ್ರಮೆ ನಮಗೆಲ್ಲ... ಇದು ಗ್ಯಾರಂಟಿ ಪೀರಿಯಡ್‌ನಲ್ಲಿ ಮಾತ್ರವಲ್ಲ- ಇಡೀ ಜೀವನದಲ್ಲಿ..."

ಕಂಡಹಾಗೆ



• ಗೌರಿ ಲಂಕೇಶ್

editorlankesh@gmail.com

ತಮ್ಮ ಆರೋಗ್ಯ ಕೆಡುತ್ತಿದ್ದರೂ ಅಪ್ಪ ಎಂದೂ ತಮ್ಮ ಪತ್ರಿಕೆಯ ಕೆಲಸಗಳನ್ನು ನಿಲ್ಲಿಸಲಿಲ್ಲ, ತಮ್ಮ ಆಸಕ್ತಿಯನ್ನು ಕೆರಳಿಸಿರುವ ವಿಷಯಗಳಿಂದ ದೂರ ಉಳಿಯಲಿಲ್ಲ. ಎಂದಿನಂತೆ ಟೀಕೆ ಟಿಪ್ಪಣಿ, ಮರೆಯುವ ಮುನ್ನ, ಪುಸ್ತಕ ವಿಮರ್ಶೆ, ಪ್ರಶ್ನೋತ್ತರ ಇತ್ಯಾದಿಗಳನ್ನು ಬರೆಯುತ್ತಿದ್ದರಲ್ಲದೆ ಸಮಯ ಸಿಕ್ಕಾಗ ತಮ್ಮ ತೋಟಕ್ಕೆ ಭೇಟಿ ನೀಡುತ್ತಿದ್ದರು, ಇಸ್ಪೀಟು ಆಡುತ್ತಿದ್ದರು, ಮಿತ್ರರೊಂದಿಗೆ ಹರಟುತ್ತಿದ್ದರು.

ಸ್ಟ್ರೋಕ್ ಆದ ಕೆಲವು ತಿಂಗಳಲ್ಲೇ ಅವರಿಗೆ ಒಂದು ಕಣ್ಣಿನಲ್ಲಿ ಸಮಸ್ಯೆ ಕಾಣಿಸಿಕೊಂಡಿತು. ಆ ಕಣ್ಣಿಗೆ ಹಲವು ಬಾರಿ ಶಸ್ತ್ರಚಿಕಿತ್ಸೆ ನೀಡಿಸಿದರೂ ಕ್ರಮೇಣ ಅದು ಸಂಪೂರ್ಣವಾಗಿ ವಿಫಲವಾಯಿತು. ಹೀಗೆ 1994 ರಲ್ಲಿ ಅವರ ಆರೋಗ್ಯ ಕೆಡಲಾರಂಭಿಸಿ ಅವರ ದೇಹ ಅವರ ಮನಸ್ಸಿನ ಮೇಲೆ ಒಂದಾದಮೇಲೊಂದು ಹೊಡೆತಗಳನ್ನು ನೀಡಲಾರಂಭಿಸಿತು.

ಇತರೆ ವಿಷಯಗಳೊಂದಿಗೆ ಇದರ ಬಗ್ಗೆಯೂ ಮರೆಯುವ ಮುನ್ನದಲ್ಲಿ ಅಪ್ಪ ದಾಖಲಿಸಿದ್ದಾರೆ. ಆದರೆ ಅವರು ತಮ್ಮ ಅನಾರೋಗ್ಯದ ಬಗ್ಗೆ ಮಾತ್ರ ಬರೆದಿಲ್ಲ, ಅದರೊಂದಿಗೆ ಬೇರೆಬೇರೆ ಸಂಗತಿಗಳನ್ನು ಹೆಣೆದು ಹೊಸ ವಿಚಾರಗಳ ಬಗ್ಗೆ ಯೋಚಿಸುವಂತೆ ಮಾಡುತ್ತಾರೆ. ಒಂದು ರೀತಿಯಲ್ಲಿ ಈ ಸಂಗ್ರಹ ಅಪ್ಪನ ಡೈರಿಯಂತಿದೆ. ಇನ್ನೊಂದು ರೀತಿಯಲ್ಲಿ ಅವರ ಆಶೆ, ಆಕಾಂಕ್ಷೆ ಮತ್ತು ಆತಂಕಗಳ ಪ್ರತಿಬಿಂಬವೂ ಆಗಿದೆ. ಮತ್ತೊಂದು ರೀತಿಯಲ್ಲಿ ಅಪ್ಪನಿಗೆ ಪ್ರಿಯವಾಗಿದ್ದ ಬಣ್ಣಬಣ್ಣವಾದ ಬೆಚ್ಚಗಿನ ಕೌದಿಯಂತಿದೆ. ಈ ಕೌದಿಯನ್ನು ಪತ್ರಿಕೆಯ ಸಂಚಿಕೆಗಳಿಂದ ತೆಗೆದು, ಅದನ್ನು ಓರಣಗೊಳಿಸಿ ನಿಮ್ಮ ಮುಂದಿಟ್ಟದ್ದೇನಷ್ಟೇ ನಾನು. ●

...ಲಂಕೇಶ್ 76: ಕಾರ್ಯಕ್ರಮಕ್ಕೆ ಬನ್ನಿ

...ಇನ್ನು ಕೆಲವೇ ದಿನಗಳಲ್ಲಿ ಅಪ್ಪನಿಗೆ ಪ್ರೀತಿಯಿಂದ 'ಮೀಯಾಂವ್' ...ವ ದಿನ ಬರುತ್ತಿದೆ. ಅಪ್ಪನ 76ನೇ ಹುಟ್ಟುಹಬ್ಬವಾದ ಮಾರ್ಚ್ 8 ...ಾರಿ ಮಂಗಳವಾರ ಬೀಳುತ್ತಿರುವುದರಿಂದ ಅದಕ್ಕೆ ಎರಡು ದಿನ ...ನೇ ಮಾರ್ಚ್ 6ರ ಭಾನುವಾರದಂದು 'ಲಂಕೇಶ್ 76' ...ಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅವತ್ತು ಲಂಕೇಶರನ್ನು ಕುರಿತು ... ಮಿತ್ರ ಸಾಹಿತಿ ನಟರಾಜ್ ಹುಳಿಯಾರ್ ಮಾತನಾಡಲಿದ್ದಾರೆ.

...ಂದಿನಂತೆ ಅವತ್ತು ನಮ್ಮ ಲಂಕೇಶ್ ಪ್ರಕಾಶನ ಪ್ರಕಟಿಸಿರುವ ಎರಡು ...ಗಳನ್ನು ಬಿಡುಗಡೆ ಮಾಡಲಾಗುತ್ತದೆ. ಮೊದಲನೆ ಪುಸ್ತಕ ಲಂಕೇಶರ ...ಯುವ ಮುನ್ನ' ಬರಹಗಳ ಮೂರನೇ ಸಂಗ್ರಹ. ಎರಡನೆಯದು ನನ್ನ ...ಹಾಗೆ' ಅಂಕಣಗಳ ಎರಡನೆ ಸಂಗ್ರಹ.

...ಂದು ವಿಚಿತ್ರ ಗೊತ್ತಾ? ಅಪ್ಪ ತನ್ನ ಜೀವಿತಾವಧಿಯಲ್ಲಿ ಬರೆದು ...ದ್ದು ಒಟ್ಟು 22 ಪುಸ್ತಕಗಳನ್ನು, ಆದರೆ ನಾವು ಲಂಕೇಶ್ ಪ್ರಕಾಶನವನ್ನು ...ಭಿಸಿದ ನಂತರ ಅಪ್ಪನ 13 ಹೊಸ ಪುಸ್ತಕಗಳನ್ನು ಪ್ರಕಟಿಸಿದ್ದೇವೆ! ... ಕೇವಲ ಮೂರು ವರ್ಷಗಳಲ್ಲಿ, ಅಂದರೆ, ಅಪ್ಪ ಬರೆದಿದ್ದ ...ಪ್ಪಣಿಯ ಭಾಗ ನಾಲ್ಕು, ಮರೆಯುವ ಮುನ್ನ ಅಂಕಣಗಳ ಇನ್ನೂ ಮೂರು ಸಂಗ್ರಹಗಳು, ವ್ಯಕ್ತಿಗಳನ್ನು ಕುರಿತ ಇನ್ನೊಂದು ಸಂಗ್ರಹ... ಎಲ್ಲವೂ ಇನ್ನೂ ಪ್ರಕಟಗೊಳ್ಳಬೇಕಿದೆ. ಒಂದು ರೀತಿಯಲ್ಲಿ ಅಪ್ಪ ಇನ್ನೂ ನಮ್ಮೊಂದಿಗಿದ್ದಾರೆಂಬುದಕ್ಕೆ ಇದೇ ಸಾಕ್ಷಿ!

ಇವತ್ತು ಕರ್ನಾಟಕ ಹಿಂದೆಂದೂ ಕಂಡರಿಯದಂತಹ ಬಿಕ್ಕಟ್ಟನ್ನು, ಸಮಸ್ಯೆಗಳನ್ನು ಎದುರಿಸುತ್ತಿದೆ. ಆದ್ದರಿಂದ ನಮ್ಮ ಕಾರ್ಯಕ್ರಮಕ್ಕೆ

'ಕರ್ನಾಟಕದ ಬಿಕ್ಕಟ್ಟುಗಳು ಮತ್ತು ಪರಿಹಾರದ ದಾರಿಗಳು'

ಎಂಬ ಶೀರ್ಷಿಕೆಯನ್ನು ಇಟ್ಟಿದ್ದೇವೆ. ಈ ಬಗ್ಗೆ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಜನತಾದಳದ ವೈ.ಎಸ್.ವಿ.ದತ್ತ, ಬಿಎಸ್‌ಪಿ ನಾಯಕ ಎನ್.ಮಹೇಶ್, ಸಿಪಿಐ ನಾಯಕ ಸಿದ್ದನಗೌಡ ಪಾಟೀಲ್, ಜನಶಕ್ತಿ ಸಂಘಟನೆಯ ಸಂಚಾಲಕ ಡಾ.ವಾಸು ಮಾತ್ರವಲ್ಲದೆ ನಮ್ಮ ತಂಡದ ಪಾರ್ವತೀಶ ಅವರು ಮಾತನಾಡಲಿದ್ದಾರೆ. ನಮ್ಮ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಬರಲು ಮಾನ್ಯ ಲೋಕಾಯುಕ್ತ ನ್ಯಾ. ಸಂತೋಷ್ ಹೆಗಡೆ ಒಪ್ಪಿದ್ದಾರೆ. ಎಂದಿನಂತೆ ನಾನು ಅಲ್ಲಿದ್ದೇ ಇರುತ್ತೇನೆ!

'ಲಂಕೇಶ್ 76' ಕಾರ್ಯಕ್ರಮವಲ್ಲದೆ, 'ಲಂಕೇಶ್' ವಾರಪತ್ರಿಕೆಯ ವರ್ಷಾಚರಣೆಯ ಭಾಗವಾಗಿ ಒಂದು ವಿಶೇಷ ಸಂಚಿಕೆಯನ್ನು ತರುತ್ತಿದ್ದೇವೆ. ಈ ವಿಶೇಷ ಸಂಚಿಕೆಯ ಕೇಂದ್ರವಸ್ತು

'ಹೊಸ ತಲೆಮಾರಿನ ತಲ್ಲಣ'

ಹೆಸರೇ ಸೂಚಿಸುವಂತೆ ಈ ವಿಶೇಷಾಂಕಕ್ಕೆ ನಮ್ಮ ನಾಡಿನ ಹೊಸ ತಲೆಮಾರಿನ ಬರಹಗಾರರೇ ಬರೆಯುತ್ತಿದ್ದಾರೆ. ಮಾತ್ರವಲ್ಲ ಈ ವಿಶೇಷಾಂಕಕ್ಕೆ ಪಾರ್ವತೀಶ ಅವರು ಸಂಪಾದಕರಾಗಿದ್ದಾರೆ.

ನಮ್ಮ 'ಲಂಕೇಶ್ 76' ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಇದೇ ಸಂಚಿಕೆಯ 20ನೇ ಪುಟದಲ್ಲಿ ಪ್ರಕಟಿಸಿದ್ದೇವೆ. ಮೊದಲೇ ಹೇಳಿದಂತೆ ಇದು ನಡೆಯುತ್ತಿರುವುದು ಮಾರ್ಚ್ 6ರಂದು. ಸ್ಥಳ ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಹಿಂಭಾಗ, ಬೆಂಗಳೂರು. ಸಂಜೆ ಐದು ಗಂಟೆಗೆ.


ಲಂಕೇಶರ ಮಿತ್ರರು, ಅಭಿಮಾನಿಗಳು, ಪತ್ರಿಕೆಯ ಓದುಗರು, ಸ್ನೇಹಿತರು, ಹಿತೈಷಿಗಳು, ಎಲ್ಲರೂ ಇದನ್ನೇ ನನ್ನ ವೈಯಕ್ತಿಕ ಆಹ್ವಾನವೆಂದು ಪರಿಗಣಿಸಿ ಕಾರ್ಯಕ್ರಮಕ್ಕೆ ಬರಬೇಕೆಂದು ಪ್ರೀತಿಯಿಂದ ಕೋರುತ್ತಿದ್ದೇನೆ.

ನಿಮ್ಮ,
ಗೌರಿ

ಬಂಡೆಮಂಜನ ನಿಕಾಲಿಗೆ ಹೋಗಿ ವಿಶ್ವನೇ ಖಾಲಿಯಾದ


ಇತ್ತೀಚೆಗೆ ನೆಲಮಂಗಲ ಪೊಲೀಸರು ಬಂಡೆ ಮಂಜನ ಹತ್ಯೆಗೆಂದು ರೌಂಡಿಗಿಳಿದಿದ್ದ ಒಂದು ಡಜನ್ ಹಂತಕರ ಹಿಂಡನ್ನು ಹಿಡಿದು ಹಾಕಿದರಲ್ಲ; ಆ ಪೈಕಿ ಒಂದು ಗ್ಯಾಂಗು ವಿಶ್ವನದಾಗಿತ್ತು. ನೆಲಮಂಗಲ ರಣ ಘಾತಕಿ ಬಂಡೆ ಮಂಜನಿಗೂ ಆತನ ಗುರು ಚಿತ್ತನಗೆರೆ ಸೀನನಿಗೂ ಯಾವುದೇ ದುಷ್ಮನಿಯಿರಲಿಲ್ಲ. ವ್ಯಾವಹಾರಿಕ ಜಿದ್ದಾಜಿದ್ದಿ ರಾಜಕೀಯ ವೈಷಮ್ಯ ಗ್ಯಾಂಗ್ ಹಣಾಹಣಿ ಯಾವುದೂ ಇಲ್ಲದೆ ವಿಶ್ವ ಏಕೆ ನೆಲಮಂಗಲದ ರಕ್ತಾರ್ಥಕೆ ಕೈಯಿಟ್ಟ ಮತ್ತು ಬಂಡೆಮಂಜನ ಎದುರಾಳಿ ಚಿತ್ತನಗೆರೆ ಶಂಕ್ರನ ಜೊತೆ ಕೈಜೋಡಿಸಿದ? ಅದು ಜೈಲಿನ ಋಣ ಮತ್ತು ರೌಡಿ ಸಿಂಡಿಕೇಟುಗಳ ನಡುವಿನ ಒಳಹುನ್ನಾರ. ಎಂ.ಸಿ.ಲೇಔಟಿನ ಸಂಜಯ್ ಉರ್ಫ್ ಚಿಕ ಚೈನಾ ಎಂಬ ಕಾಲೇಜು ವಿದ್ಯಾರ್ಥಿಯನ್ನು ಚಿತ್ರಹಿಂಸೆ ಕೊಟ್ಟು ಕೊಂದು ಜೈಲುಪಾಲಾದ ವಿಶ್ವನಿಗೆ ಪರಪ್ಪನ ಅಗ್ರಹಾರ ಜೈಲಲ್ಲಿ ಜೊತೆಯಾದವರು ನೆಲಮಂಗಲದ ಚಿತ್ತನಗೆರೆ ಶಂಕ್ರ ಮತ್ತು ಹಟ್ಟಿ ಮಂಜ. ಅದು ಪರಪ್ಪನ ಅಗ್ರಹಾರ ಜೈಲಿನ ಏಳನೇ ಬ್ಯಾರಕು . ಕೊರಂಗು ಟೀಮಿನ ಎದುರಾಳಿ ಸಿಂಡಿಗೇಟಿನ ಘಾತಕಿಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಬ್ಯಾರಕಿ ನಲ್ಲಿಟ್ಟಿದ್ದ ಜೈಲಧಿಕಾರಿಗಳು ಸಹಜವಾಗೇ ಮಾರೇನಹಳ್ಳಿ ಜಗ್ಗನ ಎದುರಾಳಿಯೆಂದು ವಿಶ್ವನನ್ನು ಚಿತ್ತನಗೆರೆ ಶಂಕ್ರ ಇದ್ದ ಬ್ಯಾರಕ್ಕಿಗೆ ಹಾಕಿದ್ದಾರೆ.

ಅಲ್ಲಿ ಶಂಕ್ರ ಮತ್ತು ಹಟ್ಟಿ ಮಂಜರ ಜೊತೆಗೆ ರಾಬರಿ ಗಿರಿ, ಯಶವಂತಪುರದ ವೆಂಕಿ ಕೂಡ ಇದ್ದರು. ಎಷ್ಟೆಂದರೂ ಕೊರಂಗು ವಿರೋಧಿಗಳಲ್ಲವೆ, ಒಂದೇ ಬ್ಯಾರಕಾದ್ದರಿಂದ ದೋಸ್ತಿ ಇನ್ನಷ್ಟು ಗಟ್ಟಿಯಾಗಿದೆ. ಇಲ್ಲಿಗೆ ತಿಂಗಳ ಹಿಂದೆ ಜೈಲಲ್ಲೇ ಹೊಡೆದಾಟ ನಡೆದು ಶಂಕ್ರನನ್ನು ಧಾರವಾಡ ಜೈಲಿಗೆ ಕಮಾನೆತ್ತಿದರೆ ಹಟ್ಟಿ ಮಂಜನನ್ನು ಬೆಳಗಾವಿಗೆ ಎತ್ತಾಕಿದ್ದಾರೆ. ಅದೇ ಹೊತ್ತಿಗೆ ರಾಬರಿ ಗಿರಿ ಮತ್ತು ವೆಂಕಿ ಜೈಲಿಂದ ಹೊರಬಿದ್ದು ಬೆನ್ನಲ್ಲೇ ವಿಶ್ವನೂ ಹೊರಬಂದಿದ್ದಾನೆ.


ಬಂಡೆ ಮಂಜ


ಜೈಲಲ್ಲಿ ಅದೇನೇನು ವ್ಯವಹಾರ ಕುದುರಿತ್ತೋ. ನೆಲಮಂಗಲದ ಹಳೇ ಘಾತಕಿ ಮತ್ತು ಶಂಕ್ರನ ದುಷ್ಮನ್ ಬಂಡೆ ಮಂಜನನ್ನು ಮುಗಿಸಿಕೊಡುವ ಡೀಲಿಗೆ ಮೂವರೂ ಅಣಿಯಾಗಿದ್ದಾರೆ. ಹ್ಯಾಡಾಳು ದೇವಿಯ ಮಗ ಹರ್ಷ ಅಥವಾ ಬಂಡೆ ಮಂಜ ಯಾರು ಸಿಕ್ಕರೂ ಮುಗಿಸಿಬಿಡಿ ಎಂದು ಶಂಕ್ರ ಡೀಲು ಕುದುರಿಸಿದ್ದಕ್ಕೆ ವಿಶ್ವ, ರಾಬರಿಗಿರಿ, ವೆಂಕಿ ಮೂವರು ಫೀಲ್ಡಿಗಿಳಿದಿದ್ದಾರೆ. ರಾಬರಿಗಿರಿಯ ಬಲಗೈ ಬಂಟ ತಂಬು, ಯಶವಂತಪುರದ ಒಂದಷ್ಟು ವೆಂಕಿಶಿಷ್ಯರು, ಶ್ರೀರಾಂಪುರದ ಕೆಲ ಘಾತಕಿಗಳು ಮತ್ತು ತಿಮ್ಮೇನಹಳ್ಳಿ ವಿಶ್ವ ಕಳಿಸಿದ್ದ ಐದಾರು ಮಂದಿ ಹಂತಕರೆಲ್ಲ ಒಟ್ಟಿಗೇ ಕಲೆತು ನೆಲಮಂಗಲದ ಶಂಕ್ರನ ಕೆಲ ಶಿಷ್ಯರ ಜೊತೆ ನಾಲು ಗಾಡಿಗಳಲ್ಲಿ ರೌಂಡಿಂಗ್‌ಗಿಳಿದಿದ್ದಾರೆ.

ಬಂಡೆ ಮಂಜನಿಗಾಗಿ ಮೊದಲು ಸೊಂಡೆಕೊಪ್ಪ ರಸ್ತೆಯಲ್ಲಿ ಹೊಂಚಿ ಕೂತಿದ್ದಾರೆ. ಆನಂತರ ಇನ್ನೇನು ಮಾಹಿತಿ ಸಿಕ್ಕಿ ದಾಸನಪುರ-ಮಾದಾಪುರದ ಕಡೆ ಬಂದು ತುಮಕೂರು-ಬೆಂಗಳೂರು ರಸ್ತೆಯಲ್ಲಿ ಹೊಂಚು ಹಾಕಿದ್ದಾರೆ. ನೆಲಮಂಗಲದಂಥ ಊರಲ್ಲಿ ಅದೂ ಬಂಡೆ ಮಂಜನ ಭದ್ರ ಕೋಟೆಯಂತಿರುವಲ್ಲಿ ಅನಾಮಿಕ ಘಾತಕಿಗಳು ಹೊಂಚಿ ಕೂತಿದ್ದು ಗೊತ್ತಾಗದೇ ಇರುತ್ತಾ? ನೆಲಮಂಗಲದ ಇನ್ಸ್‌ಪೆಕ್ಟರ್ ಯತಿರಾಜು ಉಪಾಯವಾಗಿ ಸುತ್ತುವರಿದು ಹಂತಕ ಪಡೆಯನ್ನು ಹಿಡಿದು ಹಾಕಿದ್ದಾರೆ. ಮೂರು ಗಾಡಿಗಳಲ್ಲಿದ್ದ ಒಂದು ಡಜನ್ ಹಂತಕರ ಜೊತೆ ತಂದಿದ್ದ ಲಾಂಗು, ಮೊಬೈಲು ಎಲ್ಲವೂ ಪೊಲೀಸರ ಪಾಲಾಗಿದೆ. ಹೀಗೆ ಜೈಲುಪಾಲಾದ ಹಂತಕರ ಪೈಕಿ ವಿಶ್ವ ಕಳಿಸಿದ್ದ ಐವರೂ ಇದ್ದರಂತೆ. ಒಂದಷ್ಟು ಹುಡುಗರು ಪರಾರಿಯಾಗಿದ್ದಾರೆ. ಬಹುಶ ನೆಲಮಂಗಲದ ಹತ್ಯೆಗೆ ಹೋದ ವಿಶ್ವನ ಹುಡುಗರು ಸಿಕ್ಕಿ ಬೀಳದೇ ಹೋಗಿದ್ದರೆ, ಆತ ಇಷ್ಟು ಸಲೀಸಾಗಿ ಕೊಲೆಯಾಗುತ್ತಿರಲಿಲ್ಲವೇನೊ.


ಚಿತ್ತನಗೆರೆ ಶಂಕರ

ಸದಾಕಾಲ ಬೆಂಗಾವಲಿಗಿರುತ್ತಿದ್ದ ಹುಡುಗರು ಜೈಲುಪಾಲಾಗಿದ್ದು ವಿಶ್ವನಿಗೆ ಮುಳುವಾಯಿತು. ಯಾರದೋ ತಲೆ ತೆಗೆಯಲು ಹೋಗಿ ತಾನೇ ಹೆಣವಾದವನು ವಿಶ್ವ.

ಪಾಪಿ ಬಂಡೆ ಮಂಜ ಸದ್ಯದ ಮಟ್ಟಿಗೆ ಚಿರಾಯು.



ವಿಶ್ವನ ಕೊಲೆ ವಿಜಯನಗರದ ಕಾಂಗ್ರೆಸ್-ಬಿಜೆಪಿ ಗ್ಯಾಂಗ್‌ವಾರ್‌ನ ಮತ್ತೊಂದು ಮುಖ

ಮಾರೇನಹಳ್ಳಿ ಜಗ್ಗನ ವಿರುದ್ಧ ಗೋವಿಂದನ ಪಳೆಯುಳಿಕೆಯಂತಿದ್ದ ವಿಶ್ವನೂ ನಿಕಾಲಿಯಾದ ಮೇಲೆ ಉಳಿದಿರುವವರು ಬ್ಯಾಟರಾಯನಪುರದ ಮುರುಗ ಮತ್ತು ಮೊಬೈಲ್ ರವಿ ಮಾತ್ರ. ಅವರ್‍ಯಾರು ಜಗ್ಗನ ದಿಕ್ಕಿಗೆ ತಲೆ ಹಾಕಿಯೂ ಮಲಗುವವರಲ್ಲ, ಅಲ್ಲಿಗೆ ತಿಮ್ಮೇನಹಳ್ಳಿಯ ಒಂದು ಪೀಳಿಗೆಯ ರಣಕಾಳಗ ಅಂತ್ಯಗೊಂಡಂತಾಯಿತೆ? ತಮ್ಮಯ್ಯ ಮತ್ತು ಗೋವಿಂದ ಎಂಬ ಇಬ್ಬರು ಗೊಲ್ಲ ದಾಯಾದಿಗಳ ನಡುವಿನ ಹದಿನೈದು ವರ್ಷಗಳ ಸುದೀರ್ಘ ಗ್ಯಾಂಗ್‌ವಾರ್ ವಿಶ್ವನ ಅಂತ್ಯದೊಂದಿಗೆ ಪರಿಸಮಾಪ್ತಿಯಾಯ್ತೆ?

ಉತ್ತರಿಸುವವರ್‍ಯಾರು?

ಫೆಬ್ರವರಿ 11ರ ಶುಕ್ರವಾರ ಬೆಳಿಗ್ಗೆ ಒಂಬತ್ತೂವರೆ ಹೊತ್ತಿಗೆ ತನ್ನ ಮನೆಯಿಂದ ಮೆಟ್ಟಿಲಿಳಿದು ಇನ್ನೇನು ರಸ್ತೆಗಿಳಿಯಬೇಕು-ಅಷ್ಟರಲ್ಲೇ ನುಗ್ಗಿ ಬಂದ ಹಂತಕ ತಂಡ ಅನಾಯಾಸವಾಗಿ ವಿಶ್ವನನ್ನು ಕೊಚ್ಚಿಹಾಕಿದೆ. ತನ್ನ ಮನೆ ಪಕ್ಕದ ಮೋರಿಯ ಕಟ್ಟೆಯ ಮೇಲೇ ವಿಶ್ವ ಹೆಣವಾಗಿದ್ದ. ಅದು ಇಪ್ಪತ್ತು ಮಂದಿ ಹಂತಕರು ನಡೆಸಿದ ವ್ಯವಸ್ಥಿತ ದಾಳಿ. ರಸ್ತೆಯ ನಾಲ್ಕೂ ದಿಕ್ಕಿನಿಂದ ಐದೈದು ಮಂದಿಯಂತೆ ಅಟಕಾಯಿಸಿಕೊಂಡ ಕಿರಾತಕ ಪಡೆಯ ನೇತೃತ್ವ ವಹಿಸಿದ್ದ ಮುನಿಯ ವಿಶ್ವನಿಗೆ ಬಲಗೈಬಂಟನಂತಿದ್ದ. ಜೊತೆಗಿದ್ದೇ ನಿರಾಯಾಸವಾಗಿ ತನ್ನ ಗುರುವನ್ನು ಮುಗಿಸಿಬಿಟ್ಟ. ಒಂದಲ್ಲ ಎರಡಲ್ಲ; ಸರಿಸುಮಾರು ಇಪ್ಪತ್ತು ಮಂದಿ ಮುಗಿಬಿದ್ದು ಬೀಸುತ್ತಿದ್ದ ಲಾಂಗ್ ಏಟಿಗೆ ವಿಶ್ವನ ಹೊಟ್ಟೆಯ ಕರುಳೇ ಈಚೆಗೆ ಬಿದ್ದಿತ್ತು, ತಲೆ ಸೀಳಿ ಹೋಗಿತ್ತು, ಕೈಕತ್ತರಿಸಿ ತುಂಡಾಗಿತ್ತು, ಮತ್ತೊಂದು ಮಾತಿಗೂ ಅವಕಾಶವಿಲ್ಲದಂತೆ ತನ್ನ ಮನೆ ಮುಂದೆಯೇ ರಸ್ತೆಗೆ ಹೆಣವಾಗಿ ಬದ್ದಿದ್ದ ವಿಶ್ವ ಇಷ್ಟೊಂದು ಸಲೀಸಾಗಿ ಕೊಲೆಯಾಗುತ್ತಾನೆಂಬುದನ್ನು ಯಾರು ತಾನೇ ಊಹಿಸಲು ಸಾಧ್ಯವಿತ್ತು?

ತಿಮ್ಮೇನಹಳ್ಳಿ ವಿಶ್ವ ಅಲಿಯಾಸ್ ವಿಶ್ವನಾಥ್; ಗೋವಿಂದನ ಶಿಷ್ಯ. ತಮ್ಮಯ್ಯನ ಕೊಲೆ ಕೇಸಿಗೆ ಫಿಟ್ ಆಗಿದ್ದವನು ಆತ ತಮ್ಮಯ್ಯನ ಕೊಲೆಯಲ್ಲಿರಲಿಲ್ಲ. ಅದು ತಮ್ಮಯ್ಯನ ಕಡೆಯವರಿಗೆ ಚೆನ್ನಾಗೇ ಗೊತ್ತಿತ್ತು. ಮಾಡದ ಕೊಲೆಯನ್ನು ತಾನೇ ಮಾಡಿದೆನೆಂದು ಜೈಲು ಪಾಲಾಗಿ ಅಷ್ಟಿಷ್ಟು ಹೆಸರು ಮಾಡಿ ರೌಡಿಪಟ್ಟಕ್ಕೇರುವ ಹುಂಬ ತನವೇ ಅಂತಿಮವಾಗಿ ಆತನನ್ನು ನುಂಗಿ ಹಾಕಿತ್ತು. ವಿಶ್ವನ ತಂದೆ ನಾರಾಯಣಪ್ಪ ಪೊಲೀಸ್ ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರ್. ಈತನಿಗೊಬ್ಬ ಅಣ್ಣನೂ ಇದ್ದಾನೆ. ಆತನ ಹೆಸರು ಸೀನ. ಯಾವತ್ತಿಗೂ ಗಲಾಟೆಗೆ ಹೋದವನಲ್ಲ, ತಂದೆ ಪೊಲೀಸ್ ಇಲಾಖೆಯಲ್ಲಿದ್ದೂ ಗೋವಿಂದನ ಗ್ಯಾಂಗಿಗೇ ವಿಶ್ವ ಸೇರ್ಪಡೆಯಾಗಿದ್ದೇ ವಿಚಿತ್ರ.

ಸೂರಿಯ ಅಂತ್ಯ

ತಿಮ್ಮೇನಹಳ್ಳಿಯಲ್ಲಿ ತಮ್ಮಯ್ಯನ ಮನೆ ಎದುರಿಗೇ ವಿಶ್ವನ ಮನೆಯಿತ್ತು, ತನ್ನ ಚಲನವಲನದ ಬಗ್ಗೆ ವಿಶ್ವನೇ ಗೋವಿಂದನಿಗೆ ಮಾಹಿತಿ ಕೊಡುತ್ತಿದ್ದಾನೆಂದು ತಮ್ಮಯ್ಯ ಗುಮಾನಿಗೆ ಬಿದ್ದು ವಿಶ್ವನನ್ನು ಹಿಡಿದು ಬಾರಿಸಿದ್ದ. ಬಹುಶ ಅದೇ ಕಾರಣಕ್ಕೆ ವಿಶ್ವ ಗೋವಿಂದನಿಗೆ ಹತ್ತಿರವಾದ. ಸಹವಾಸ ಆತನನ್ನು ಗ್ಯಾಂಗ್ ವಾರ್‌ನ ಆಳಕ್ಕೆ ಕರೆದೊಯ್ಯಿತು. ತಮ್ಮಯ್ಯನ ಕೊಲೆಯಲ್ಲಿ ತಾನಿಲ್ಲದಿದ್ದರೂ ಹೆಸರು ಮಾಡುವ ಖಯಾಲಿಗೆ ಬಿದ್ದು ಕೇಸಿಗೆ ಫಿಟ್ ಆದ. ಅನ್ಯಾಯವಾಗಿ ಮೂರ್‍ನಾಲ್ಕು ವರ್ಷ ಜೈಲಲ್ಲೇ ಕಳೆದ. ಹೊರಬರುವ ಹೊತ್ತಿಗೆ ಗೋವಿಂದನ ಬಲಗೈ ಬಂಟನಂತಿದ್ದ ಸೂರಿಯೇ ಕೊಲೆಯಾಗಿ ಹೋಗಿದ್ದ. ಬೆನ್ನಲ್ಲೇ ಗೋವಿಂದನೂ ಕೊಲೆಯಾದ.

ಗೋವಿಂದನ ಗ್ಯಾಂಗಿನಲ್ಲಿದ್ದ ಪಂಟರುಗಳೇನು ಕಮ್ಮಿಯವರೆ. ನೀರಾನೆ, ಆತನ ತಮ್ಮ ಬಸವ, ಕರಿನರಸಿಂಹ, ಮೊಬೈಲ್ ರವಿ, ಕಬಡ್ಡಿ ನರಸಿಂಹ, ಮೆಂಟಲ್ ಪ್ರಕಾಶ, ಗೊರಿಲ್ಲಾ ಶ್ರೀಧರ; ಹೀಗೆ ಖತರ್‌ನಾಕ್ ಕಿರಾತಕರ ಹಿಂಡೇ ಗೋವಿಂದನ ನೆರಳಿನಲ್ಲಿತ್ತು, ತಮ್ಮಯ್ಯನ ನಂತರ ಆತನ ಉತ್ತರಾಧಿಕಾರಿಯಂತಿದ್ದ ಮಚ್ಚನೂ ಕೊಲೆಯಾಗಿದ್ದ. ಅದಕ್ಕೆ ಪ್ರತಿಯಾಗಿ ಗೋವಿಂದನ ಶಿಷ್ಯ ಸೂರಿಯನ್ನು ಪೆದ್ದಗುಂಡನ ಪಡೆ ಮುಗಿಸಿಹಾಕಿತ್ತು, ಜೈಲಲ್ಲಿ ಕೂತೇ ಮಾರೇನಹಳ್ಳಿ ಜಗ್ಗ ದಾಳ ಉರುಳಿಸುತ್ತಿದ್ದ. ಜೇಡರಹಳ್ಳಿ ಕೃಷ್ಣಪ್ಪ ಕೈಬಿಟ್ಟ ನಂತರ ಗೋವಿಂದನೂ ಅಂತರಪಿಶಾಚಿ ಯಂತಾಗಿ ತನ್ನ ಮನೆಯೆದುರೇ ಕುಡಿಯುತ್ತಾ ಕೂತವನು ಅನ್ಯಾಯವಾಗಿ ಅದೇ ತಿಮ್ಮೇನಹಳ್ಳಿಯ ಚಿಟ್ಟೇ ಹುಡುಗರ ಕೈಯಲ್ಲಿ ಹತನಾದ. ಬೆನ್ನಲ್ಲೇ ನೀರಾನೆ ತಮ್ಮ ಬಸವ, ಕರಿ ನರಸಿಂಹ, ಮೆಂಟಲ್ ಪ್ರಕಾಶ ಮುಂತಾದ ವರೆಲ್ಲ ಒಬ್ಬೊಬ್ಬರಾಗಿ ಕೊಲೆಯಾದರು. ನೀರಾನೆ ಹರೀಶ ಏರಿಯಾ ಬಿಟ್ಟೇ ಹೋದ. ಮೊಬೈಲ್ ರವಿ ಯಾರ ಕಣ್ಣಿಗೂ ಬೀಳದೆ ನಾಪತ್ತೆಯಾದ. ಉಳಿದವನು ವಿಶ್ವ ಮಾತ್ರ. ಈ ಹೊತ್ತಿಗಾಗಲೇ ತಿಮ್ಮೇನ ಹಳ್ಳಿಯ ಸಹವಾಸವೇ ಸಾಕೆಂದು ವಿಶ್ವನ ತಂದೆ ಪಕ್ಕದ ಅಗ್ರಹಾರ ದಾಸರಹಳ್ಳಿಗೆ ಮನೆ ಬದಲಾಯಿಸಿದರು. ಏರಿಯಾ ಬದಲಾಯಿಸಿದರೆ ಮಗ ಸರಿಹೋಗಬಹುದೆಂದೇ ಲೆಕ್ಕಹಾಕಿದ್ದರು. ಆದರೆ ವಿಶ್ವನಿಗೆ ಪಿತ್ಥ ನೆತ್ತಿಗೇರಿತ್ತು, ಗೋವಿಂದನ ನಂತರ ಆತನ ಸ್ಥಾನಕ್ಕೆ ತಾನೇ ಎಂಬಂತೆ ಫೋಜು ಕೊಟ್ಟ. ಅದಕ್ಕೆ ಇನ್ನೂ ಒಂದು ಕಾರಣವಿತ್ತು, ಆತ ಮಾರೇನಹಳ್ಳಿಯ ಮಾಜಿ ಕೌನ್ಸಿಲರ್ ಡಿ.ಕೃಷ್ಣಪ್ಪನವರ ಖಾಸಾ ತಮ್ಮ ಡಿ.ಮುನಿರಾಜು.


ಅದು ಗೋವಿಂದನ ಟೀಮಿನ ಕೊನೆಯ ವಿಕೆಟ್ಟು!

ಮುನಿರಾಜುಗಿತ್ತು ಸೇಡು

ತನ್ನ ಮಗ ಸುರೇಶನ ಕೊಲೆಗೆ ಅಣ್ಣನ ಮಗ ಜಗ್ಗನೇ ಕಾರಣನೆಂದು ಭ್ರಮಿಸಿದ ಮುನಿರಾಜು ಇವತ್ತಲ್ಲಾ ನಾಳೆ ಮಗನ ಕೊಲೆಗೆ ರಿವೇಂಜ್ ತಗೋತೀನಿ ಎಂದೇ ಶಪಥಗೈದು ವಿಶ್ವನನ್ನು ಬೆಳೆಸಲಾರಂಭಿಸಿದ್ದ. ದುಡ್ಡು ಕಾಸಿನಿಂದ ಹಿಡಿದು ಓಡಾಡಲು ಗಾಡಿಯನ್ನು ವಿಶ್ವನಿಗೆ ಒದಗಿಸಿಕೊಟ್ಟ. ವಿಶ್ವ ಇವತ್ತಲ್ಲಾ ನಾಳೆ ತನ್ನ ಮಗನ ಹತ್ಯೆಗೆ ರಿವೇಂಜ್ ತಗೊಳ್ಳುತ್ತಾನೆಂದೇ ಮುನಿರಾಜು ಲೆಕ್ಕಹಾಕಿದ್ದ. ಆದರೆ ವಿಶ್ವನ ಹುಚ್ಚಾಟಗಳೇ ಬೇರೆಯಿತ್ತು, ಹೊತ್ತುಗೊತ್ತಿಲ್ಲದೆ ಗಾಂಜಾ ಹೊಡೆಯುತ್ತಿದ್ದ. ಮಟಮಟ ಮಧ್ಯಾಹ್ನವೇ ಕುಡಿದು ತಟ್ಟಾಡುತ್ತಿದ್ದ. ತಾನು ಜಗ್ಗನ ಕಡುವೈರಿ ಎಂದು ಪೋಜು ಕೊಟ್ಟು ದೀಲುಪಾಲು ಮಾಡಿ ರೊಕ್ಕ ಗಳಿಸುವುದು ಆತನ ತಂತ್ರವಾಗಿತ್ತು, ಫೀಲ್ಡಿಗೆ ಬೇಕಾದ ಚಾಕಚಕ್ಯತೆ, ಹುಷಾರಿ, ನಾಯಕತ್ವದ ಗುಣ ಯಾವುದೂ ಇರಲಿಲ್ಲ.


ವಿಶ್ವ ಅಂಡ್ ಗ್ಯಾಂಗ್

ವಿನಾಕಾರಣ ರೌಡಿಗಿರಿಯ ಹುಚ್ಚಿಗೆ ಬಿದ್ದು ತಮಿಳುನಾಡಿನ ಕೊಯಂಬತ್ತೂರಿನ ಮಾರ್ವಾಡಿಯೊಬ್ಬನ ಮಗಳ ಪ್ರಿಯಕರನನ್ನು ಕೊಂದು ಹಾಕಿದ. ಅದೂ ಕೂಡ ಮೆಂಟಲ್ ಪ್ರಕಾಶ ಮತ್ತು ಗೊರಿಲ್ಲಾ ಸೇರಿಕೊಂಡು ಮಾಡಿದ ಹತ್ಯೆಯಾಗಿತ್ತೇ ಹೊರತು ವಿಶ್ವ ಅದರಲ್ಲಿ ಕಾಟಾಚಾರಕ್ಕೆಂಬಂತೆ ಭಾಗವಹಿಸಿದ್ದ. ತಿಮ್ಮೇನಹಳ್ಳಿ ತೊರೆದು ದಾಸರಹಳ್ಳಿಗೆ ಬಂದ ಮೇಲಾದರೂ ಸುಧಾರಿಸಬೇಕಿತ್ತು, ಆದರೆ ವಿಜಯನಗರದ ಕಾಂಗ್ರೆಸ್ ಮತ್ತು ಬಿಜೆಪಿ ಹಣಾಹಣಿ ಆತನನ್ನು ಸೋಮಣ್ಣನ ವಿರೋಧಿ ಪಾಳಯದತ್ತ ಆಕರ್ಷಿಸಿತು. ಸೋಮಣ್ಣ ಮತ್ತು ಲೇಔಟ್ ಕೃಷ್ಣಪ್ಪರ ಮಧ್ಯದ ಜಿದ್ದಾಜಿದ್ದಿಯಲ್ಲಿ ಒಂದಷ್ಟು ದೋಚಿಕೊಳ್ಳುವ ವಿಶ್ವನ ದುರಾಶೆಗೆ ಕೈಜೋಡಿಸಿದವನು ಮತ್ತೊಬ್ಬ ಘಾತಕಿ ಸೀರ್‍ಝುರ್ ಹೇಮಂತ.


ಜಗದೀಶ

ಮೊನ್ನೆ ಪಾಲಿಕೆ ಚುನಾವಣೆಯಷ್ಟೇ ಅಲ್ಲ, ಅದಕ್ಕೂ ಹಿಂದೆ ನಡೆದ ಉಪಚುನಾವಣೆಯಲ್ಲಿ ಕೃಷ್ಣಪ್ಪನವರ ಪುತ್ರ ಪ್ರಿಯಾಕೃಷ್ಣರ ಪರ ಕೈಗಾರಿಕಾನಗರ ಮತ್ತು ದಾಸರಹಳ್ಳಿ ವಾರ್ಡುಗಳಲ್ಲಿ ಕಾಂಗ್ರೆಸ್ ಪರ ಆರ್ಭಟಿಸಿದ್ದೇ ವಿಶ್ವ ಮತ್ತು ಸೀರ್‍ಝುರ್ ಹೇಮಂತ. ಸೋಮಣ್ಣನ ಪರ ದಾಸರಹಳ್ಳಿಯ ಪಾರುಪತ್ತೆ ವಹಿಸಿಕೊಂಡಿದ್ದ ರಾಗಿ ಮಿಷಿನ್ ಕಿಟ್ಟಿ ಒಂದಾನೊಂದು ಕಾಲಕ್ಕೆ ಲೇಔಟ್ ಮಂಜನ ಬಲಗೈಯಂತಿದ್ದವನು. ಆವತ್ತು ಮಂಜನನ್ನು ಕೊಂದ ತಿಮ್ಮೇನಹಳ್ಳಿ ಗೋವಿಂದನ ಜೊತೆಗೆ ವಿಶ್ವನೂ ಸಾತುಕೊಟ್ಟಿದ್ದ.

ಕೇಬಲ್ ಶ್ರೀಧರ

ಮೊದಲೇ ಜಿದ್ದಿತ್ತಲ್ಲ- ಎಲೆಕ್ಷನ್ನಿನ ದಿನ ಕಾಂಗ್ರೆಸ್ ಪರ ವಿಶ್ವ ಎಂಥಾ ಆರ್ಭಟಕ್ಕಿಳಿದನೆಂದರೆ; ದಾಸರಹಳ್ಳಿಯ ವೀರಭದ್ರೇಶ್ವರ ಸ್ಕೂಲಿನ ಬೂತನ್ನೂ ಬಿಜೆಪಿ ಪರ ಆಕ್ರಮಿಸಿಕೊಂಡಿದ್ದ ರಾಗಿಮಿಷಿನ್ ಕಿಟ್ಟಿಯನ್ನು ವಿಶ್ವ ಪೊಲೀಸರೆದುರೇ ಅಟ್ಟಾಡಿಸಿಬಿಟ್ಟ. ಕಿಟ್ಟಿಯ ಹುಡುಗರಿಗೂ ವಿಶ್ವನಿಂದ ಒದೆ ಬಿತ್ತು. ಆತನಕ ಮಾರೇನಹಳ್ಳಿ ಜಗ್ಗನಿಗಷ್ಟೇ ವಿಶ್ವ ರೌಂಡಿಂಗ್ ಮಾಡುತ್ತಿದ್ದಾನೆಂಬುದು ಈಗ ವ್ಯತಿರಿಕ್ತವಾಗಿ ಸೋಮಣ್ಣನ ಶಿಷ್ಯ ಕಿಟ್ಟಿಯ ವಿರುದ್ಧ ತಿರುಗಿತ್ತು, ಚುನಾವಣೆ ಮುಗಿದು ಇನ್ನೇನು ಮತ ಎಣಿಕೆ ಶುರುವಾಯಿತೆನ್ನುವ ಹೊತ್ತಿಗೆ ಇದೇ ದಾಸರಹಳ್ಳಿಯ ಮತ್ತೊಬ್ಬ ಘಾತಕಿ ಕೇಬಲ್ ಶ್ರೀಧರನಿಗೂ ವಿಶ್ವನಿಗೂ ಘರ್ಷಣೆ ಭುಗಿಲೆದ್ದಿತು. ಇನ್ನೇನು ಸೋಮಣ್ಣ ಗೆದ್ದೇಬಿಟ್ಟ ಎಂದು ಕೇಬಲ್ ಶ್ರೀಧರನ್ ಗ್ಯಾಂಗ್ ಪಟಾಕಿ ಹೊಡೆಯುತ್ತಿದ್ದರೆ ವಿಶ್ವ ತನ್ನ ದಂಡೆತ್ತಿದ್ದೇ ಶ್ರೀಧರನ ಅಡ್ಡೆಗೇ ನುಗ್ಗಿ ಅವಾಜು ಬಿಟ್ಟ. ಆವತ್ತು ವಿಶ್ವನ ಪೌರುಷ ಕಂಡಿದ್ದೇ ಶ್ರೀಧರ ಜಾಗ ಖಾಲಿ ಮಾಡಿದ್ದ, ಇನ್ನೂ ಮತ ಎಣಿಕೆಯೇ ಪೂರ್ತಿಯಾಗದೆ ಸೋಮಣ್ಣ ಪರ ಪಟಾಕಿ ಹೊಡೆದ ಶ್ರೀಧರನಿಗೆ ಸೋಮಣ್ಣ ಸೋತ ಮುಖಭಂಗವಾದರೆ ಇನ್ನೊಂದೆಡೆ ಎಲ್ಲಿಂದಲೋ ಬಂದ ವಿಶ್ವ ತನ್ನ ಅಡ್ಡೆಗೇ ನುಗ್ಗಿ ಹಾವಳಿಯಿಟ್ಟ ಅವಮಾನ.

ಕೇಬಲ್ ಶ್ರೀಧರ್ ಉರ್ಫ್ ಕೆ.ಎಂ.ಶ್ರೀಧರ ಪಳಗಿದ ಘಾತಕಿ. ಮೊದಲು ನಡೆದ ತಮ್ಮಯ್ಯನ ಹತ್ಯೆ, ಆನಂತರದ ಮಚ್ಚನ ಹತ್ಯೆಯಲ್ಲೂ ಪರೋಕ್ಷವಾಗಿ ಪಾತ್ರ ವಹಿಸಿದಾತ. ಜೊತೆಗೆ ಕಾಮಾಕ್ಷಿಪಾಳ್ಯದ ಗೂಳಿ ಬಸವ ಮತ್ತು ಧರಣಿಗೆ ಪರಮಾಪ್ತ, ವಿಶ್ವನ ಮತ್ತೊಬ್ಬ ದುಷ್ಮನ್ ರಾಗಿಮಿಷಿನ್ ಕಿಟ್ಟಿ ಕೂಡ ಶ್ರೀಧರನಿಗೆ ಆತ್ಮೀಯನೆ. ಇಬ್ಬರೂ ಬಿಜೆಪಿ ಮತ್ತು ಸೋಮಣ್ಣನ ಖಾಸಾ ಶಿಷ್ಯರು. ಸೋಮಣ್ಣನ ರಾಜಕೀಯ ವೈರಿ ಕಾಂಗ್ರೆಗಳ ಪರವಹಿಸಿ ವಿಶ್ವ ತಮಗೆ ಹಾವಳಿಯಿಡುತ್ತಿದ್ದನ್ನು ಸುಲಭಕ್ಕೆ ಬಿಟ್ಟು ಬಿಡುವವರಲ್ಲ.

ಚಿಕ್ಕಚೈನಾನ ಕೊಲೆ

ಇದಾಗಿ ಮೂರೇ ತಿಂಗಳಿಗೆ ವಿಶ್ವ ಮತ್ತೊಂದು ಅನಾಹುತಕ್ಕೆ ಕೈಯಿಟ್ಟ. ಗಾಂಜಾ ಹೊಡೆದು ಎಂ.ಸಿ.ಲೇಔಟ್ಟಿನಲ್ಲಿ ಅಡ್ಡೆ ಹಾಕುತ್ತಿದ್ದ ದೊಡ್ಡ ಚೈನಾ ಎಂಬ ಹುಡುಗನೊಬ್ಬನನ್ನು ಹಿಡಿದು ಬಡಿದ. ಈ ದೊಡ್ಡ ಚೈನಾನ ತಮ್ಮನೇ ಚೋಳೂರು ಪಾಳ್ಯದ ಸಂಜಯ್ ಅಲಿಯಾಸ್ ಚಿಕ್ಕಚೈನಾ. ಎಲ್ಲೆಂದರಲ್ಲಿ ಹಾವಳಿಯಿಡುತ್ತಿದ್ದ ವಿಶ್ವನಿಗೊಂದು ಶಾಸ್ತಿ ಮಾಡುವ ಲೆಕ್ಕ ಹಾಕಿಯೇ ಸಂಜಯ್ ಪಡ್ಡೆ ಹುಡುಗರದೊಂದು ಗ್ಯಾಂಗ್ ಕಟ್ಟಿ ವಿಶ್ವನ ಕಣ್ಣಿಗೆ ಕಾರದ ಪುಡಿ ಎರಚಿದ್ದೇ ಕತ್ತರಿಸಿಬಿಟ್ಟ.

ಒದೆ ತಿಂದು ಆಸ್ಪತ್ರೆ ಸೇರಿದ ವಿಶ್ವನನ್ನು ವಿಜಯನಗರದ ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ಆಸ್ಪತ್ರೆಯಿಂದಲೇ ಎಳೆದೊಯ್ದು ಜೈಲಿಗೆ ಹಾಕಿದ್ದರು. ಒಂದೇ ವಾರಕ್ಕೆ ಜೈಲಿಂದ ಹೊರಬಿದ್ದ ವಿಶ್ವ 2010ರ ಆಗಸ್ಟ್ 14ರಂದು ಸಂಜಯ್‌ನನ್ನು ಆತನ ಎಂ.ಸಿ.ಲೇಔಟಿನ ಮನೆಯಿಂದಲೇ ಕಿಡ್ನಾಪ್ ಮಾಡಿ, ಪೀಣ್ಯದ ಹಳೇ ಕಟ್ಟಡವೊಂದಕ್ಕೆ ಕರೆದೊಯ್ದು ಚಿತ್ರಹಿಂಸೆ ನೀಡಿ ಕೊಂದು ಬಿಟ್ಟ.

ಹೀಗೆ ಕಾಲೇಜು ವಿದ್ಯಾರ್ಥಿ ಸಂಜಯ್ ಅಲಿಯಾಸ್ ಚಿಕ್ಕಚೈನಾನನ್ನು ಹಿಂಸಿಸಿ ಕೊಲ್ಲುವುದಕ್ಕೂ ಮುನ್ನ ವಿಶ್ವ ಮತ್ತೊಂದು ಅನಾಹುತವೆಸಗಿದ್ದ. ಅದು ಪಾಲಿಕೆ ಚುನಾವಣೆ.

ನ್ನ ಕೈಗಾರಿಕಾನಗರ ವಾರ್ಡ್ ಹೊಸದಾಗಿ ರಾಜ್ ರ್ ವಾರ್ಡಿಗೆ ಆದಕ್ಕೆ ಬಿಜೆಪಿಯಿಂದ ನಿಂತಿದ್ದು ಗಿದಾಕ ಗಂಗಭೈರಯ್ಯ. ಕಾಂಗ್ರೆಸ್ಸಿನ ರಮೇಶ ಪರ ದ ವಿಶ್ವ ಪ್ರಚಾರಕ್ಕೆಂದು ಬಂದಿದ್ದ ಬಿಜೆಪಿಯ ಗಂಗ ಯ್ಯನನ್ನು ನಡುರಸ್ತೆಯಲ್ಲೇ ಅಟಕಾಯಿಸಿಕೊಂಡು ..... ಗಾಂ.... 'ಇನ್ನೊಂದು ಸಲ ನಮ್ಮ ಏರಿಯಾಕ್ಕೆ ಾಡದು. ಬಂದೆ ಅಂದ್ರೆ ನಿನ್ನ ಕಾಲೇ 'ಇರೋಲ್ಲ....' ನಡುಗಿದ ಗಂಗಭೈರಯ್ಯ ಎದ್ದುಬಿದ್ದು ಓಡಿಹೋಗಿದ್ದ ಮತ್ತು ವಿಶ್ವನ ಹಾವಳಿಯ ವಿರುದ್ಧ ಥಂಡಾ ಹೊಡೆದ ಭೈರಯ್ಯ ತನ್ನ ಅಳಿಯ ತಿರುಮಲ ಬಾರ್ ರಮೇಶನ ಲಕ ಮುಲಾಮನ ಕಾಲಿಗೆ ಬಿದ್ದು ವಿಶ್ವನನ್ನು ಾಗಿಸಿದ್ದ. ಚಿಕ್ಕಬೈನಾ ಅಲಿಯಾಸ್ ಸಂಜಯ್‌ನನ್ನು ದು ವಿಶ್ವ ಜೈಲಿಗೆ ಹೋದಾಗಲೇ ಆತನ ದೋಸ್ತಿ ರ್ ಹೇಮಂತನೂ ಜೈಲುಪಾಲಾದ. ಹಾಗೇ ಪಾಲಾದ ವಿಶ್ವ ತಾನು ಕೊಲೆಯಾಗುವುದಕ್ಕೂ ಹತ್ತು ಳ ಹಿಂದೆಷ್ಟೇ ಜೈಲಿಂದ ಹೊರಬಿದ್ದಿದ್ದ. ಬಂದವನೇ ಸ್ಥಳಕ್ಕೆ ಹೋಗಿ ಮುಡಿಕೊಟ್ಟು ಬಂದ. ಆದರೆ ವಿರೋಧಿ ಬಿಜೆಪಿ ಪಾಳಯವಿತ್ತಲ್ಲ–ಅದರ ಲೆಕ್ಕಾ ನೇ ಬೇರೆಯಿತ್ತು.

ಕೆಂಗೇರಿ ಮುನಿಯ

ಾಗಿ ಮಿಷಿನ್ ಕಿಟ್ಟಿ ಮತ್ತು ಕೇಬಲ್ ಶ್ರೀಧರ್ ೂ ಸೋಮಣ್ಣನಿಗೆ ಇನ್ನಷ್ಟು ಆತ್ಮೀಯರಾಗಿದ್ದರೆ, ಕೌನ್ಸಿಲರ್ ಗಂಗಭೈರಯ್ಯ ಲೆಕ್ಕಪತ್ರ, ಸ್ಥಾಯಿ ಸಮಿತಿಗೆ ನಾಗಿ ರಾಗಿ ಮಿಷಿನ್ ಕಿಟ್ಟಿ ನಡೆಸುತ್ತಿದ್ದ ಕಾರ್ಪೋರೇಷನ್ ತ್ರಾಕ್ಟ್ ದ್‌ಂಧೆಗೆ ತನ್ನ ಮಗ ಉಮೇಶನನ್ನೇ ದಾರನನ್ನಾಗಿ ನೇಮಿಸಿದ್ದ ಬಿಜೆಪಿಯ ವಿರುದ್ಧ ಸೀಝರ್ ಸಂತ ಮತ್ತು ವಿಶ್ವ ತಲೆ ಎತ್ತಿದ್ದು ಕೇವಲ ಭೈರಯ್ಯನಿಗಷ್ಟೇ ಅಲ್ಲ ಸೋಮಣ್ಣನಿಗೂ ನುಂಗಲಾಗದ ುತ್ತಿತ್ತು.

ಹೇಗೂ ಮಾರೇನಹಳ್ಳಿ ಜಗ್ಗನ ತಂಟೆಗೆ ತಾನು ಹೋಗು ಾದ್ದರಿಂದ ಕೇಬಲ್ ಶ್ರೀಧರನಾಗಲಿ, ಕಿಟ್ಟಿಯಾಗಲಿ ನ್ನ ಮುಗಿಸುವ ಮಟ್ಟಕ್ಕೆ ಯೋಚಿಸಲಾರರೆಂದೇ ವಿಶ್ವ ಹಾಕಿದ್ದ. ಕಾಮಾಕ್ಷಿಪಾಳ್ಯದ ಗೂಳಿ ಬಸವ ಮತ್ತು ಿ ಬೇರೆ ಶ್ರೀಧರನಿಗೆ ಆತ್ಮೀಯರಾಗಿರುವುದರಿಂದ ಗೂ ನನಗೂ ಪರಿಚಯವಿರುವ ಕಾರಣಕ್ಕೆ ಶ್ರೀಧರ ಾಹಸಕ್ಕೆ ಕೈಹಾಕಲಾರ ಎಂದೇ ಭಾವಿಸಿದ್ದ.

ಈ ಮಧ್ಯೆ ವಿಶ್ವ ಸಿಕ್ಕಾಪಟ್ಟೆ ಗಾಂಜಾ ಮತ್ತು ಸಂಜೆ ಗುತ್ತಿದ್ದಂತೆ ಎಣ್ಣೆ ಹಾಕುತ್ತಿದ್ದ. ಗಾಂಜಾ ನಶೆಯಲ್ಲಿ ಕ್ಕ ಹುಡುಗರನ್ನು ಪೀಡಿಸುತ್ತಿದ್ದ. ವಾರದ ಹಿಂದಷ್ಟೇ ರಬಾವಿ ಮಲ್ಲತ್ತಹಳ್ಳಿಯ ಸೈಟು ಡೀಲೊಂದರಲ್ಲಿ ುಕೇಳಿದ್ದ ತನ್ನ ರೈಟ್‌ಹ್ಯಾಂಡ್ ಮುನಿಯನನ್ನು ಹಿಡಿದು ದ. ಅಷ್ಟೇ ಆಗಿದ್ದರೆ ಮುನಿಯ ತೆಪ್ಪಗಿರುತ್ತಿದ್ದನೇನೊ. ೀ ಮುನಿಯನನ್ನು ಹಿಡಿದು ಬಡಿದ ವಿಶ್ವ ಗಾಂಜಾ ನಲ್ಲಿ ಆತನ ಮನೆಗೇ ನುಗ್ಗಿ ಆತನ ಅಕ್ಕನ ಮೇಲೆ ಾಡಿದ. ತನ್ನೆದುರೇ ತನ್ನ ಅಕ್ಕನ ಮೇಲೆ ಕೈಮಾಡಿದ್ದೂ ದೆ ಆಕೆಯನ್ನು ತುಚ್ಛವಾಗಿ ಪೀಡಿಸಿದ ವಿಶ್ವನನ್ನು ಆ ಉಪಾಯವಾಗಿ ಸಾಗಹಾಕಿದ್ದಾನೆ ಮುನಿಯ.

ಜೊತೆಗಿದ್ದವನೇ

ಯಾವ ಘಾತಕ ತಾನೇ ತನ್ನ ಅಕ್ಕನ ಮೇಲೆ ಾಡಿದವನನ್ನು ಬಿಟ್ಟು ಬಿಡಲು ಸಾಧ್ಯ? ಆವತ್ತೇ ನಿಯ ನಿರ್ಧರಿಸಿರಬೇಕು. ಮರುದಿನ 'ಇನ್ನಾವುದೋ ಡ್ ಡೀಲ್ ಇದೆಯೆಂದೂ ನಿನಗೆ ಅದರಲ್ಲಿ ಅರ್ಧಪಾಲು ುತ್ತೇನೆಂದೂ ಒಂದಷ್ಟು ಲಾಂಗುಗಳು ಬೇಕು ಎಂದೂ ನಿಯ ನಂಬಿಸಿದ್ದಾನೆ. ಫೆಬ್ರವರಿ 11ರ ಬೆಳಿಗ್ಗೆ 9.30ರ ತ್ತಿಗೆ ಮಾರುತಿ 800 ಕಾರಿನಲ್ಲಿ ನಾಲ್ಕೈದು ಹುಡುಗರನ್ನು ಕೊಂಡು ವಿಶ್ವನ ಮನೆಗೇ ಹೋಗಿ ಲಾಂಗುಗಳನ್ನು ಕೊಂಡಿದ್ದಾನೆ. ಇನ್ನೇನು ಮುನಿಯ ಡೀಲಿಗೆ ರಟಿರಬೇಕೆಂದು ಮಹಡಿ ಇಳಿದುಬರುತ್ತಿದ್ದಂತೆ ವಿಶ್ವನ ಮುನಿಯನ ಕಾರು ಬಂದು ನಿಂತಿದೆ. ಯಾಕೋ ್ನ ಹೋಗಿಲ್ಲಾ? ಎಂದಿದ್ದಾನೆ ವಿಶ್ವ. ಪಾಪದ ಕೊಡ ಬಿ ಬಂದಿತ್ತೋ ಅಥವಾ ಆಯುಸ್ಸೇ ಮುಗಿದಿತ್ತೋ– ಅಲ್ಲಾ ಗುರು ನೀನು ಮಾಡಿದ್ದು ತಪ್ಪಲ್ವಾ? ಎಂದಿದ್ದಾನೆ ನಿಯ. ಏನು ಎಂದು ಕೇಳುವ ಮೊದಲೇ ತಪ್ಪಲ್ವಾ? ದು ಎರಡನೇ ಬಾರಿ ಪ್ರಶ್ನಿಸಿ ಮೂರನೇ ಬಾರಿ ಮತ್ತೆ ಲ್ವಾ? ಎಂದು ಪ್ರಶ್ನಿಸುತ್ತಿದ್ದಂತೆ ಮುನಿಯನ ಕೈಲಿದ್ದ ಗು ವಿಶ್ವನ ತಲೆಯನ್ನು ಸೀಳಿಹಾಕಿದ. ನಾಲ್ಕೂ ದಿಕ್ಕಿನಿಂದ ದೊಂದಾಗಿ ಮನು ಘಾಕೃತಿಗಳು ತನ್ನನ್ನು ಸುತ್ತುವರಿಯು ವುದು ಏಕೆಂದು ಅರ್ಥವಾಗುವ ಮೊದಲೇ ವಿಶ್ವ ಕ್ಕೆ ಕುಸಿದಿದ್ದಾನೆ. ರೌಡಿಯಾಗುವ ಹುಚ್ಚು, ವಿನಾಕಾರಣದ ್ಸಿ ಅವಿವೇಕದ ಸೊಕ್ಕು, ಅಪರಿಮಿತ ಗಾಂಜಾ ಮತ್ತು ರಿಮಿತ ಕುಡಿತ ಎಲ್ಲವೂ ಸೇರಿ ವಿಶ್ವನನ್ನು ತಿಂದು ಗಿತ್ತು ತಲೆಯೋ ನಿಲ್ಲದವನಿಗೆ ಆತನ ಮುಷ್ಠಿ ಧಿಮಾಕಿಗಿಂತ ್ರ ಶತ್ರುಗಳು ಬೇಕೆ?ರೌಡಿಯಾಗುವ ಹುಚ್ಚು, ವಿನಾಕಾರಣದ ್ಸಿ ಅವಿವೇಕದ ಸೊಕ್ಕು, ಅಪರಿಮಿತ ಗಾಂಜಾ ಮತ್ತು ರಿಮಿತ ಕುಡಿತ ಎಲ್ಲವೂ ಸೇರಿ ವಿಶ್ವನನ್ನು ತಿಂದು ಗಿತ್ತು ತಲೆಯೋ ನಿಲ್ಲದವನಿಗೆ ಆತನ ಮುಷ್ಠಿ ಧಿಮಾಕಿಗಿಂತ ಶತ್ರುಗಳು ಬೇಕೆ?

–ರಾ. ಸೋಮನಾಥ್

ನಾನೇಕೆ ತಂದೆಯನ್ನು ಕೊಂದೆ?

ಹತ ಎಸ್ಐ ಮಗನ ಮನದಾಳದ ಮಾತುಗಳು



ಅಲ್ಲಯ್ಯಾ; ಅಕ್ಕನ ಮದುವೆ ಮಾಡಲಿಲ್ಲ ಎಂದು ತಂದೆಯನ್ನೇ ಕೊಂದೆಯಲ್ಲಾ, ಈಗ ನಿನ್ನಂಥ ಕೊಲೆಗಡುಕ ತಮ್ಮನ ಕಾರಣಕ್ಕೆ ನಿನ್ನಕ್ಕನನ್ನು ಯಾರು ಮದುವೆಯಾಗ್ತಾರೆ? ನಿನ್ನಪ್ಪ ದುಷ್ಟ ಸರಿ. ಮಗಳ ಮದುವೆ ಮಾಡದೆ ತುಚ್ಛವಾಗಿ ಹೀಯಾಳಿಸಿದ್ದಕ್ಕೆ ಆತನಿಗೆ ಕ್ಷಮೆಯಿಲ್ಲ ಅನ್ನೋದೂ ಸರಿ. ಹಾಗೊಂದು ಪಕ್ಷ ನಿನ್ನಪ್ಪ ಯಾವತ್ತೋ ಸತ್ತು ಹೋಗಿದ್ರೆ ನೀನೇ ನಿಂತು ಅಕ್ಕನ್ನ ಮದುವೆ ಮಾಡ್ತಿರಲಿಲ್ವಾ? ಈಗ ಅಪ್ಪನನ್ನೇ ಕೊಂದ್ಯಲ್ಲಾ ತಮ್ಮನೇ ಅಪ್ಪನನ್ನು ಕೊಂದವನು ಅಂತ ನಿನ್ನಕ್ಕನ್ನ ಯಾರು ಮದುವೆಯಾಗ್ತಾರೆ? ಅಪ್ಪ ಮಾಡಿದ್ದಕ್ಕಿಂತಲೂ ಹೆಚ್ಚು ಕೆಡುಕು ನಿನ್ನಿಂದಲೇ ಆಯ್ತಲ್ಲೋ....?

ಹಾಗಂತ ಸುಬ್ರಹ್ಮಣ್ಯನಗರದ ಪೊಲೀಸ್ ಇನ್ಸ್‌ಪೆಕ್ಟರ್ ಎಸ್. ಶ್ರೀಧರ್ ತನ್ನೆದುರು ಕೈಕಟ್ಟಿ ನಿಂತಿದ್ದ ಆ ಯುವಕನನ್ನುದ್ದೇಶಿಸಿ ಹೇಳುತ್ತಿದ್ದರೆ, ಆತನ ಕಣ್ಣುಗಳಿಂದ ನೀರು ತೊಟ್ಟಿಕ್ಕುತ್ತಿತ್ತು. 26 ಹರೆಯದ ಆ ಸುಂದರರೂಪಿಯ ಹೆಸರು ಯಶವಂತ್. ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಮೊನಾಲಿಸಾ' ಚಿತ್ರದಲ್ಲಿ ಯಾವುದೋ ಪಾತ್ರವೊಂದರಲ್ಲಿ ನಟಿಸಿದ್ದಾನಂತೆ. ಮೊಬೈಲ್ ಕಂಪೆನಿಯಿಂದ ಉದ್ಯೋಗಿ. ಇತ್ತೀಚೆಗಷ್ಟೇ ನೆಲಮಂಗಲದ ಯುವತಿಯನ್ನು ಪ್ರೀತಿಸಿ ಮದುವೆಯಾಗಿದ್ದಾನೆ. ಅದೇನು ಕೆಟ್ಟ ಗಳಿಗೆಯೋ ತಂದೆಯನ್ನೇ ಕೊಂದಿದ್ದಾನೆ.



ಹೌದು ಸಾರ್, ಇದು ಮೊದಲೇ ನನ್ನ ತಲೆಗೆ ಹೊಳೆದಿದ್ರೆ ತಂದೆಯನ್ನು ನಾನು ಕೊಲ್ತಾನೇ ಇರಲಿಲ್ಲ. ಅಪ್ಪನ ಮೇಲೆ ಸಿಟ್ಟಿಗೆ ಬಿದ್ದು ಅಕ್ಕನ ಬದುಕನ್ನ ನಾನೇ ಹಾಳು ಮಾಡಿಬಿಟ್ಟೆ.....!

ಅಕ್ಕನಿಗೊಂದು ಬದುಕು ಕಲ್ಪಿಸಲು ಹೋಗಿ ಅಪ್ಪನನ್ನೇ ಕೊಂದು ತನ್ನ ಭವಿಷ್ಯಕ್ಕೂ ಕಲ್ಲು ಹಾಕಿಕೊಂಡ ಯಶವಂತ್‌ನ ದುಡುಕು ಬುದ್ಧಿ ಅಂತಿಮವಾಗಿ ಆತನ ಅಕ್ಕನ ಭವಿಷ್ಯಕ್ಕೂ ಕೊಳ್ಳಿಯಿಟ್ಟಿದೆ. ವಿಧಿ ವಿಪರೀತವೋ ಪ್ರಾರಬ್ಧ ಕರ್ಮವೋ ಒಂದೇ ಒಂದು ದುಡುಕು ನಿರ್ಧಾರ ಅರ್ಧ ಡಜನ್ ಬದುಕನ್ನು ಹಾಳುಗೆಡವಿದೆ. ಇಂಥದೊಂದು ದುರಂತದ ಮೂಲ ಪುರುಷನೇ ಹತ ಎಸ್.ಐ. ವೀರಭದ್ರಯ್ಯ.

ಮುಖ್ಯಮಂತ್ರಿ ಯಡಿಯೂರಪ್ಪನವರ ಭದ್ರತಾ ವಿಭಾಗದಲ್ಲಿ ಎಸ್ಐ ಆಗಿದ್ದ ವೀರಭದ್ರಯ್ಯ ಮೂಲತಃ ಮಾಗಡಿ ತಾಲ್ಲೂಕು ಅಜ್ಜನಹಳ್ಳಿಯವನು. 1974 ರಲ್ಲಿ ಪೊಲೀಸ್ ಪೇದೆಯಾಗಿ ನೇಮಕಗೊಂಡ. ಜಾತಿಯಲ್ಲಿ ಕುರುಬ. ಅಷ್ಟೇ ನಿಂತು ಶಿರಾ ತಾಲ್ಲೂಕಿನ ಶಿವಶಾಂತಮ್ಮನನ್ನು ತಂದು ಮದುವೆ ಮಾಡಿದ್ದ. ಅದೇನು ವಿಕೃತಿಯೋ 1984 ರಲ್ಲಿ ಶಿವಶಾಂತಮ್ಮನಿಗೆ ಸೌಮ್ಯ ಎಂಬ ಹೆಣ್ಣು ಮಗುವಾದದ್ದೇ ಬಾಣಂತನಕ್ಕೆಂದು ಬಂದಿದ್ದ ಆಕೆಯ ತಂಗಿ ಅಂದರೆ ನಾದಿನಿ ಜಯಮ್ಮನನ್ನೇ ತೃಷೆಗೆ ಬಳಸಿಕೊಂಡ.

ಸದ್ಯ ಕೊಡಿಗೆಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ಆಗಿರುವ ಶಿವಶಾಂತಮ್ಮ ಅದೆಷ್ಟು ಕಣ್ಣೀರಿಟ್ಟಳೋ, ಏನೆಲ್ಲಾ ನೋವು ತಿಂದಳೋ ಕೊನೆಗೂ ವೀರಭದ್ರಯ್ಯ ನಾದಿನಿ ಜಯಮ್ಮನನ್ನು ಬಿಡಲೇ ಇಲ್ಲ. ಅಕ್ಕ ಮೊದಲ ಪತ್ನಿ ತಂಗಿ ಎರಡನೇ ಹೆಂಡತಿ. ಆನಂದರಾವ್ ಸರ್ಕಲ್ಲಿನಲ್ಲಿ ಇಲಾಖೆಯಿಂದ ಮಂಜೂರಾಗಿದ್ದ ಮನೆಯಲ್ಲೇ ಅಕ್ಕತಂಗಿಯರಿಬ್ಬರೂ ಸಂಸಾರ ಸಾಗಿಸಬೇಕಾಯ್ತು.

ವಿಕಟವೆಂದರೆ ಹೀಗೆ ಅಕ್ಕತಂಗಿಯರಿಬ್ಬರನ್ನೂ ಒಂದೇ ಮನೆಯಲ್ಲಿಟ್ಟು ಸಂಸಾರಕ್ಕಿಳಿದ ವೀರಭದ್ರಯ್ಯ ಇದಾಗಿ ವರ್ಷಕ್ಕೇ ಅಂದರೆ 1985 ರ ಹೊತ್ತಿಗೆ ಮೈಸೂರಿನ ಇಂದ್ರಮ್ಮ ಅಲಿಯಾಸ್ ಇಂದ್ರಾ ಎಂಬಾಕೆಯನ್ನು ಗಪ್ ಚುಪ್ಪಾಗಿ ಮದುವೆಯಾಗಿದ್ದ. ಈ ಇಂದ್ರಾ ಎಂಬಾಕೆಯನ್ನು ವೀರಭದ್ರಯ್ಯನಿಗೆ ಪರಿಚಯಿಸಿಕೊಟ್ಟು ತಾನೇ ನಿಂತು ಮದುವೆಯನ್ನೂ ಮಾಡಿಕೊಟ್ಟವಳು ಆತನ ಸ್ವಂತ ಅಕ್ಕ ರತ್ನಮ್ಮ!

ಹೆಂಡತಿಯಿದ್ದೂ ಆಕೆಯ ತಂಗಿಯನ್ನು ತೃಷೆಗೆ ಬಳಸಿಕೊಂಡಿದ್ದು ನಂತರ ಆಕೆಯನ್ನೂ ಮನೆಯಲ್ಲಿಟ್ಟುಕೊಂಡು ಅದೂ ಸಾಲದೆಂಬಂತೆ ಮೂರನೇ ಮದುವೆಗೆ ಅಣಿಯಾದದ್ದು, ತಮ್ಮನ ಇಂಥ ವಿಕೃತಿ ಕಂಡೂ ಆತನಿಗೆ ತಾನೇ ನಿಂತು ಮೂರನೇ ಮದುವೆ ಮಾಡಿಸಿದ ಅಕ್ಕ ರತ್ನಮ್ಮನ ಉದ್ದೇಶ ಮತ್ತು ಮನಸ್ಥಿತಿ, ಮೊದಲೇ ಇಬ್ಬರು ಹೆಂಡರಿದ್ದೂ ಅಂಥವನನ್ನು ತಾನು ಮದುವೆಯಾಗಲು ಒಪ್ಪಿದ ಇಂದ್ರಮ್ಮನ ದುರ್ಗತಿ; ಎಲ್ಲವೂ ವಿಚಿತ್ರ ಮತ್ತು ವಿಕೃತ ಸಂಗತಿಗಳೆ.

ಮೈಸೂರಿನ ಅಕ್ಕನ ಮನೆಗೆಂದು ಪದೇಪದೇ ಬರುತ್ತಿದ್ದ ವೀರಭದ್ರಯ್ಯ ಅದೇನೆಂದು ಇಂದ್ರಮ್ಮನನ್ನು ಮೂರನೇ ಮದುವೆಯಾದನೊ, ತನ್ನ ಮೊದಲ ಪತ್ನಿ ಶಿವಶಾಂತಮ್ಮನಿಗಾಗಲಿ, ಎರಡನೇ ಪತ್ನಿ ಜಯಮ್ಮನಿಗಾಗಲಿ ಇದು ಗೊತ್ತಾಗುವುದಿಲ್ಲ ಎಂದೇ ಲೆಕ್ಕ ಹಾಕಿದ್ದ. ಸದ್ಯ ಗಾಂಧಿನಗರದಲ್ಲಿ ಮುದ್ದೆ ಮೆಸ್ ನಡೆಸುವ ಮಾದಪ್ಪನನ್ನು ತನ್ನ ತಂದೆಯೆಂದೂ ಅಕ್ಕ ರತ್ನಮ್ಮನನ್ನೇ ತನ್ನ ತಾಯಿಯೆಂದೂ ಸೋಗು ಹಾಕಿಸಿ ವೀರಭದ್ರಯ್ಯ ಮದುವೆಯಾಗಿದ್ದ.

ಮೊದಲ ಪತ್ನಿ ಶಿವಶಾಂತಮ್ಮನಿಗೆ ಸೌಮ್ಯಳ ನಂತರ ಯಶವಂತ್ ಎಂಬ ಮಗ ಹುಟ್ಟಿದ. ಅದೇ ಹೊತ್ತಿಗೆ ತಂಗಿ ಜಯಮ್ಮನಿಗೂ ಹೆಣ್ಣು ಮಗುವಾಯ್ತು. ಮುದ್ದೆ ಮಾದಪ್ಪನನ್ನೇ ತಂದೆಯೆಂದು ಅಕ್ಕ ರತ್ನಮ್ಮನನ್ನೇ ತಾಯಿ ಎಂದು ಮೈಸೂರಿ ಇಂದ್ರಾಳನ್ನು ಮದುವೆಯಾದ ಸುದ್ದಿ ಗೊತ್ತಾಗಿದ್ದೇ ತಡ ಅಕ್ಕತಂಗಿಯರಿಬ್ಬರೂ ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿ ಮನೆ ಮಾಡಿಟ್ಟಿದ್ದ ಇಂದ್ರಮ್ಮನನ್ನು ಎಳೆದೆಳೆದು ಹೊಡೆದರು. ಇಂದ್ರ ಮತ್ತು ಆಕೆಯ ಅಣ್ಣ ಸೇರಿ ಇನ್ನು ಮುಂದೆ ನಮಗೂ ವೀರಭದ್ರಯ್ಯನಿಗೂ ಸಂಬಂಧವಿಲ್ಲವೆಂದೂ ಬರೆದು ಕೊಟ್ಟು ಮನೆ ಖಾಲಿ ಮಾಡಿಬಿಟ್ಟರು. ಇದಾಗಿದ್ದು 1991 ರಲ್ಲಿ. ಆದರೆ 2003 ರಲ್ಲಿ ಇದೇ ಇಂದ್ರಮ್ಮಳಿಗೊಂದು ಹೆಣ್ಣು ಮಗುವನ್ನು ವೀರಭದ್ರಯ್ಯ ಕರುಣಿಸಿದ್ದ!




ಕ್ರಮೇಣ ಅಕ್ಕ ಶಿವಶಾಂತಮ್ಮ ಮತ್ತು ತಂಗಿ ಜಯಮ್ಮರ ವೈಮನಸ್ಯ ಹುಟ್ಟಿ ಕಿತ್ತಾಡಿ ಕೊಂಡರು. ಜಯಮ್ಮನಿಗೆ ವಿಜಯನಗರದ ಅತ್ತಿಕುಪ್ಪೆಯಲ್ಲೊಂದು ಮನೆ ಮಾಡಿ ಇಟ್ಟ ವೀರಭದ್ರಯ್ಯ ಮೂವರೂ ಹೆಂಡತಿಯರನ್ನು ಅದ್ಹೇಗೋ ನಿಭಾಯಿಸಿಕೊಂಡಿದ್ದ. ವಿಪರೀತ ಕುಡಿಯುತ್ತಿದ್ದ. ಇಂದ್ರಳನ್ನು ಕೋಣನಕುಂಟೆಯಲ್ಲಿ ಅಕ್ಕ ರತ್ನಮ್ಮನ ಜೊತೆ ಮನೆ ಮಾಡಿ ಇಟ್ಟ. ಈ ಮಧ್ಯೆ ಉಪ್ಪಾರಪೇಟೆ, ಮಹಾಲಕ್ಷ್ಮಿ ಲೇಔಟ್, ಕಲಾಸಿಪಾಳ್ಯ ಇತ್ಯಾದಿ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಕೆಲಸ ಮಾಡಿ ಮಲ್ಲೇಶ್ವರಂ ಠಾಣೆಯಲ್ಲಿ ಯಡವಟ್ಟು ಮಾಡಿಕೊಂಡು ಸಸ್ಪೆಂಡಾದ.

ಮುಂದೆ ಎಎಸ್ಐ ಆಗಿ, ಅನಂತರ ಸಬ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಗಿಟ್ಟಿಸುವ ಹೊತ್ತಿಗೆ ಬೆಂಗಳೂರಿನ ಒಂದು ಡಜನ್ ಪೊಲೀಸ್ ಠಾಣೆಗಳನ್ನು ಮುಗಿಸಿದ್ದ. ಇವೆಲ್ಲದರ ನಡುವೆಯೇ ಮಗ ಯಶವಂತ ಬೆಳೆದು ದೊಡ್ಡವನಾದ. ಮಗಳು ಸೌಮ್ಯ ಡಿಗ್ರಿ ಮುಗಿಸಿ ಟೀವಿ ಸೀರಿಯಲ್ಲುಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಲಾರಂಭಿಸಿದಳಾದರೂ ಶೂಟಿಂಗ್ ವೇಳೆ ಸಿನಿಮಾ ಮಂದಿಯ ದುರ್ವರ್ತನೆಗೆ ರೋಸತ್ತು ತನಗಿದು ಒಗ್ಗುವ ಕಸುಬಲ್ಲ ಎಂದು ನಟಿಸುವುದನ್ನೇ ನಿಲ್ಲಿಸಿಬಿಟ್ಟಳು. ಮಗ ಯಶವಂತ್ ಕೂಡ ಏರ್‌ಟೆಲ್ ಕಂಪೆನಿಯಲ್ಲಿ ಟವರ್ ಹಾಕುವ ಕೆಲಸಕ್ಕೆ ಸೇರಿದ. ನೆಲಮಂಗಲದ ಹುಡುಗಿಯೊಬ್ಬಳನ್ನು ಪ್ರೀತಿಸಿ ಮದುವೆಯನ್ನೂ ಆದ.

ಯಾವತ್ತು ಅಕ್ಕ ಸೌಮ್ಯಳಿಗೆ ವಯಸ್ಸು ಇಪ್ಪತ್ತೆಂಟಾಯಿತೋ ಮದುವೆಯ ತಯಾರಿ ಶುರುವಾಗಿದೆ. ಇದೇ ಹೊತ್ತಿಗೆ ವೀರಭದ್ರಯ್ಯ ಮುಖ್ಯಮಂತ್ರಿ ಬೆಂಗಾವಲು ಪಡೆಗೆ ನೇಮಕಗೊಂಡು ತನ್ನ ಮೂವರೂ ಹೆಂಡರೊಂದಿಗೆ ಕಿತ್ತಾಡಿಕೊಂಡು ರಾಜಾಜಿನಗರದ ನವರಂಗ್ ಟಾಕೀಸ್ ಎದುರಿಗಿದ್ದ ಶನಿಮಹಾತ್ಮನ ಗುಡಿ ಹಿಂದೆ ಪ್ರತ್ಯೇಕ ಮನೆ ಮಾಡಿ ಏಕಾಂಗಿ ವಾಸಕ್ಕಿಳಿದಿದ್ದಾನೆ. ಅದು ಆತನೇ ತಂದುಕೊಂಡ ದುರ್ಗತಿ. ಈಗಾಗಲೇ ತನ್ನ ಪತ್ನಿ, ಮಗಳು ಮತ್ತು ಮಗನ ವಿರುದ್ಧವೇ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ವೀರಭದ್ರಯ್ಯ ದೂರು ಕೊಟ್ಟಿದ್ದ ಶೇಷಾದ್ರಿಪುರಂ






ಎಸಿಪಿ ಓಂಕಾರಯ್ಯ ಕರೆದು ಹೆಂಡತಿಯರನ್ನೇನೋ ಈ ಗತಿ ಮಾಡ್ದೆ, ಆ ಮಕ್ಕಳು ಮಾಡಿದ ತಪ್ಪಾದ್ರೂ ಏನು? ಹೇಗೂ 20 ಸಾವಿರ ಸಂಬಳ ತಗೋತಿಯಾ ಮೊದಲ ಹೆಂಡ್ತಿ ಮಕ್ಕಳ ಖರ್ಚಿಗೆ 5 ಸಾವಿರ ಕೊಟ್ಟು ಎರಡನೇ ಹೆಂಡ್ತಿಗೆ ಅಂತ ಇನ್ನೈದು ಸಾವಿರ ಕೊಟ್ಟರೆ ಸಮಸ್ಯೆನೇ ಪರಿಹಾರ ಆಗುತ್ತಲ್ಲಯ್ಯಾ, ಸುಮ್ನೆ ಯಾಕೆ ಎಲ್ಲರಿಗೂ ಕಾಟ ಕೊಡ್ತೀಯಾ? ಇನ್ನೆಷ್ಟು ದಿನಾ ಅಂತ ಬದುಕ್ತೀಯಾ? ಕೊನೇಗಾಲದಲ್ಲಾದ್ರೂ ನೆಮ್ಮದಿ ಕೊಡಬಾರ್ದಾ? ಎಂದಿದ್ದಾರೆ.

ಎಸಿಪಿ ಓಂಕಾರಯ್ಯನವರ ಮಾತು ಕೇಳಿದಿದ್ರೆ ವೀರಭದ್ರಯ್ಯನಿಗೆ ಇಂಥಾ ದುರ್ಗತಿ ಬರುತ್ತಿರಲಿಲ್ಲವೇನೊ. ಜಿದ್ದಿಗೆ ಬಿದ್ದು ಎಸಿಪಿ ವಿರುದ್ಧವೇ ಮೇಲಧಿಕಾರಿಗೆ ದೂರು ಕೊಟ್ಟ. ಹಾಳಾಗಲಿ ಎಂದು ಓಂಕಾರಯ್ಯ ಕೈಚೆಲ್ಲಬಿಟ್ಟರು. ಇದೇ ಹೊತ್ತಿಗೆ ಸೌಮ್ಯಳಿಗೆ ಮೂರ್‍ನಾಲ್ಕು ಗಂಡು ಕೂಡಿ ಬಂತು. ಪ್ರತಿಯೊಬ್ಬರಿಗೂ ತಂದೆಯ ಬಗ್ಗೆಯೇ ಕೇಳಲಾರಂಭಿಸಿದಾಗ ಸಹಜವಾಗೇ ಯಶವಂತ್ ಅಪ್ಪನನ್ನು ಪ್ರಶ್ನಿಸಲಾರಂಭಿಸಿದ್ದಾನೆ. ಕನಿಷ್ಠ ಮಗಳ ಮದುವೆಗಾದರೂ ವೀರಭದ್ರಯ್ಯ ಕೈಗೂಡಿಸಬೇಕಿತ್ತು. ತಾಯಿಯ ನೆರವಿಗೆ ನಿಂತು ತನ್ನ ವಿರುದ್ಧ ಜಗಳಕಾದ ಮಗಳನ್ನೇ ಆತ ಶತ್ರು ಎಂದು ಬಗೆದಿದ್ದ.

ಒಂದಲ್ಲ ಮೂರು ಮದುವೆ ಯಾದ ತಂದೆ ಇದ್ದೂ ಇಲ್ಲದಂತಾಗಿದ್ದನ್ನೇ ಸೌಮ್ಯಳಿಗೆಂದು ಬಂದ ಗಂಡುಗಳ ಸಂಬಂಧಿಕರು ಪ್ರಶ್ನಿಸಿದ್ದಾರೆ. ಅಂತಿಮವಾಗಿ ತುಮಕೂರಿನ ಅನುಕೂಲಸ್ಥ ಕುಟುಂಬವೊಂದರ ಸಭ್ಯ ವರನೊಬ್ಬನ ಜೊತೆ ಸೌಮ್ಯಳ ಜಾತಕ ಕೂಡಿಬಂದಾಗ ತಾಯಿ ಶಿವಶಾಂತಮ್ಮ ಕನಿಷ್ಠ ಮಗಳ ಮದುವೆಯ ಕಾರಣಕ್ಕಾದರೂ ಮನೆಗೆ ಬಂದು ಹೋಗೆಂದು ಮಗನ ಕೈಲಿ ಹೇಳಿಕಳಿಸಿದ್ದಾಳೆ. ಇದನ್ನೇ ತಂದೆಗೆ ತಂದು ಹೇಳಿದ ಯಶವಂತ್‌ಗೆ ಅಪ್ಪ ವೀರಭದ್ರಯ್ಯ ಯಾವ ರೀತಿ ಹೀಯಾಳಿಸಿದನೆಂದರೆ; 'ಅವಳನ್ನು ನಾನೇನಯ್ಯಾ ನಿಂತು ಮದುವೆ ಮಾಡೋದು? ಹೆಂಗೂ ನೋಡಕ್ಕೆ ಬ್ಯೂಟಿಯಾಗಿದ್ದಾಳಲ್ಲ, ಯಾರನ್ನಾದ್ರೂ ಲವ್ ಮಾಡಿ ಓಡಿಹೋಗ್ಲಿ ಬಿಡು. ಆಗತಂತಾನೇ ಮದ್ವೆ ಆದಂಗಾಗಲ್ವಾ? ಎಂದುಬಿಟ್ಟ. ಇದನ್ನು ಕೇಳಿದ್ದೇ ಯಶವಂತನ ತಲೆ ಕೆಟ್ಟಿದೆ. ಫೆಬ್ರವರಿ 18 ರ ರಾತ್ರಿ ಹತ್ತೂವರೆಗೆ ತನ್ನಿಬ್ಬರು ಗೆಳೆಯರನ್ನು ಜೊತೆ ಹಾಕಿಕೊಂಡಿದ್ದೇ ನವರಂಗ್ ಸರ್ಕಲ್ಲಿನಲ್ಲಿದ್ದ ಅಪ್ಪನ ರೂಮಿಗೆ ಬಂದು 'ನೋಡು ಅಕ್ಕನ ಮದುವೆಗೆ ತೊಂದ್ರೆ ಮಾಡಬೇಡ. ನಿನ್ನಿಂದ ನಯಾಪೈಸೆ ಸಿಗದೇ ಹೋದ್ರೂ ಪರವಾಗಿಲ್ಲ, ಶಾಸ್ತ್ರಕ್ಕಾದ್ರೂ ತಂದೆ ಅಂತ ಬಂದು ಹೋಗು' ಅಂದಿದ್ದಾನೆ. ಕುಡಿದು ತಟ್ಟಾಡುತ್ತಿದ್ದ ವೀರಭದ್ರಯ್ಯ ಮಗನನ್ನೇ ಹಿಡಿದು ಬಡಿಯಲಾರಂಭಿಸಿದ್ದಾನೆ. ಅದೇನೆನ್ನಿಸಿತೋ ಯಶವಂತ್ ಚಾಕು ತೆಗೆದಿದ್ದೇ ತನ್ನ ತಂದೆಯನ್ನೇ ಇರಿದಿದ್ದಾನೆ. ಐದಾರು ಇರಿತಕ್ಕೆ ಸಿಲುಕಿ ರಕ್ತ ಸುರಿಸುತ್ತಾ ಬಿದ್ದಿದ್ದ ವೀರಭದ್ರಯ್ಯನನ್ನು ಜನ ಆಸ್ಪತ್ರೆಗೆ ಕರೆತರುತ್ತಿದ್ದಂತೆ ಸಾಕಷ್ಟು ರಕ್ತ ಹರಿದಾಗಿತ್ತು, ಇಷ್ಟೆಲ್ಲಕ್ಕೂ ನನ್ನ ಮಗನೇ ಕಾರಣ ಎಂದು ಹೇಳಿಕೆ ಕೊಟ್ಟು ವೀರಭದ್ರಯ್ಯ ಕೊನೆಯುಸಿರೆಳೆದಿದ್ದಾನೆ. ಏನ್ ಸಾರ್ ಮಾಡ್ಲೀ, ಎಲ್ಲಾ ನಮ್ಮ ಕರ್ಮ. ನನ್ನ ಅಪ್ಪ ಕೊಟ್ಟ ಚಿತ್ರಹಿಂಸೆಯ ಮುಂದೆ ಈಗ ಪೊಲೀಸರು ಕೊಟ್ಟ ಹಿಂಸೆ ಯಾವ ಮಹಾ? ಬದುಕಿದ್ದಷ್ಟೂ ದಿನ ಒಂದು ನೆಮ್ಮದಿ ಕೊಡಲಿಲ್ಲ, ಕುಡಿದು ಬಂದು ಎಲ್ಲೆಂದರಲ್ಲಿ ಹೊಡೆಯೋನು. ನಮ್ಮ ಮೇಲೆ ಪೊಲೀಸರಿಗೆ ದೂರು ಕೊಟ್ಟ. ಹಾಳಾಗಲಿ ಈಗ ಅಕ್ಕನ ಮದುವೆಗಾದ್ರೂ ಕೈಗೂಡಿಸಬಾರ್ದಾ? ಹೇಗೂ ಬ್ಯೂಟಿಯಾಗಿದ್ದಾಳೆ ಯಾರ ಜೊತೆಗಾದ್ರೂ ಓಡಿ ಹೋಗ್ಲಿ ಅಂದ್ರೆ ಏನರ್ಥ? ಒಬ್ಬ ತಂದೆ ಹೇಳೋ ಮಾತಾ ಇದು? ಎಂಥಾಗತಿ ಬಂತು ನೋಡಿ. ಅಕ್ಕನ ಭವಿಷ್ಯ ರೂಪಿಸೋದಕ್ಕೆ ಹೋಗಿ ಈಗ ನಾನೇ ಅಕ್ಕನ ಬದುಕನ್ನು ಹಾಳು ಮಾಡಿಬಿಟ್ಟೆ. ಯಾವ ಪಾಪ ಮಾಡಿದೆವೆಂತ ಇಂಥ ತಂದೆಗೆ ನಾವು ಹುಟ್ಟಿದವ್ರೋ. ಕೊಲ್ಲಬೇಕು ಅಂತ ನಾನು ಹೋದೀಲಿಲ್ಲ, ಸುಮ್ನೆ ಬಿಸಿ ಮುಟ್ಟಿಸೋದಕ್ಕೆ ಅಂತ ಹೋಗಿ ಯಡವಟ್ಟು ಮಾಡಿಕೊಂಡೆ. ಕನಿಷ್ಠ ಕೈಯೋ ಕಾಲೋ ತೆಗೆದುಬಿಟ್ಟಿದ್ರೆ ನಮ್ಮ ಮನೇಲೇ ಮಲಗಿಸಿ ಅಕ್ಕನ ಮದುವೆ ಮುಗಿಸುತ್ತಿದ್ದೆ.....!


ಇಷ್ಟನ್ನುತ್ತಲೇ ಮೌನಕ್ಕೆ ಶರಣಾದ ಯಶವಂತ್‌ನ ಕಣ್ಣಲ್ಲಿ ಧಾರಾಕಾರ ನೀರಿತ್ತು. ಅಪ್ಪನ ಕೊಂದ ಪಶ್ಚಾತ್ತಾಪ, ಅ ದೌರ್ಭಾಗ್ಯದ ವಿಷಾದ, ತಾಯಿಯ ಬೇಗುದಿಯ ನೋ ತನ್ನ ಭವಿಷ್ಯಕ್ಕೆ ಕವಿದ ಕಾರ್ಮೋಡ ಎಲ್ಲವನ್ನೂ ಮೌನ ಮತ್ತು ಕಣ್ಣೀರೇ ಸಾರಿ ಹೇಳುತ್ತಿತ್ತು.




ಉಡುಪಿ ಸೋಗಲಾಡಿ ಸಭಾಪತಿ ಪ್ರತ್ಯಕ್ಷ!

ಇಂಗು ತಿಂದ ಮಂಗನಂತೆ ಎಗರಾಡುತ್ತಿರುವ ಸಭಾಪತಿ ಹೊಸ ಛದ್ಮವೇಷದೊಂದಿಗೆ ಅಖಾಡಕ್ಕೆ ಇಳಿದಿದ್ದಾರೆ. ಚೆಡ್ಡಿ ಕರ್ಮಭೂಮಿ ಉಡುಪಿಯಲ್ಲಿ ಸೆಕ್ಯುಲರ್ ಹೋರಾಟಗಾರ ಎನಿಸಿಕೊಂಡಿದ್ದ ಸಭಾಪತಿ ಇವತ್ತು ಅದೇ ಮತಾಂಧ- ಮನೆಮುರುಕರ ದಾಳವಾಗಿರುವುದು ದುರಂತ! ಸಭಾಪತಿಗಿಂಥ ಮಾನಸಿಕ ದಾಸ್ಯ-ದಾರಿದ್ರ್ಯ ಬರಬಾರದಿತ್ತು. ಈ ನಡುವೆ ಅದ್ಯಾಕೋ ಸಭಾಪತಿ ಜೆಡಿಎಸ್ ಪ್ರವೇಶಕ್ಕೆ ಕುಮಾರಣ್ಣ- 'ಬಂ'ರಿಂದ ರೆಡ್ ಸಿಗ್ನಲ್‌ಗಳೇ ನಿರಂತರವಾಗಿ ರವಾನೆಯಾಗುತ್ತಿದೆ. ಸಭಾಪತಿ ಬಿಜೆಪಿಯ ಏಜೆಂಟಾಗಿ ಜೆಡಿಎಸ್‌ಗೆ ನುಸುಳುತ್ತಿದ್ದಾನೆಂಬ 'ಸತ್ಯ' ಜೆಡಿಎಸ್ ದೊರೆಗಳಿಗೂ ಗೊತ್ತಾಗಿದೆ. ಒಟ್ಟಿನಲ್ಲಿ ಸಭಾಪತಿ ಜೋಕರ್‌ನಂತಾಗಿ ಕಾಣಿಸುತ್ತಿದ್ದಾರೆ.

ಉಡುಪಿ ರಾಜಕಾರಣ ಮಗ್ಗಲು ಬದಲಿಸುತ್ತಿದೆ. ಸಂಘಪರಿವಾರದ ಆಡುಂಬೋಲದಂತಾಗಿರುವ ಈ ಉಡುಪಿಯಲ್ಲಿ ಕಾವಿ(ಅಷ್ಟ ಮಠಾಧೀಶರು), ಖಾದಿ (ಆಚಾರ್ಯ, ಆಸ್ಕರ್... ಇತ್ಯಾದಿ) ಮತ್ತು ಖಾಕಿ (ಚೆಡ್ಡಿ)ಗಳ ಕರಾಮತ್ತಿನ ಸುತ್ತಲೇ ಸದಾ ಧರ್ಮಕಾರಣ- 'ಕರ್ಮ' ಕಾರಣಗಳೆಲ್ಲ ಗಿರಕಿ ಹೊಡೆಯುತ್ತಿರುತ್ತವೆ. ಬಿಜೆಪಿ ಮತ್ತು ಕಾಂಗ್ರೆಸ್‌ನ ಅತಿರಥಮಹಾರಥರಾದ ಮಂತ್ರಿ ಆಚಾರ್ಯ ಹಾಗೂ ಎಐಸಿಸಿ ಮಾಂಡಲೀಕ, ಆಸ್ಕರ್ ಫರ್ನಾಂಡಿಸ್‌ರಿಂದ ಪ್ರಾಪರ್ ಉಡುಪಿಗಾಗಲಿ ಇಡೀ ಉಡುಪಿ ಜಿಲ್ಲೆಗಾಗಲಿ ಉಪಕಾರಕ್ಕಿಂತ ಉಪದ್ರವವೇ ಜಾಸ್ತಿಯಾಗಿದೆ. ಹಾಗಂತ ಜಿಲ್ಲೆಯ ಸೆಕ್ಯುಲರ್-ಕಮ್ಯುನಲ್ ರಾಜಕೀಯದ ಕಿಂಗ್‌ಪಿನ್ ಗಳೇ ಇವರಿಬ್ಬರು.


ಫರ್ನಾಂಡಿಸ್

ಇವತ್ತು ಜಿಲ್ಲೆಯಲ್ಲಿ ಕಾಂಗ್ರೆಸ್ ಹೈರಾಣಾಗಿ ಆವಾಂತರಕಾರಿ ಡಾ.ಆಚಾರ್ಯ, ಪೇಜಾವರ ಧರ್ಮಾಂಧ ಪತಾಲಮ್ ಮೆರೆಯುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ದ್ವಂದ್ವನೀತಿ, ಸ್ವಪಾರ್ಟಿ ಬಗ್ಗೆ ಕಾಳಜಿ ಇಲ್ಲದ ಹೇತ್ಲಾಂಡಿತನಗಳ ಆಸ್ಕರ್ ಫರ್ನಾಂಡಿಸ್! ಈ ಆಸ್ಕರ್ ಕಾಂಗ್ರೆಸ್‌ನ ದಿಲ್ಲಿ ದರ್ಬಾರಲ್ಲಿ ಅದೆಷ್ಟು ಸ್ಟ್ರಾಂಗೋ ಉಡುಪಿ ಲೋಕಲ್‌ನಲ್ಲಿ ಅಷ್ಟೇ ನಾಮರ್ಧ. ಜನರಿಂದ ತಿರಸ್ಕೃತ ಗಫೂರ್, ಸಾಲಿಯಾನ, ಗೋಪಾಲ ಪೂಜಾರಿ, ಪ್ರತಾಪಚಂದ್ರ ಶೆಟ್ಟಿ, ಸಭಾಪತಿಯಂತವರಿಗೆಲ್ಲ ಈತ ಮಣೆ ಹಾಕಿ ಎರಡನೇ ಸಾಲಿನ ಯುವಕರು-ಉತ್ಸಾಹಿಗಳಿಗೆ ಅನ್ಯಾಯ ಮಾಡಿದ್ದು ಕಾಂಗ್ರೆಸ್‌ಗೆ ದೊಡ್ಡ ಹೊಡೆತ ನೀಡಿಬಿಟ್ಟಿದೆ. ಇವತ್ತು ಕಾಂಗ್ರೆಸ್ ಏನಾದರೂ ಉದ್ಧಾರ ಆಗಬೇಕೆಂದಿದ್ದರೆ ಆಸ್ಕರ್-ಮೊಯ್ಲಿ-ಸೊರಕೆಯಂಥ ಜಗಳಗಂಟರು ನಿವೃತ್ತಿ ಹೊಂದಲೇ ಬೇಕೆಂಬಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಆಸ್ಕರ್‌ಗೆ ಕಡ್ಡಾಯ ನಿವೃತ್ತಿ ಅಥವಾ ವಿಆರ್‌ಎಸ್‌ಗೆ ಯೋಚಿಸಬೇಕಿದೆ.


ಕಲ್ಲಡ್ಕ

ಆಸ್ಕರ್ ಫರ್ನಾಂಡಿಸ್‌ರ ದೌರ್ಬಲ್ಯ ಬಳಸಿಕೊಂಡು ಬೆಳೆದ ಭಾನ್ಗಡಿ ಭೂಪರಲ್ಲಿ ಉಡುಪಿಯ ಮಾಜಿ ಶಾಸಕ ಸಭಾಪತಿಯೂ ಒಬ್ಬ. ಈ ಸೋಗಲಾಡಿ ಸಭಾಪತಿ ಶಾಸಕನಾಗಿದ್ದಾಗ ಮಾಡಿದ್ದ ಭಂಡಾಟ-ಭ್ರಷ್ಟಾಚಾರ ಒಂದೆರಡಲ್ಲ. ಆಗಲೇ ಹೈಕಮಾಂಡ್‌ನ ಪರಮೋಚ್ಛ ಸ್ಥಾನದಲ್ಲಿದ್ದ ಆಸ್ಕರ್ ಕಡಿವಾಣ ಹಾಕಿದ್ದರೆ ಉಡುಪಿಯಲ್ಲಿ ಈಗ ಕಾಂಗ್ರೆಸ್‌ಗೆ ಆಗಿರುವಷ್ಟು ದೊಡ್ಡ ಡ್ಯಾಮೇಜ್ ಆಗುತ್ತಲೇ ಇರಲಿಲ್ಲ. ತನ್ನ ಸ್ವಯಂಕೃತಾಪರಾಧಗಳ ಮಹಿಮೆಯಿಂದ 2004ರಲ್ಲಿ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಹೀನಾಯ ಸೋಲು ಕಂಡ ಸಭಾಪತಿ ಆ ನಂತರ ರಹಸ್ಯ-ವ್ಯವಸ್ಥಿತವಾಗಿ ಮಾತೃ ಪಕ್ಷಕ್ಕೆ ಹಾನಿ ಮಾಡುತ್ತಲೇ ಹೋದರು. ಅಲ್ಲಿಂದ ಇಲ್ಲಿವರೆಗಿನ ಸತತ ಏಳು ವರ್ಷ ಪಕ್ಷದ ಯಾವ ಚಟುವಟಿಕೆಯಲ್ಲೂ ತೊಡಗಿಸಿಕೊಳ್ಳದೇ ರಾಜಕೀಯ ಸನ್ಯಾಸ ಪಡೆದವರಂತಿದ್ದರು. ಆತನ ಗೆಲುವಿಗಾಗಿ ಹಗಲಿರುಳೂ ದುಡಿದಿದ್ದ ಕಾರ್ಯಕರ್ತರು, ಆಸ್ಕರ್‌ನಂಥ ಧುರೀಣರು ಸಭೆ-ಮೀಟಿಂಗ್-ಪಕ್ಷೋದ್ಧಾರದ ಕೆಲಸಕ್ಕೆ ಕರೆದರೆ 'ನಂಗೆ ರಾಜಕೀಯದಿಂದೇನೂ ಆಗಬೇಕಾದ್ದಿಲ್ಲ...' ಎಂದು ಉಡಾಫೆ ಉತ್ತರ ಒಗಾಯಿಸುತ್ತಿದ್ದರು.

ಕಳೆದ ಏಳು ವರ್ಷದಿಂದ ಜನಸಂಪರ್ಕ ಕಳೆದುಕೊಂಡು ಭೂಗತನಾಗಿದ್ದ ಸಭಾಪತಿ ಉಡುಪಿ ರಾಜಕೀಯ-ಸಾಮಾಜಿಕ ರಂಗದಲ್ಲಿ ಸಂಪೂರ್ಣ ಅಸ್ತಿತ್ವ ಕಳೆದುಕೊಂಡುಬಿಟ್ಟಿದ್ದರು. ಆದರೆ ಆತ ಬಿಜೆಪಿಯ ಮಂತ್ರಿ ಆಚಾರ್ಯ, ಶಾಸಕ ರಘುಪತಿ ಭಟ್ಟರೊಂದಿಗೆ 'ಅನೈತಿಕ' ಮೈತ್ರಿ ಸಾಧಿಸಿಕೊಂಡು ವೈಯಕ್ತಿಕ 'ಸುಖ-ಭೋಗ' ಸಾಧಿಸಿಕೊಂಡಿದ್ದರು. ಹೆಂಡೋದ್ಯಮಿ ಸತೀಶ್ಚಂದ್ರ ಹೆಗ್ಡೆ ಕಂಟ್ರಾಕ್ಟರ್ ಜಿ.ಶಂಕರ್ ಸ್ಥಾಪಿಸಿದ ಹಿರಿಯಡ್ಕ ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ಸಂಪೂರ್ಣ ಕಬ್ಜಾ ಮಾಡಿಕೊಂಡು ವಿದ್ಯೆ ವ್ಯಾಪಾರ ದಂಧೆಯಲ್ಲಿ ತೊಡಗಿಸಿಕೊಂಡಿದ್ದರು. ಕಾಂಗ್ರೆಸ್‌ಗೆ ಹಾನಿಮಾಡುವ ಒಪ್ಪಂದ ಹೇತ್ಲಾಂಡಿ ಮಂತ್ರಿ ಆಚಾರ್ಯ ಮತ್ತು ಮಡದಿ ಸಂಹಾರಕ ಶಾಸಕ ರಘುಪತಿ ಭಟ್ಟನೊಂದಿಗೆ ಮಾಡಿಕೊಂಡು ತನ್ನ ಶಿಕ್ಷಣ ವ್ಯಾಪಾರ ವೃದ್ಧಿಸಿಕೊಳ್ಳುತ್ತ ಹೋದ. ಆಚಾರ್ಯರ ಕೃಪೆಯಿಂದ ಇವತ್ತು ಸಭಾಪತಿಯ ಈ ಇಂಗ್ಲಿಷ್ ಮೀಡಿಯಂ ಶಾಲೆ, ಪಿಯು ಕಾಲೇಜ್ ಮಟ್ಟಕ್ಕೆ ಏರಿದೆ! ಸಭಾಪತಿಯ ಬಿಸಿನೆಸ್ ಗ್ರಾಫೂ ಹೆಚ್ಚಾಗಿದೆ.

ಮಾಜಿಯಾದ ನಂತರ ಸಭಾಪತಿ ಕಾಂಗ್ರೆಸ್‌ನ ಆಸ್ಕರ್-ಮೊಯ್ಲಿ-ಪೂಜಾರಿಗಿಂತ ಬಿಜೆಪಿಯ ಆಚಾರ್ಯ-ರಘುಪತಿ... ಮತಾಂಧ ಚೆಡ್ಡಿಗಳು ಮತ್ತು ಪೇಜಾವರ ಸ್ವಾಮಿಗಳೇ ಅತ್ಯಾಪ್ತರಾಗಿ ಹೋಗಿದ್ದರು. ಕಳೆದ ಅಸೆಂಬ್ಲಿ -ಸ್ಥಳೀಯ ಸಂಸ್ಥೆ ಎಲೆಕ್ಷನ್‌ನಲ್ಲಿ ಆಚಾರ್ಯ-ರಘುಪತಿಗಳ ಗುಪ್ತ ಬಲಗೈ ಬಂಟನಂತೆ ಈ ಸೋಗಲಾಡಿ ಸಭಾಪತಿ ಕಾರ್ಯಾಚರಣೆ ಮಾಡಿದ್ದು ಇದೆಯಲ್ಲ ಅದು, ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದಂತಿತ್ತು. ಇದು ಇಡೀ ಕರಾವಳಿಯಲ್ಲಿ ಸಭಾಪತಿಯ ದೈನೇಸಿ ಸ್ಥಿತಿ-ಗತಿ ಬಗ್ಗೆ ತರತರದ ವ್ಯಾಖ್ಯಾನ- ಜೋಕ್ ಸೃಷ್ಟಿಸಿಬಿಟ್ಟಿದೆ.

ಸತ್ತಂತಿದ್ದ ಸಭಾಪತಿ ಕಳೆದ ಹದಿನೈದಿಪ್ಪತ್ತು ದಿನಗಳಿಂದ ಉಡುಪಿಯಲ್ಲಿ ಸದ್ದು-ಸುದ್ದಿ ಮಾಡುತ್ತಾ ಪ್ರತ್ಯಕ್ಷನಾಗಿದ್ದಾನೆ! ಜೆಡಿಎಸ್‌ಗೆ ಸೇರುತ್ತಾನೆಂಬ ಗುಲ್ಲು ಹಬ್ಬಿಸಿಕೊಂಡು ಕಾಂಗ್ರೆಸ್-ಬಿಜೆಪಿ 'ಆಯ್ದ ಮುಖಂಡರನ್ನು' ಬೈದಾಡತೊಡಗಿದ್ದಾನೆ. ಹಾಲಿನ ದರ ಹೆಚ್ಚಳದ ವಿರುದ್ಧ ಒಂದು ಪ್ರತಿಭಟನೆ ತನ್ನ ಮೂರ್ನಾಲ್ಕು ಚೇಲಾಗಳನ್ನು ಸೇರಿಸಿಕೊಂಡು ಮಾಡಿದ್ದಾನೆ. ಪರಿಸರ ರಕ್ಷಣೆಯ ಮುಖವಾಡ ಹಾಕಿಕೊಂಡು ಹಾರಾಡುತ್ತಿದ್ದಾನೆ.

ಪಡುಬಿದ್ರಿಯಲ್ಲಿ ನಾಗಾರ್ಜುನ ಹಾರುಬೂದಿ ಉಷ್ಣ ವಿದ್ಯುತ್ ಸ್ಥಾವರದಿಂದ ಪರಿಸರ ನಾಶವಾಗಿದೆ ಎಂದಬ್ಬರಿಸುತ್ತಿದ್ದಾನೆ. ಈ ಸ್ಥಾವರ ಮುಚ್ಚಿಸುವ ತನಕ ಹೋರಾಡುತ್ತೇನೆ, ಮುಲ್ಕಿಯಿಂದ ಬೈಂದೂರುವರೆಗೆ ಪಾದಯಾತ್ರೆ ಮಾಡುತ್ತೇನೆಂದು ಜನಪರ ಮಹಾಮುಖಂಡನಂತೆ ಪೋಸು ಕೊಡುತ್ತಿದ್ದಾನೆ. ಈ ಪರಿಸರ-ಜನ ವಿನಾಶದ ಯೋಜನೆಗೆ ಅನುಮತಿ ಕೊಟ್ಟದ್ದು ಕಾಂಗ್ರೆಸ್‌ನ ಎಸ್.ಎಂ.ಕೃಷ್ಣರ ಸರ್ಕಾರವೆಂದು ಬೊಂಬಡಾ ಬಜಾಯಿಸುತ್ತಿದ್ದಾನೆ.


ವಿಪರ್ಯಾಸವೆಂದರೆ ಅಂದು ಇದೇ ಸಭಾಪತಿ ಕಾಂಗ್ರೆಸ್‌ನ ಉಡುಪಿ ಕ್ಷೇತ್ರದ ಶಾಸಕನಾಗಿದ್ದ! ಅಂದು ನಾಗಾರ್ಜುನ ಕಲ್ಲಿದ್ದಲು ಸ್ಥಾವರದ ಬಗ್ಗೆ ಒಂದೇ ಒಂದು ಚಕಾರವೆತ್ತಿರಲಿಲ್ಲ. ದಗಲ್ಬಾಜಿ ಸಭಾಪತಿ ಕಣ್ಣೆದುರೇ ಕನಿಷ್ಠ 12 ವರ್ಷದಿಂದ ರೈತ-ಮೀನುಗಾರರು-ಪರಿಸರವಾದಿಗಳೆಲ್ಲ ದೊಡ್ಡ ಆಂದೋಲನವನ್ನೇ ಈ ಪ್ರಳಯಾಂತ ಪ್ರಾಜೆಕ್ಟ್ ವಿರುದ್ಧ ಮಾಡುತ್ತಿದ್ದರೂ ಸಭಾಪತಿ ಬುದ್ಧಿಪೂರ್ವಕವಾಗೇ ಕಣ್ಣು-ಬಾಯಿ ಮುಚ್ಚಿಕೊಂಡಿದ್ದ. ಈಗ ಇದ್ದಕ್ಕಿದ್ದಂತೆ ಸಭಾಪತಿ ಬೀದಿಗೆ ಧುಮುಕಿ ಜನೋದ್ಧಾರಕನಂತೆ ಪೋಸು ಕೊಡುತ್ತಿದ್ದಾರೆ.

ಏಕೆ ಸಭಾಪತಿ ಹೊರಬಂದಿದ್ದಾರೆ? ಯಾಕೆ ಜೆಡಿಎಸ್ ಗುಂಪಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ? 'ಬಂ' ಉಡುಪಿಗೆ ಬಂದಾಗ ಆತನ ಹಿಂದೆ-ಮುಂದೆ ಬಾಲಸುಟ್ಟ ಬೆಕ್ಕಿನಂತೆ ಠಳಾಯಿಸಿದ್ದಾರೆ? ಸಭಾಪತಿಯ ನಿಗೂಢ ನಡೆಯನ್ನು ಜಿಲ್ಲೆಯಲ್ಲಿ ಎರಡು ರೀತಿಯಾಗಿ ವಿಶ್ಲೇಷಿಸಲಾಗುತ್ತಿದೆ. ಒಂದು ಬಿಜೆಪಿ ಸೇರಲಾಗದೆ ಅಂತರ್‌ಪಿಶಾಚಿಯಾಗಿದ್ದ ಸಭಾಪತಿ ಮತ್ತೆ ರಾಜಕೀಯ ಹುಟ್ಟು ಪಡೆಯಲು ತನ್ನ ಮಾಜಿ ಗುರು 'ಬಂ' ಪಾದಕ್ಕೆರಗಿದ್ದಾರಂತೆ. ಹಿಂದೆ ಮನೋರಮಾ ಮಧ್ವರಾಜ್ ಎಂಬ ಸ್ವಜಾತಿ (ಮೊಗವೀರ) ಮೀನುಗಾರ ಮಹಿಳೆ ವಿರುದ್ಧ ಜಿದ್ದಿನ ರಾಜಕೀಯ ಮಾಡಿ ಹೈರಾಣಾಗಿದ್ದ ಸಭಾಪತಿ ಪಾರ್ಲಿಮೆಂಟ್-ಅಸೆಂಬ್ಲಿಗೆ ನಿಂತು-ನಿಂತು ಪಲ್ಟಿ ಹೊಡೆದಿದ್ದರು.

ಯಾವಾಗ 'ಬಂ'ರ ಕೆಸಿಪಿ ಸೇರಿಕೊಂಡಿದ್ದನೋ ಆಗ ಆತನಿಗೆ ಈ ಭಾಗದ ಗಣನೀಯ ಬಿಲ್ಲವರ ಮತಗಳು ಬಂದು ಶಾಸಕನೂ ಆಗಿಹೋಗಿದ್ದ. 'ಬಂ'ಗಾಗ ಆ ಥರದ ಚಾರಿಷ್ಮಾ ಸ್ವಜಾತಿ ಬಿಲ್ಲವರ ಮೇಲಿತ್ತು. ಈಗಿಲ್ಲ, ಆ ಮಾತು ಬೇರೆ. ಆದರೆ 'ಬಂ'ರ ಬಾಲ ಹಿಡಿದುಕೊಂಡು ಜೆಡಿಎಸ್‌ಗೆ ನುಸುಳಿದರೆ ಉಡುಪಿ ರಾಜಕೀಯ ರಂಗಸ್ಥಳದಲ್ಲಿ ಜಾಗ ಸಿಗಬಹುದೆಂಬ ಲೆಕ್ಕಾಚಾರ ಸಭಾಪತಿಯದೆನ್ನುವವರೂ ಇದ್ದಾರೆ. ಆದರೆ ಜೆಡಿಎಸ್‌ಗಾಗಲಿ 'ಬಂ'ಗಾಗಲಿ ಸ್ವತಃ ಸಭಾಪತಿಗಾಗಲಿ ನೆಲೆ-ಬೆಲೆ ಉಡುಪಿಯಲ್ಲಿ ಇಲ್ಲ. ಹಿಂದುತ್ವದ ಅಲೆಯಲ್ಲಿ ಸಭಾಪತಿ-'ಬಂ' ತರಗೆಲೆಯಂತಾಗುವುದು ಗ್ಯಾರಂಟಿ.


ಡಾ.ಆಚಾರ್ಯ

ಸಭಾಪತಿಯ ಡೋಂಗಿ ಡ್ಯಾನ್ಸ್ ಇನ್ನೊಂದು ರೀತಿಯ ವ್ಯಾಖ್ಯಾನಕ್ಕೂ ಒಳಪಟ್ಟಿದೆ. ಆತನ ದುಡ್ಡಿನ ದಾಹ, ಗತಿಗೇಡಿ ಸ್ಥಿತಿ, ಸಮಯಸಾಧಕತನ ಕಂಡವರು ಈ ವಾದವೇ ಹೆಚ್ಚು ವಾಸ್ತವಕ್ಕೆ ಹತ್ತಿರ ಎನ್ನುತ್ತಿದ್ದಾರೆ. ಅದೆಂದರೆ, ಬಿಜೆಪಿಯ ಖತರ್‌ನಾಕ್ ಪುಢಾರಿಗಳಾದ ಆಚಾರ್ಯ ಮತ್ತು ರಘುಪತಿ ಭಟ್ ಎಂಬ ಬ್ರಾಹ್ಮಣರು ಬುದ್ಧಿಗೇಡಿ ಶೂದ್ರ ಸಭಾಪತಿಯನ್ನು ಜೆಡಿಎಸ್‌ಗೆ ತಳ್ಳಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಸ್ಕೆಚ್ ಹಾಕಿದ್ದಾರಂತೆ. ಒಂದು ಕಾಲದಲ್ಲಿ ಶೋಷಿತರ-ಬಡ ಬೆಸ್ತರ-ಸೆಕ್ಯುಲರ್‌ಗಳ ಧ್ವನಿಯಾಗಿದ್ದ ಸಭಾಪತಿ ಈ ಆರೇಳು ವರ್ಷದಲ್ಲಿ ಪಕ್ಕಾ ಮತಾಂಧ ಚೆಡ್ಡಿಗಳ ಗುಲಾಮನಂತಾಗಿ ಹೋಗಿದ್ದಾರೆ. ಸ್ವಂತಿಕೆಯನ್ನೆಲ್ಲ ಆಚಾರ್ಯ-ಪೇಜಾವರ-ಚೆಡ್ಡಿ ಹರುಕ ರಘುಪತಿಗಳ ಪದತಲದಲ್ಲಿಟ್ಟು ಶರಣಾಗಿ ಹಣಕ್ಕೆ ಹಪಹಪಿಸುತ್ತಿದ್ದಾರೆ. ಆತನ ವೀಕ್‌ನೆಸ್ ಸಂಘಪರಿವಾರದ ಸರದಾರರು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ.


ರಘುಪತಿ

ಬಿಜೆಪಿ ಸೇರಿ ಯಾವುದಾದರೂ ಕಾರ್ಪೋರೇಷನ್ ಗೂಟದ ಕಾರು ಹೊಡೆವ ಹವಣಿಕೆ ಸಭಾಪತಿಯದಾಗಿತ್ತು. ಆದರೆ ಇಂಥ ಚಾನ್ಸ್ ಚಾಲಾಕಿ ಆಚಾರ್ಯ-ರಘುಪತಿಗಳೆಂಬ ವಿಪ್ರರು ಶೂದ್ರ ಸಭಾಪತಿಗೆಂದಾದರೂ ಕೊಡಲು ಸಾಧ್ಯವೇ? ಬಿಜೆಪಿಯ ಒಂದು ವರ್ಗವನ್ನು ಈ ಬ್ರಾಹ್ಮಣರುಗಳೇ ಎತ್ತಿ ಕಟ್ಟಿ ಸಭಾಪತಿಯ ಬಿಜೆಪಿ ಪ್ರವೇಶಕ್ಕೆ ತಡೆಹಾಕಿದರು. ಈಗ ಇದೇ ಆಚಾರ್ಯ-ರಘುಪತಿ ಒಂದಿಷ್ಟು ದುಡ್ಡು ಕೊಟ್ಟು ಜೆಡಿಎಸ್‌ಗೆ ಸಭಾಪತಿಯನ್ನು ಬಲಾತ್ಕಾರದಿಂದ ತಳ್ಳುತ್ತಿದ್ದಾರೆ. ದುಡ್ಡನ್ನು ಕಂಡಿದ್ದೇ ಸಭಾಪತಿ ಚೆಡ್ಡಿಗಳ ಪ್ಲಾನ್ ಕಾರ್ಯಗತಕ್ಕೆ ರೆಡಿಯಾಗಿ ಹೋಗಿದ್ದಾನೆ.

ಇಲ್ಲಿರುವ ಲಾಜಿಕ್ಕು ಸಿಂಪಲ್. ಶಾಸಕ ರಘುಪತಿ ಹೆಂಡತಿ ಪದ್ಮಪ್ರಿಯಾ ಭಟ್‌ಳನ್ನು ಕೊಂದ ಪಾಪದಿಂದ ಉಡುಪಿ ಬಿಜೆಪಿ ತತ್ತರಿಸುತ್ತಿದೆ. ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಗೆ ಕನಿಷ್ಠವೆಂದರೂ 5,000 ಮಹಿಳೆಯರ ಓಟು ಈ 'ಪಾತಕ'ದಿಂದ ಖೋತಾ ಆಗಲಿದೆಯೆಂಬುದು ಆಚಾರ್ಯ-ಕಲ್ಲಡ್ಕ ಭಟ್-ಕೊಡ್ಗಿ-ರಘುಪತಿ ಭಟ್ ವಗೈರೆ ಹಿಂದುತ್ವದ ಹರಾಮ್ ಹರಿಕಾರರಿಗೆ ಪಕ್ಕಾ ಆಗಿಹೋಗಿದೆ. ಈ ಹಾನಿ ತುಂಬಿಕೊಳ್ಳಲು ಹುಂಬ ಸಭಾಪತಿ ಎಂಬ ಮೀನುಗಾರ ಮನುಷ್ಯನನ್ನು ಛೂಬಿಟ್ಟಿದ್ದಾರೆ. ಸಭಾಪತಿಯನ್ನು ಜೆಡಿಎಸ್‌ಗೆ ಕಳಿಸಿ ಸೆಕ್ಯುಲರಿಸಂ-ನಾಗಾರ್ಜುನ ಉಷ್ಣಸ್ಥಾವರದ ಜ್ವಲಂತ ಸಮಸ್ಯೆ ಹೆಸರಲ್ಲಿ ಒಂದಿಷ್ಟು ಕಾಂಗ್ರೆಸ್ ಓಟು ಕಸಿಯುವ ಕುತಂತ್ರ ನಡೆಸಿದ್ದಾರೆ.

ಇಂಗು ತಿಂದ ಮಂಗನಂತೆ ಎಗರಾಡುತ್ತಿರುವ ಸಭಾಪತಿ ಹೊಸ ಛದ್ಮವೇಷದೊಂದಿಗೆ ಅಖಾಡಕ್ಕೆ ಇಳಿದಿದ್ದಾರೆ. ಚೆಡ್ಡಿ ಕರ್ಮಭೂಮಿ ಉಡುಪಿಯಲ್ಲಿ ಸೆಕ್ಯುಲರ್ ಹೋರಾಟಗಾರ ಎನಿಸಿಕೊಂಡಿದ್ದ ಸಭಾಪತಿ ಇವತ್ತು ಅದೇ ಮತಾಂಧ-ಮನೆಮುರುಕರ ದಾಳವಾಗಿರುವುದು ದುರಂತ! ಸಭಾಪತಿಗಿಂಥ ಮಾನಸಿಕ ದಾಸ್ಯ-ದಾರಿದ್ರ್ಯ ಬರಬಾರದಿತ್ತು. ಈ ನಡುವೆ ಅದ್ಯಾಕೋ ಸಭಾಪತಿ ಜೆಡಿಎಸ್ ಪ್ರವೇಶಕ್ಕೆ ಕುಮಾರಣ್ಣ- 'ಬಂ'ರಿಂದ ರೆಡ್ ಸಿಗ್ನಲ್‌ಗಳೇ ನಿರಂತರವಾಗಿ ರವಾನೆಯಾಗುತ್ತಿದೆ. ಸಭಾಪತಿ ಬಿಜೆಪಿಯ ಏಜೆಂಟಾಗಿ ಜೆಡಿಎಸ್‌ಗೆ ನುಸುಳುತ್ತಿದ್ದಾನೆಂಬ 'ಸತ್ಯ' ಜೆಡಿಎಸ್ ದೊರೆಗಳಿಗೂ ಗೊತ್ತಾಗಿದೆ. ಒಟ್ಟಿನಲ್ಲಿ ಸಭಾಪತಿ ಜೋಕರ್‌ನಂತಾಗಿ ಕಾಣಿಸುತ್ತಿದ್ದಾರೆ. ಕರಾವಳಿಗರಿಗೆ ಇದು ಮೇಲ್ನೋಟಕ್ಕೆ ಮೋಜೆನಿಸಿದರೂ ಪೇಜಾವರ-ಆಚಾರ್ಯ-ರಘುಪತಿಯಂಥ ಜನಿವಾರ ಪಡೆ ಸಭಾಪತಿಯಂಥ ಸಿಟ್ಟಿನ-ತಿಕ್ಕಲು ಹಿಂದುಳಿದವರ ಹೆಗಲ ಮೇಲೆ ಗನ್ ಇಟ್ಟು ರಾಜಕೀಯ ಶಿಕಾರಿ ನಡೆಸುತ್ತಿರುವುದು ಘೋರವಾಗಿದೆ.

ಕೊನೇ ಹನಿ

ಅದೆಷ್ಟೇ ತಿಪ್ಪರಲಾಗ ಹಾಕಿದರೂ ಸಭಾಪತಿಗೆ ಜೆಡಿಎಸ್ ಪ್ರವೇಶ ಸಾಧ್ಯವಾಗದಿರುವ ಬಗ್ಗೆ ಒಂದು ಲೈವ್ ಜೋಕ್ ಕರಾವಳಿಯಲ್ಲಿ ಸುತ್ತಿ ಸುಳಿದಾಡುತ್ತಿದೆ. ಸಭಾಪತಿ ಜೆಡಿಎಸ್‌ಗೆ ಬಂದರೆ ಅದರ ಯುವರಾಜ ಕುಮಾರಣ್ಣನ 'ಸುಖ-ಸಂತೋಷ'ಕ್ಕೆ ಧಕ್ಕೆ ಆಗುವ ಸಾಧ್ಯತೆ ಹೆಚ್ಚಂತೆ. ಹಿಂದೊಮ್ಮೆ ಜನತಾ ದಳಕ್ಕೆ ಸೇರಿದ್ದ ಸಭಾಪತಿ ಲೋಕಸಭೆಗೂ ಸ್ಪರ್ಧಿಸಿ ಸೋತಿದ್ದರು. ಆದರೆ ಆ ಪಾರ್ಟಿಯಿಂದ ಹೊರಬೀಳುವಾಗ ದಳದ ಈ ಭಾಗದ ದೊಡ್ಡ ಲೀಡರ್ ಆಗಿದ್ದ ಡಾ.ರಾಮಕೃಷ್ಣ ನಾಯಕ್‌ರ ಹೆಂಡತಿಯನ್ನು 'ಅಧಿಕೃತ'ವಾಗೇ ಹೈಜಾಕ್ ಮಾಡಿಕೊಂಡು ಬಂದಿದ್ದರು! ಈಗೇನಾದರೂ ಜೆಡಿಎಸ್‌ಗೆ ಸಭಾಪತಿ ಎಂಟ್ರಿ ಕೊಟ್ಟರೆ ತನ್ನ ಮನದನ್ನೆಯಾಗಿರುವ ಸಿನಿಮಾ ನಟಿಯೊಬ್ಬಳನ್ನು ಅಪಹರಿಸಿಯಾನೆಂಬ ಭಯ ಕುಮಾರಣ್ಣನಿಗಂತೆ!! ಹಾಗಾಗಿ ಜೆಡಿಎಸ್ ಬಾಗಿಲಲ್ಲಿ ನಿಂತು ಕದತಟ್ಟುತ್ತಿದ್ದರೂ ಅದು ತೆರೆದುಕೊಳ್ಳುತ್ತಿಲ್ಲ. ಅಂಥ 'ಪರಾಕ್ರಮಿ' ಈ ಸಭಾಪತಿ!!

ಜನ ಈ ಜೋಕ್ ಹೇಳಿ ಬಿದ್ದು-ಬಿದ್ದು ನಗುತ್ತಿದ್ದಾರೆ.

• ನಹುಶ


...ಕ್ಕಮಗಳೂರು: ಜಿಲ್ಲಾಸ್ಪತ್ರೆ ವೈದ್ಯ ಶಿವಕುಮಾರ ಕೈಯೊಡ್ಡಿ ಖೆಡ್ಡಾಕ್ಕೆ ಬಿದ್ದ!

...ವೈದ್ಯರನ್ನು ಜನರು ದೈವಾಂಶಸಂಭೂತರಂತೆ ...ರೆ. ಆದರೆ ಚಿಕ್ಕಮಗಳೂರು ಜಿಲ್ಲೆಯ ಕೆಲವು ... ದೆವ್ವಗಳಂತೆ ಜನಸಾಮಾನ್ಯರನ್ನು ದಂಗು ...ತ್ತಿದ್ದಾರೆ. ಬಡ ರೋಗಿಗಳಿಗೆ ರೋಗಗಳಿಂದ ...ಗುವುದಕ್ಕಿಂತಲೂ ವೈದ್ಯರುಗಳ ಕಿರುಕುಳದಿಂದ ...ಉಳಿಸಿಕೊಳ್ಳುವುದೇ ಕಷ್ಟಕರವಾಗಿದೆ.

...ಲು ವಿಷಯವೆಂದರೆ ಚಿಕ್ಕಮಗಳೂರು ಸರಕಾರಿ ...ೌಡ ಸ್ಮಾರಕ ಜಿಲ್ಲಾಸ್ಪತ್ರೆಯ ವೈದ್ಯ ಶಿವಕುಮಾರ ...ನಡೆದು ಸಿಕ್ಕಿಬಿದ್ದಿದ್ದಾನೆ. ಈತ ವೃತ್ತಿಯಲ್ಲಿ ಪ್ರಸೂತಿ ...ಪ್ರವೃತ್ತಿಯಲ್ಲಿ ಕಟ್ಟಾ ಕೊಳುಬಾಕ. ರೋಗಿಗಳನ್ನು ... ಹಣ ಗಳಿಸುವ ದಂಧೆಯಲ್ಲಿ ಪಾರಂಗತ. ...ಂದು ಬರುವ ಹೆಣ್ಣುಮಕ್ಕಳ ಕರುಳು ಕೊಯ್ದು ...ೋಚುತ್ತಿರುವ ಖದೀಮ. ಈತ ಲೋಕಾಯುಕ್ತ ...ರಿಗಳಿಗೆ ರೆಡ್‌ಹ್ಯಾಂಡಾಗಿ ಸಿಕ್ಕಿದ್ದಾನೆ. ಈಗ ...ಮಾರನಿಗೆ ಶ್ರೀಕೃಷ್ಣನ ಜನ್ಮಸ್ಥಳದ ಪರಿಚಯವಾಗಿದೆ.

...ಎರಡು ಕಂತುಗಳಲ್ಲಿ ಲಂಚ

...ತ್ತೀಚೆಗಷ್ಟೇ ಮೂಡಿಗೆರೆ ತಾಲ್ಲೂಕಿನ ಕಗ್ಗನಳ್ಳದ ...ಪ್ಪ ಎಂಬವರ ಪತ್ನಿ ಪರಿಮಳ ಹೆರಿಗೆಗಾಗಿ ಜಿಲ್ಲಾಸ್ಪತ್ರೆ ...ರು. ಆ ಹೆಣ್ಣು ಮಗಳನ್ನು ದಾಖಲಿಸಿಕೊಂಡ ...ಮಾರ ಮೊದಲು ಕೊಟ್ಟಿದ್ದೇ ದುಡ್ಡಿನ ಟ್ರೀಟ್‌ಮೆಂಟ್! ...ಸಾವಿರಕ್ಕೆ ಡಿಮ್ಯಾಂಡಿಟ್ಟ ಆತ "ನಾರ್ಮಲ್ ಡೆಲಿವರಿ ...ದಿಲ್ಲ, ಸಿಜೇರಿಯನ್ ಮಾಡಬೇಕು. ಹಣ ...ಕೊಟ್ಟರೆ ಸರಿ. ಇಲ್ಲದಿದ್ದರೆ ಬೇರೆ ಆಸ್ಪತ್ರೆ ನೋಡಿ" ... ಹೌಹಾರಿದ ಮಂಜಪ್ಪ ಶಿವಕುಮಾರನ ಮುಂದೆ ...ಸ್ತುಕೊಂಡಿದ್ದಾರೆ. ಪಟ್ಟು ಸಡಿಲಿಸಿದ ಶಿವಕುಮಾರ ... ಕಂತುಗಳಲ್ಲಿ ಹಣ ಕೊಡುವಂತೆ ತಿಳಿಸಿದ. ಹಾಗೆ



ಮರುದಿನ ಬೆಳಕು ಮೂಡುವ ಹೊತ್ತಿಗೆ ಎರಡೂವರೆ ಸಾವಿರ ಶಿವಕುಮಾರನ ಕೈ ಸೇರಿತ್ತು.

ಇದಾದಬಳಿಕ ಎರಡೂವರೆ ಸಾವಿರ ಹೊಂದಿಸಬೇಕಿತ್ತಲ್ಲ, ಕಡುಬಡವ ಮಂಜಪ್ಪ ಅವರಿವರ ಬಳಿ ಕೇಳಿದರೂ ಹಣ ಸಿಗದಿದ್ದಾಗ ಕಂಗೆಟ್ಟಿದ್ದರು. ಅಷ್ಟೊತ್ತಿಗೆ ಪರಿಮಳಾರಿಗೆ ಹೆರಿಗೆಯಾಗಿತ್ತು, ಆದರೆ ಧನಪಿಶಾಚಿ ಶಿವಕುಮಾರ ಉಳಿದ ಹಣ ಕೊಟ್ಟರೆ ಮಾತ್ರ ಡಿಸ್ಚಾರ್ಜ್ ಮಾಡುವುದಾಗಿ ವರಾತ ಶುರುವಿಟ್ಟ. ಈ ಹೊತ್ತಿಗೆ ರೋಸಿಹೋಗಿದ್ದ ಮಂಜಪ್ಪ ನೇರವಾಗಿ ಹೋಗಿ ಚಿಕ್ಕಮಗಳೂರು ಲೋಕಾಯುಕ್ತರಿಗೆ ದೂರು ನೀಡಿದರು. ಮಂಜಪ್ಪರಿಂದ ಉಳಿಕೆ ಲಂಚ ಪಡೆಯುವಾಗ ಶಿವಕುಮಾರನನ್ನು ಲೋಕಾಯುಕ್ತ ರಾಮಾನಾಯ್ಕರ ತಂಡ ಬಂಧಿಸಿತು.

ಹೆಣವಾದಳು ವನಜಾಕ್ಷಿ

ಐದು ವರ್ಷಗಳ ಹಿಂದೆ ಇದೇ ಶಿವಕುಮಾರ ಮೂಡಿಗೆರೆ ಎಂಜಿಎಂ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ. ಆಗ ಮಾಕೋನಹಳ್ಳಿಯ ವನಜಾಕ್ಷಿ ಹೆರಿಗೆ ನಿಮಿತ್ತ ಆಸ್ಪತ್ರೆ ಪ್ರವೇಶಿಸಿದ್ದಳು. ಆದರೆ ನುಂಗುಬಾಕ ಶಿವಕುಮಾರ ಆ ತುಂಬು ಗರ್ಭಿಣಿಗೆ ಸೂಕ್ತ ಕಾಲದಲ್ಲಿ ಚಿಕಿತ್ಸೆ ನೀಡಲಿಲ್ಲವಾದ್ದರಿಂದ ವನಜಾಕ್ಷಿ ತನ್ನ ಪ್ರಾಣವನ್ನೇ ಕಳೆದುಕೊಂಡಳು. ಅವತ್ತು ಮಾಕೋನಹಳ್ಳಿ ಭಾಗದ ಜನರು ರೊಚ್ಚಿಗೆದ್ದು ಶಿವಕುಮಾರನನ್ನು ಅಟ್ಟಾಡಿಸಿದ್ದರು. ಆಗ ಅಲ್ಲಿಂದ ಪೇರಿ ಕಿತ್ತವನು ಹೊಕ್ಕಿದ್ದು ಚಿಕ್ಕಮಗಳೂರು ಜಿಲ್ಲಾಸ್ಪತ್ರೆಯನ್ನು, ಅಲ್ಲೂ ಸಹ ಹಳೆಚಾಳಿ ಯಥಾರೀತಿಯಲ್ಲಿ ಮುಂದುವರೆಸಿದ್ದ.

ಮೂಡಿಗೆರೆ ಆಸ್ಪತ್ರೆ ಎಕ್ಕುಟ್ಟಿದೆ

ಮೂಡಿಗೆರೆ ಎಂಜಿಎಂ ಆಸ್ಪತ್ರೆಯಲ್ಲಿ ಇಸಿಜಿ, ಎಕ್ಸ್‌ರೆ, ಸ್ಕ್ಯಾನಿಂಗ್, ಕಾರ್ಡಿಯಾಕ್ ಮಾನಿಟರ್, ಪಲ್ಸ್ ಆಕ್ಸಿಮೀಟರ್ ಸೌಲಭ್ಯವಿದ್ದರೂ ಸಿಬ್ಬಂದಿಗಳ ಕೊರತೆಗಳ ನಡುವೆ ಅವುಗಳು ಕೆಲಸಕ್ಕೆ ಬರುತ್ತಿಲ್ಲ, ಈ ಆಸ್ಪತ್ರೆಗೆ ವಾರ್ಷಿಕ 10 ಲಕ್ಷ ರೂ. ಔಷಧಿಗಳ ಖರೀದಿಗೆ ಸಂದಾಯವಾಗುತ್ತದೆ. ಬಳಕೆದಾರರಿಂದಲೂ ಹಣ ಸಂಗ್ರಹಿಸಲಾಗುತ್ತಿದೆ. ಆದರೆ ಎಲ್ಲದಕ್ಕೂ ಸುಳ್ಳು ಬಿಲ್ ಮಾಡಿ ಸಂಪೂರ್ಣ ಸ್ವಾಹಾ ಮಾಡಲಾಗುತ್ತಿದೆ. ಆರೋಗ್ಯ ಶಿಬಿರಗಳ ಹೆಸರಿನಲ್ಲಿ ನಕಲಿ ಬಿಲ್ಲುಗಳ ಸೃಷ್ಟಿಯಾಗುತ್ತಿದೆ. ಬ್ಯಾನರ್, ಫ್ಲೆಕ್ಸ್, ಕರಪತ್ರ, ವಾಹನಗಳ ಬಾಡಿಗೆ, ಧ್ವನಿವರ್ಧಕ ಮತ್ತು ಸ್ವಚ್ಛತೆ ಹೆಸರಿನಲ್ಲಿ ಅವ್ಯವಹಾರಗಳು ಎಗ್ಗಿಲ್ಲದೇ ನಡೆದಿವೆ.

ಚಿಕ್ಕಮಗಳೂರು ಜಿಲ್ಲೆಯ ಯಾವ ಸರಕಾರಿ ಆಸ್ಪತ್ರೆಗಳಲ್ಲೂ ಜನರಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ಸಿಗುತ್ತಿಲ್ಲ. ಬಹುತೇಕ ವೈದ್ಯರುಗಳು ಯಮನ ರೂಪದಲ್ಲಿ ಅವತರಿಸಿದ್ದಾರೆ. ಮೂಡಿಗೆರೆ, ಎನ್‌ಆರ್‌ಪುರ, ಶೃಂಗೇರಿ, ಕಡೂರು, ಕೊಪ್ಪ ಆಸ್ಪತ್ರೆಗಳು ಮೇಲ್ದರ್ಜೆಗೇರಿದ್ದರೂ ಕೊರತೆಗಳದೇ ಕಾರುಬಾರು. ಮಲೆನಾಡು ಸೀಮೆಯ ನೂರು ಹಾಸಿಗೆಗಳಿರುವ ಆಸ್ಪತ್ರೆಗಳಲ್ಲಿ ಬೇಕಾದ ಔಷಧಿಗಳಿಲ್ಲ, ಹಾವು ಕಡಿತಕ್ಕೆ ಅಗತ್ಯ ಬೇಕಿರುವ ಚುಚ್ಚುಮದ್ದುಗಳಿಲ್ಲ, ಮಾರಣಾಂತಿಕ ರೇಬಿಸ್ ಇಂಜೆಕ್ಷನ್ ಸಿಗುತ್ತಿಲ್ಲ, ವೈದ್ಯರು, ಸಿಬ್ಬಂದಿಗಳು, ನರ್ಸ್‌ಗಳು, ಪರಿಚಾರಕರಿಲ್ಲ, ಎಲ್ಲದಕ್ಕೂ ಜಿಲ್ಲಾಸ್ಪತ್ರೆಗೆ ಹೋಗಬೇಕು. ಅಲ್ಲೂ ಹೊರಗಿನ ಮೆಡಿಕಲ್‌ಗಳಿಗೆ ಚೀಟಿ ಬರೆದು ಕೊಡುತ್ತಿದ್ದಾರೆ ಅಂದಮೇಲೆ ಸರಕಾರ, ಆರೋಗ್ಯ ಇಲಾಖೆ ನೀಡುವ ಲಕ್ಷಾಂತರ ರೂಪಾಯಿಗಳ ಔಷಧಿಗಳು ಎಲ್ಲಿ ಹೋಗುತ್ತಿವೆ ಎಂಬುದರ ಬಗ್ಗೆ ಆರೋಗ್ಯ ಇಲಾಖೆ ಗಮನ ಹರಿಸಬೇಕಿದೆ.

● ಅಜೀಜ್ ಕಿರುಗುಂದ

...ಭಯಾನಕ ಭ್ರಷ್ಟಾಚಾರ ...ೌಕರಿಯೇ ಬೇಡ ...ನ್ನುತ್ತಿರುವ ಪಿಡಿಓಗಳು

...ರ್ಕಾರಿ ನೌಕರಿ ಸಿಕ್ಕಿದರೆ ಸಾಕೆಂದು ಪರಿತಪಿಸುವ ...ತರ ಜನ ನಮ್ಮಲ್ಲಿದ್ದಾರೆ. ಆದರೆ ಐದಂಕಿ ಸಂಬಳದ ...ಕರಿಯೇ ಬೇಡ ಅನ್ನುತ್ತಿದ್ದಾರೆ ಪಿಡಿಓಗಳು.

...ಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ...ಯ ಮೂಲಕ ನೇಮಕಗೊಂಡು ರಾಜ್ಯಾದ್ಯಂತ ... ಗ್ರಾಮಪಂಚಾಯತ್‌ಗಳಲ್ಲಿ ಈ ಪಿಡಿಓಗಳು ಕೆಲಸ ...ುತ್ತಿದ್ದಾರೆ.

...ಡಿಓ ಅಂದರೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ

... ಭ್ರಷ್ಟಕೂಪಕ್ಕೆ ಹೆದರುತ್ತಿರುವ ಪಿಡಿಓಗಳು

...ಂಚಾಯತ್ ರಾಜ್ ವ್ಯವಸ್ಥೆಯನ್ನು ಪರಿಪಡಿಸುವ ...ಖ ಕಾರಣವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾ...ರಾಜ್ ಇಲಾಖೆಯು ಕಳೆದ 2009ರಲ್ಲಿ ಗ್ರಾಮ...ಯತ್‌ಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ (...)ಗಳನ್ನು ನೇಮಿಸಿಕೊಂಡಿತ್ತು.

...ಉಪತಹಶೀಲ್ದಾರ್ ಶ್ರೇಣಿಯ ಹುದ್ದೆಯೆಂದು ಅನೇಕರು ...ತಲೂ ಉತ್ತಮ ಕೆಲಸಗಳನ್ನು ಬಿಟ್ಟು ಪಂಚಾಯತಿ ...ದ್ಧಿ ಅಧಿಕಾರಿಗಳಾದರು. ಆದರೆ ಇಂದು...?

...ರ್ಧಾತ್ಮಕ ಯುಗದ ಇಂತಹ ಕಾಲದಲ್ಲಿ ಅಧಿಕಾರಿ...ವರು ಎಷ್ಟೊತ್ತಿಗೆ ಕೆಲಸ ಬಿಟ್ಟು ಹೋಗುತ್ತೇವೆಯೋ ...ಕ್ಷರ ಮಟ್ಟಿಗೆ ಬಂದು ನಿಂತಿದ್ದಾರೆ.

...ದಕ್ಕೆ, ಪ್ರಮುಖ ಕಾರಣ ಗ್ರಾಮ-ತಾಲ್ಲೂಕು ...ಂಯತಿಗಳಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ.

...ಉಪತಹಶೀಲ್ದಾರ್ (ಶಿರಸ್ತೇದಾರ್) ಶ್ರೇಣಿಯ ...ಂಬ ಆಸೆ ಹೊತ್ತು, ಆಯ್ಕೆಯಾದ ಪಿಡಿಓಗಳು ... ನಿರೀಕ್ಷೆಗಳೊಂದಿಗೆ, ಪಂಚಾಯತ್ ವ್ಯವಸ್ಥೆ ಬಲ...ಗೆ ಸಂಕಲ್ಪತೊಟ್ಟು, ಹೆಜ್ಜೆಯನ್ನಿಟ್ಟರು. ಅಧಿಕಾರ ...ಸಿ, ತಮ್ಮ ಕೆಲಸಕಾರ್ಯಗಳನ್ನು ಪ್ರಾರಂಭಿಸಿದಾಗಲೇ ...ನಕ ಭ್ರಷ್ಟಾಚಾರ ಅವರಿಗೆ ಗೊತ್ತಾಗಿದ್ದು, ಹಳ್ಳಿಯ ...ಾರಣ, ಇಲಾಖೆಯ ಸಂಘಟಿತ ಭ್ರಷ್ಟಾಚಾರ ...ತಿನಿಧಿಗಳಿಂದು ಅರಿಸಿಬಂದವರ ಕಾನೂನುಬಾಹಿರ ...ಗಳು ಪಿಡಿಓಗಳನ್ನು ಕಂಗೆಡಿಸಿವೆ.


...ಂತಹ ವ್ಯವಸ್ಥೆ ಸರಿಪಡಿಸಲಾಗದು ಎಂದು ಅದೆಷ್ಟೋ ಅಭಿವೃದ್ಧಿ ಅಧಿಕಾರಿಗಳು ಬೇಸತ್ತು ತಮ್ಮ ವೃತ್ತಿಗೆ ರಾಜೀನಾಮೆ ಕೊಟ್ಟು ಹೊರಬರುತ್ತಿದ್ದಾರೆ.

ಅಭಿವೃದ್ಧಿ ಅಧಿಕಾರಿಗಳ ಕಾರ್ಯವ್ಯಾಪ್ತಿ

ಪ್ರತಿಯೊಂದು ಗ್ರಾಮಪಂಚಾಯತ್ 5000ದಿಂದ 7000 ಜನಸಂಖ್ಯೆ ಇರುತ್ತದೆ. ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದಕ್ಕೂ ಮೊದಲು ಈ ಕೆಲಸವನ್ನು ಗ್ರಾಮಪಂಚಾಯತಿ ಕಾರ್ಯದರ್ಶಿಯೇ ನೋಡಿಕೊಳ್ಳುತ್ತಿದ್ದರು. ಇವರುಗಳಿಗೆ ಉನ್ನತ ವ್ಯಾಸಂಗವಿರಲಿಲ್ಲ, ಭ್ರಷ್ಟಾಚಾರದಲ್ಲಿ ಅನುಭವಿಗಳಾಗಿದ್ದ ಇಂಥವರು ಅಭಿವೃದ್ಧಿಗೆ ಆದ್ಯತೆ ನೀಡುತ್ತಿರಲಿಲ್ಲ, ಹಾಗಾಗಿಯೇ ವಿದ್ಯಾವಂತರನ್ನು, ಕಂಪ್ಯೂಟರ್ ಜ್ಞಾನವುಳ್ಳವರನ್ನು, ಉತ್ಸಾಹಿ ಯುವಕರನ್ನು ಆಯ್ಕೆ ಮಾಡಿ ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ತರಬೇಕೆಂಬ ನಿಟ್ಟಿನಲ್ಲಿ ಸೃಷ್ಟಿಯಾದದ್ದೇ ಈ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂಬ ಹುದ್ದೆ.

ಈ ಅಭಿವೃದ್ಧಿ ಅಧಿಕಾರಿಗಳು (ಪಿಡಿಓ) ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಓ) ಹಾಗೂ ತಾಲ್ಲೂಕು ಕಾರ್ಯನಿರ್ವಾಹಕರ (ಇಓ) ಅಧೀನಕ್ಕೆ ಬಂದರೂ ಗ್ರಾಮಪಂಚಾಯತ್ ಮಟ್ಟಕ್ಕೆ ಪ್ರಮುಖರೆನಿಸುತ್ತಾರೆ. ಗ್ರಾಮಪಂಚಾಯತ್ ಕಾರ್ಯದರ್ಶಿಗಳು, ಕ್ಲರ್ಕ್‌ಗಳು, ಅಟೆಂಡರ್ಸ್, ವಾಟರ್‌ಮನ್ಸ್, ಸ್ವೀಪರ್ಸ್, ಲೈನ್‌ಮನ್, ಬಿಲ್‌ಕಲೆಕ್ಟರ್ಸ್- ಹೀಗೆ ಹಲವು ಹುದ್ದೆ ನಿರ್ವಹಿಸುವ ಇತರರು ಇವರ ಅಧೀನದಲ್ಲಿ ಬರುತ್ತಾರೆ. ಇವರುಗಳಲ್ಲಿ ಪಿಡಿಓ ಹಾಗೂ ಗ್ರಾಮಪಂಚಾಯತ್ ಕಾರ್ಯದರ್ಶಿಗಳು ಸರ್ಕಾರದಿಂದ ನೇಮಕಗೊಂಡವರಾಗಿದ್ದು, ಇವರಿಗೆ ಸರ್ಕಾರದಿಂದ ನೇರ ಸಂಬಳ ಸಂದಾಯವಾಗುತ್ತದೆ.

ಪಂಚಾಯತಿ ವ್ಯಾಪ್ತಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ವಾರ್ಷಿಕ ಒಂದರಿಂದ ಒಂದೂವರೆ ಕೋಟಿ ಹಣ ನೇರ ಆ ಪಂಚಾಯತಿಯ ಪಿಡಿಓ ಖಾತೆಗೆ ಬರುತ್ತದೆ. ಇದು ಈ ಹುದ್ದೆಯಲ್ಲಿನ ಪ್ರಮುಖ ಅಂಶ. ಹಾಗೆಯೇ ಸ್ವಚ್ಛಗ್ರಾಮ ಯೋಜನೆ, ಆರೋಗ್ಯ ಶಿಕ್ಷಣದ ಬಗೆಗಿನ ಕಾರ್ಯಕ್ರಮಗಳು, ನಿರ್ಮಲ ಗ್ರಾಮ ಯೋಜನೆ, ಈ ಎಲ್ಲಾ ಯೋಜನೆಗಳ ಅನುಷ್ಠಾನ ಅನ್ವಯ ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಂದ ಜಿಲ್ಲೆಯ ಮುಖ್ಯಕಾರ್ಯ ನಿರ್ವಾಹಕರ ಮೂಲಕ ಪಿಡಿಓ ಖಾತೆಗೆ ಹಣ ಸಂದಾಯವಾಗುತ್ತದೆ. ಇದಲ್ಲದೆ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಗಳಿಗೆ ಪ್ರತ್ಯೇಕ



ಹಣ ಕೇಂದ್ರದಿಂದ ಸಂದಾಯವಾಗುತ್ತದೆ.

ಒಂದು ಪಂಚಾಯತಿಗೆ ವರ್ಷಕ್ಕೆ ರಾಜ್ಯಸರ್ಕಾರ 6 ಲಕ್ಷ ರೂ. ನೀಡುತ್ತದೆ. ತೆರಿಗೆಗಳನ್ನು ವಸೂಲಿ ಮಾಡುವುದನ್ನು ಸೇರಿದಂತೆ ಒಂದು ಪಂಚಾಯತಿಗೆ ವರ್ಷಕ್ಕೆ ಒಂದೂವರೆಯಿಂದ ಎರಡು ಕೋಟಿಯಷ್ಟು ಹಣ ಬರುತ್ತದೆ. ಇಷ್ಟೆಲ್ಲಾ ಉತ್ತಮ ಅಂಶಗಳಿದ್ದರೂ ಅಭಿವೃದ್ಧಿ ಕಾರ್ಯಮಾತ್ರ ಸಾಧ್ಯವಾಗುತ್ತಿಲ್ಲ. ಪಿಡಿಓಗಳು ಬೇಸತ್ತು ರಾಜೀನಾಮೆ ನೀಡಿ ವಾಪಸಾಗುತ್ತಿದ್ದಾರೆ. ಪ್ರಾಮಾಣಿಕರಾದವರು ಈ ಎಲ್ಲಾ ಸವಲತ್ತುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲು ಆಗುತ್ತಿಲ್ಲ. ಇದಕ್ಕೆಲ್ಲ ಪ್ರಮುಖ ಕಾರಣ ರಾಜಕೀಯ ಭ್ರಷ್ಟಾಚಾರ, ಅಕ್ರಮಗಳು, ಕಾನೂನುಬಾಹಿರ ಒತ್ತಡ.

ಭ್ರಷ್ಟ, ಅಕ್ರಮಗಳ ಸುಳಿ....

ಗ್ರಾಮೀಣ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮದಲ್ಲಿ ಉದ್ಯೋಗ ಸೃಷ್ಟಿಸಿ ಉದ್ಯೋಗ ನೀಡುವುದು, MGNREGAಯ ಮುಖ್ಯ ಉದ್ದೇಶ. ಇದರಿಂದಾಗಿ ಶಿಕ್ಷಣ ಗುಣಮಟ್ಟ ಕಾಯ್ದುಕೊಳ್ಳಬಹುದು. ಹಾಗೆಯೇ ಗುಳೇ ಹೋಗುವುದನ್ನು ತಪ್ಪಿಸಬಹುದು. ಹುಟ್ಟಿದ ಊರಲ್ಲೇ ನೆಲೆಯೂರುವುದರ ಜೊತೆಗೆ ಗ್ರಾಮೀಣ ಬದುಕನ್ನು ರೂಪಿಸಬಹುದು. ಇದಕ್ಕಾಗಿ ಕೇಂದ್ರ ಸರ್ಕಾರವು ವರ್ಷದಲ್ಲಿ ದಿನವೊಂದಕ್ಕೆ 125ರೂ.ಗಳಂತೆ 100 ದಿನ ಕೆಲಸ ನೀಡಬೇಕೆಂದು ಕಾನೂನು ಮಾಡಿದೆ. ಈ ಉದ್ದೇಶಕ್ಕಾಗಿ ನೀಡುವ ಹಣವು ಏಪ್ರಿಲ್ 1ರಿಂದ ಮಾರ್ಚ್ 31ರ ವರೆಗೆ ಖರ್ಚಾಗಬೇಕು. ಹಾಗೆಯೇ ಕೆಲಸವೂ ಪೂರ್ತಿಯಾಗಿರಬೇಕು. ಇದು ಕೇಂದ್ರದ ನಿರ್ದೇಶನ. ಆದರೆ ಯೋಜನೆ ಪೂರ್ತಿಗೊಳ್ಳಲು 'ವ್ಯವಸ್ಥೆ' ಸಹಕರಿಸಬೇಕಲ್ಲವೇ! ಹಾಗೆಯೇ ಈ ಯೋಜನೆಯಲ್ಲಿ ಹಣವನ್ನು 60% ಕಾರ್ಮಿಕರಿಗೆ 40% ಕಾಮಗಾರಿಯ ಸಾಮಗ್ರಿಗಳಿಗೆ ವಿನಿಯೋಗಿಸಬೇಕೆಂಬ ಆದೇಶವೂ ಇದೆ. ಆದರೆ ಎಲ್ಲಾ ಕಾಮಗಾರಿಗಳನ್ನು ಕಾರ್ಮಿಕರ ಬದಲಾಗಿ ಯಂತ್ರಗಳನ್ನು ಬಳಸಿ ನಿರ್ವಹಿಸಲಾಗುತ್ತಿದೆ.

ಆದರೆ ಇದನ್ನೆಲ್ಲ ಗಾಳಿಗೆ ತೂರುವ ಜನಪ್ರತಿನಿಧಿಗಳು ಇಂಜಿನಿಯರ್‌ಗಳ ಹತ್ತಿರ 'ರಾಂಗ್ ಎಸ್ಟಿಮೇಟ್' ಮಾಡಿಸಿ ತಮ್ಮ ಮನೆಯ ನೆಂಟರಿಷ್ಟರ, ತಮಗೆ ಬೇಕಾದವರ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡು ಕೆಲಸ ಮುಗಿಸಿರುವುದಾಗಿ ತೋರಿಸಿ ಹಣ ಮಾಡಿಕೊಳ್ಳುತ್ತಿದ್ದಾರೆ. ಇಂಜಿನಿಯರ್ 'ಎಸ್ಟಿಮೇಟ್' ಕೊಟ್ಟ ಅಂದರೆ ಪಿಡಿಓಗಳು ಹಣ ಬಿಡುಗಡೆಗೊಳಿಸಲೇಬೇಕು.

ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಗಳು ಮಹಿಳೆಯರ ಹೆಸರಿನಲ್ಲಿ ಸೂರಿಲ್ಲದವರಿಗೆ ಆಶ್ರಯ ನೀಡುವುದಕ್ಕಾಗಿ ರೂಪುಗೊಂಡಂತಹವು. ಆದರೆ ಜನಪ್ರತಿನಿಧಿಗಳು, ಸ್ಥಳೀಯ ರಾಜಕಾರಣಿಗಳು ಯಾರನ್ನೋ ತೋರಿಸಿ, ಅವರುಗಳ ಹೆಸರಿನಲ್ಲಿ ಹಣ ಪಡೆಯುತ್ತಾರೆ. ಮನೆಗಳ ನಿರ್ಮಾಣವೇ ಆಗದಿದ್ದರೂ ಯಾವುದೋ ಒಂದು ಮನೆ ಫೋಟೋ ತಂದು ಹಣ ಮಾಡಿಕೊಳ್ಳುತ್ತಿದ್ದಾರೆ. ಜಲಾನಯನ ಅಭಿವೃದ್ಧಿಗಾಗಿ ಪ.ಜಾ/ಪ.ಪಂ.ದವರು ಐದು ಎಕರೆಗಿಂತ ಕಡಿಮೆ ಜಮೀನು ಉಳ್ಳವರ ಅನುಕೂಲಕ್ಕಾಗಿಯೇ 'ಕೃಷಿ ಹೊಂಡಗಳ ನಿರ್ಮಾಣ' ಮಾಡುವುದಕ್ಕಾಗಿಯೇ ಒಂದು ಹೊಂಡಕ್ಕೆ 40 ಸಾವಿರ ರೂ. ನೀಡಲಾಗುತ್ತದೆ. ಆದರೆ ಯಂತ್ರಗಳನ್ನು ತಂದು ಸ್ವಲ್ಪ ಗುಳಿ ತೆಗೆದು ಫೋಟೋ ತೆಗೆಸಿ ಆ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ. ಇದು ಸರಿಯಲ್ಲವೆಂದು ನಿಯಮಪಾಲಿಸಲು ಹೇಳಿದರೆ ಮೇಲಧಿಕಾರಿಗಳ, ಪ್ರತಿನಿಧಿಗಳ ಒತ್ತಡ. ಹಣ ಬಿಡುಗಡೆ ಮಾಡಲೇಬೇಕಾಗುತ್ತದೆ. ಹಾಗೆಯೇ ಗ್ರಾಮಪಂಚಾಯತಿ ವ್ಯಾಪ್ತಿಯ ಶಾಲಾಕಾಲೇಜು ಕಾಂಪೌಂಡ್ ನಿರ್ಮಾಣ, ರಸ್ತೆ ನಿರ್ಮಾಣ, ಚರಂಡಿ ವ್ಯವಸ್ಥೆ ಗಿಡಮುಳ್ಳುಗಳನ್ನು ತೆಗೆದು ಸುದ್ದಿಗೊಳಿಸುವುದು ಹೀಗೆ ಹಲವು ಕಾರ್ಯಕ್ರಮಗಳಿಗೆ ಹಣ ಬಳಸಿಕೊಳ್ಳುವುದರ ಬಗ್ಗೆ ಕೆಲವು ನೀತಿನಿಯಮಗಳಿವೆ. ಆದ್ದರೆ ಈ ನೀತಿ-ನಿಯಮಗಳಿಗೆ ಬೆಲೆಯಿಲ್ಲದಂತಾಗಿದೆ. ಅಲ್ಲದೇ ಎಲ್ಲವೂ ಕಮಿಷನ್ ಮೇಲೆ ನಿಂತಿದೆ. ಮೋರಿಯ ಪೈಪ್ ಒಡೆದಿದೆ ಎನ್ನುತಾರೆ, ಹಣ ಬಿಡುಗಡೆ ಮಾಡುವಂತೆ ಒತ್ತಡ ಹಾಕುತ್ತಾರೆ. ಪಿಡಿಓಪರಿಶೀಲನೆಗೆಂದು ಹೋದಲ್ಲಿ ಅದು ಸರಿಯಿರುತ್ತದೆ. ಆ ಊರಿನ ಪ್ರತಿಯೊಂದು ಕೋಮಿನವರೂ ಬಂದು ಅವರವರ ಹಬ್ಬಗಳಿಗೆ ಹಣ ನೀಡುವಂತೆ ಒತ್ತಾಯ ಹಾಕುತ್ತಾರೆ, ಅಲ್ಲಿನ ಜನಪ್ರತಿನಿಧಿಗಳು 'ಸರ್ಕಾರಿ ಹಣ ಕೊಡೋಕೆ ನಿಮಗೇನ್ರಿ?' ಅಂತ ಬೆದರಿಸುತ್ತಾರೆ.

ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಪಿಡಿಓಗಳಿಗೆ ಹತಾಶೆಯಾಗುತ್ತಿರುವುದು ಇದರಿಂದಲೇ. ಈಗಾಗಲೇ ರಾಯಚೂರು ಜಿಲ್ಲೆಯಾದ್ಯಂತ ಪಿಡಿಓಗಳು ಗ್ರಾಮ ಪಂಚಾಯತಿ ಮೆಂಬರ್‌ಗಳ ವಿರುದ್ಧ ಮುಷ್ಕರ ಮಾಡಿದ್ದಾರೆ. ನೂರಾರು ಪಿಡಿಓಗಳು ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ.

ಅಬ್ದುಲ್ ನಜೀರ್ ಸಾಬರು ಕರ್ನಾಟಕದಲ್ಲಿ ಗ್ರಾಮಪಂಚಾಯತಿ ವ್ಯವಸ್ಥೆ ರೂಪಿಸುವಾಗ ಅದೇನು ಕನಸು ಕಂಡಿದ್ದರೋ ಏನೋ?

ಆದರೀಗ ಬಹುತೇಕ ಮೆಂಬರ್‌ಗಳು ಭ್ರಷ್ಟರೂ, ಖದೀಮರೂ ಆಗಿ ಹೋಗಿದ್ದಾರೆ. ಇವರನ್ನು ನಿಯಂತ್ರಿಸುವವರು ಯಾರು? ●

ಮಂಡ್ಯ ನಗರಸಭೆ ರಾಮಸ್ವಾಮಿಯ ಏತುವಳಿ ರಾಮೊಾಯಣ!





ಮಂಡ್ಯ ನಗರಸಭೆಗೆ ತಗುಲಿಕೊಂಡಿರುವ ಆಯುಕ್ತ ರಾಮಸ್ವಾಮಿ ಅಕ್ರಮಗಳಿಂದಲೇ ಹೆಸರುವಾಸಿಯಾದವನು. ನಿವೃತ್ತಿಗೆ ಮೂರೇ ತಿಂಗಳು ಬಾಕಿ ಇರುವುದರಿಂದ ನಗರಸಭೆಯ ಆದಾಯದ ಮೂಲಗಳೇ ಬತ್ತುವಂತೆ ಮಾಡಿ ತನ್ನ ತಿಜೋರಿ ತುಂಬಿಸಿಕೊಳ್ಳುತ್ತಿದ್ದಾನೆ. ತನ್ನ ವರ್ಗಾವಣೆ ಆದೇಶಕ್ಕೂ ತಡೆಯಾಜ್ಞೆ ತಂದು ಶನಿಯಂತೆ ಅಟಕಾಯಿಸಿ ಕೊಂಡಿದ್ದಾನೆ.


ರಾಮಸ್ವಾಮಿ ಕಸದಿಂದ ಹಿಡಿದು, ಕಾಮಗಾರಿ, ಅಕ್ರಮ ಖಾತೆ, ಖೊಟ್ಟಿ ಬಿಲ್ಲುಗಳಿಂದ ಮಾಡಿಟ್ಟ ಆಸ್ತಿಪಾಸ್ತಿಗಳೇ ನೂರಾರು ಕೋಟಿಗಳನ್ನ ಮೀರುತ್ತವೆ. ಇದಕ್ಕೆ ಲೋಕಾಯುಕ್ತರು ಹಾಕಿರುವ ಕ್ರಿಮಿನಲ್ ಕೇಸ್ ಸಂಖ್ಯೆ:39/2002 ಸಾಕ್ಷಿ. ರಾಮಸ್ವಾಮಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಾದರೂ ಹಾಲಿ ಪಾರ್ಕ್ ಇನ್ಸ್‌ಪೆಕ್ಟರ್ ಹುದ್ದೆ ನಿರ್ವಹಿಸುತ್ತಿರುವ ಪಾಖಡಾ ಶಿವರಾಜ್, ನಕಲಿ ಬಿಲ್ ಖ್ಯಾತಿಯ ಎಸ್.ಕೆ.ರಾಜು, ಕ್ಯಾಶಿಯರ್ ಮಂಜುನಾಥ್‌ರೆಂಬ ಖದೀಮರನ್ನ ಬಳಸಿಕೊಂಡು ನಗರಸಭೆಯಲ್ಲಿ ಅಕ್ರಮ ದಂಧೆಗಳನ್ನ ಅಡೆತಡೆಗಳಿಲ್ಲದೆ ಮುಂದುವರೆಸುತ್ತಿದ್ದಾನೆ.

ರಾಮಸ್ವಾಮಿ ಕಳೆದ ಆರು ವರ್ಷಗಳಿಂದ ನಡೆಸಿರುವ ಅಕ್ರಮಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗುತ್ತದೆ. ಅಂತಹ ಅಕ್ರಮಗಳಲ್ಲಿ ಕೆಲವೊಂದು ಸ್ಯಾಂಪಲ್‌ಗಳು ಇಲ್ಲಿವೆ. ಮಂಡ್ಯದಲ್ಲಿ ಅತ್ಯಂತ ದುಬಾರಿ ಫೀ ವಸೂಲಿ ಮಾಡುವ ಡೆಪೋಡಿಲ್ಸ್ ವಿದ್ಯಾಸಂಸ್ಥೆಯ ಪ್ರಕರಣ. ಇದು ವಿಧಾನಪರಿಷತ್‌ನ ಉಪಸಭಾಪತಿ ವಿಮಲಾಗೌಡರ ಸಹೋದರಿ ಸುಜಾತ ಕೃಷ್ಣರದ್ದು. ಈ ಲಾಭಕೋರ ಖಾಸಗೀ ಸಂಸ್ಥೆಗೆ ಮೇಡಮ್ ವಿಮಲರ ಎಮ್ಮೆಲ್ಸಿ ನಿಧಿಯಿಂದ 10 ಲಕ್ಷ ರೂ.ಗಳನ್ನು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ಹಾಕಿಕೊಳ್ಳಲು ಕೊಡಲಾಗಿದೆ. ಸರ್ಕಾರದ ದುಡ್ಡಲ್ಲೇ ಸರ್ಕಾರಿ ಜಮೀನನ್ನ ಕಬಳಿಸುವ ಈ ಕೆಲಸಕ್ಕೆ ಬೆನ್ನೆಲುಬಾಗಿ ನಿಂತವನು ರಾಮಸ್ವಾಮಿ!

ಮಂಡ್ಯ ನಗರದಲ್ಲಿನ ಸುಮಾರು 30 ಸಮುದಾಯ ಭವನಗಳಿಂದ ಪ್ರತಿ ತಿಂಗಳು ವಸೂಲಿ ಮಾಡುವ ರಾಮಸ್ವಾಮಿ 1.5 ಲಕ್ಷದಷ್ಟು ಕಾಣಿಸುತ್ತಾನೆ. ಇದು ಮಂಡ್ಯ ನಗರಸಭೆಗೆ ಸೇರಬೇಕಾದ ಹಣ. ತ್ಯಾಜ್ಯ ವಿಲೇವಾರಿ, ನಿರ್ವಹಣೆಗಾಗಿ ದಿನ ಒಂದಕ್ಕೆ 200 ರೂ.ಗಳನ್ನ ನಗರಸಭೆಗೆ ಕಟ್ಟಬೇಕು. ತಿಂಗಳಿಗೆ 6000 ರೂಪಾಯಿಗಳನ್ನು ಸಮುದಾಯ ಭವನಗಳಿಂದ ಕಟ್ಟಬೇಕೆಂದು ಪೌರಾಡಳಿತ ಇಲಾಖೆಯ ಸುತ್ತೋಲೆಯೂ ಇದೆ. ಆದರೆ ಈ ನಿಯಮವನ್ನೇ ಗಾಳಿಗೆ ತೂರಿ ಸಾರ್ವಜನಿಕರ ಅಭಿವೃದ್ಧಿಗೆ ಖರ್ಚಾಗಬೇಕಾಗಿದ್ದ ಹಣವನ್ನ ತಮ್ಮಪ್ಪನ ಮನೆಯ ಆಸ್ತಿ ಎಂಬಂತೆ ಆಯುಕ್ತ ರಾಮಸ್ವಾಮಿ ಅಂಡರ್‌ಸ್ಟ್ಯಾಂಡಿಗ್ ಬಿಲ್ ಹಾಕಿ ತನ್ನ ಜೋಳಿಗೆಗೆ ತುಂಬಿಸಿಕೊಳ್ಳುತ್ತಿದ್ದಾನೆ.



ಶಂಕರ್‌ನಗರದಲ್ಲಿನ ಅವಲಕ್ಕಿ ಮಿಲ್ ಜಾಗ ಮೊದಲಿಗೆ ಕೈಗಾರಿಕಾ ಪ್ರದೇಶ ಎಂದಿತ್ತು, ರಾತ್ರೋರಾತ್ರಿ ಅದು ನಿವೇಶನಗಳಾಗಿ ಬದಲಾಗಿಹೋಗಲು ರಾಮಸ್ವಾಮಿಯ ಕುಮ್ಮಕ್ಕಿದೆ. ಸರ್ಕಾರಕ್ಕೆ ಕಟ್ಟಬೇಕಾಗಿದ್ದ ಲಕ್ಷಾಂತರ ರೂ.ಗಳನ್ನ ರಿಯಲ್‌ಎಸ್ಟೇಟ್ ಕುಳಗಳ ಜೊತೆ ಸೇರಿ 7-8 ಲಕ್ಷಗಳನ್ನ ತನ್ನ ಜೇಬಿಗಿಳಿಸಿಕೊಂಡ. ಇದರಲ್ಲಿ ಮಾಮೂ ಕೆಲಸ ಮಾಡಿದ್ದು ಶಿವರಾಜು ಎಂಬಾತ ಎಂಬ ಸುದ್ದಿ ಹರಿದಾಡತೊಡಗಿದೆ. ಆದರೆ ಇದರಲ್ಲಿ ಪಾಲು ಪಡೆಯದೆ ಇದ್ದ ಎಫ್‌ಡಿಎಗಳಾದ ಲಕ್ಷ್ಮಿನಾರಾಯಣ, ಜಯರಾಂ ಮತ್ತು ಕಂದಾಯ ಅಧಿಕಾರಿ ಕೆಂಪಯ್ಯರನ್ನ ತನಿಖೆ ನಡೆಸುತ್ತಿದ್ದ ಎಸಿ ಲತಾಗೆ ಕೈ ಬಿಸಿಮಾಡಿ ಸಸ್ಪೆಂಡ್ ಮಾಡಿಸಿ ರಾಮಸ್ವಾಮಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದಾನೆ.


ಕರ್ನಾಟಕ ಸರ್ಕಾರ

... 10 ... 2011

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:08.02.2011.


[illegible]


[illegible]

(ಸಹಿ)

ಮಂಡ್ಯ ನಗರದಲ್ಲಿ ಉಪಯೋಗವಾಗದ ಜಾಗಗಳಲ್ಲಿ ರಾರಾಜಿಸುತ್ತಿರುವ ಹೈಮಾಸ್ಟ್ ದೀಪಗಳನ್ನು 32 ವಾರ್ಡ್‌ಗಳಲ್ಲಿ ಅನಗತ್ಯವಾಗಿ ಹಾಕಿಸಲಾಗಿದೆ. ಒಂದು ಹೈಮಾಸ್ಟ್ ದೀಪಕ್ಕೆ ತಗಲುವ ವೆಚ್ಚವೇ 11 ಲಕ್ಷವಾದರೆ ಇದನ್ನ ಯರ್ರಾಬಿರ್ರಿ ಹಾಕಿ ನುಂಗಲಾಗಿದೆ. ಮಂಡ್ಯ ನಗರದ ಅಭಿವೃದ್ಧಿಗೆಂದು ಬಿಡುಗಡೆಯಾಗಿರುವ 30 ಕೋಟಿ ಹಣದಲ್ಲಿ ಪಕ್ಷಭೇದ ಮರೆತು ನಗರಸಭಾ ಸದಸ್ಯರು - ಇತ್ತೀಚೆಗೆ ನೇಮಕವಾಗಿರುವ ನಾಮನಿರ್ದೇಶಿತ ಸದಸ್ಯರೂ ಸೇರಿದಂತೆ - ಜಂಟಿ ಭೋಜನವನ್ನೇ ಮಾಡಿದ್ದಾಗಿದೆ. ಇದರಲ್ಲಿ ನಗರಸಭಾ ಸದಸ್ಯರಾದ ಶಂಕರೇಗೌಡ ಮತ್ತು ಶಿವಪ್ರಕಾಶ್ ಬಾಬು ಬೇನಾಮಿಗಳ ಹೆಸರಿನಲ್ಲಿ ಟೆಂಡರ್ ಪಡೆದು ಕಾಮಗಾರಿಗಳಲ್ಲಿ ನಡೆಯುತ್ತಿರುವ ಹಗಲು ಲೂಟಿಬೆಚ್ಚಿ ಬೀಳುವಂತಿದೆ. ಆದರೆ ಬೇರೆ ಸದಸ್ಯರು ತಮ್ಮ ತಮ್ಮ ವಾರ್ಡ್‌ಗಳಲ್ಲಿ ಇದನ್ನೇ ಮಾಡುತ್ತಿರುವುದರಿಂದ ಒಬ್ಬರಿಗೊಬ್ಬರು ಸಹಕಾರ ಕೊಡುತ್ತಿದ್ದಾರೆ.

ನಗರದಲ್ಲಿರುವ ನಗರಸಭಾ ಆಸ್ತಿಪಾಸ್ತಿಗಳು ಉಳ್ಳವರ ಪಾಲಾಗಲು ರಾಮಸ್ವಾಮಿ ಶಿಷ್ಯ ಶಿವರಾಜನೇ ಕಾರಣ. ಶಿವರಾಜು ಮೂಲತಃ ಮದ್ದೂರಿನ ವಳಗೆರೆಹಳ್ಳಿಯವ, ಬಡ ಕುಟುಂಬದಿಂದ ಬಂದವ. ಇಂದು ಕೋಟಿಕುಳ. ಈತನ ನಮಕ್‌ಹರಾಂ ಬುದ್ಧಿಯನ್ನ ಕಂಡವರು ಈತನನ್ನು ಹತ್ತಿರವೂ ಸೇರಿಸುತ್ತಿರಲಿಲ್ಲ. ಆದರೆ ರಾಮಸ್ವಾಮಿ ಆಯುಕ್ತನಾಗಿ ಬಂದಮೇಲೆ ಶಿವರಾಜ್ ಆತನಿಗೆ ಹತ್ತಿರವಾದ. ಈ ಹಿಂದೆ ನಟೋರಿಯಸ್ ಪಾತಕಿ ಜಡೇಜಾ ರವಿ ನಗರಸಭಾ ಸದಸ್ಯನಾಗಿದ್ದಾಗ ಇಡೀ ಮಾರುಕಟ್ಟೆಯನ್ನೇ ಬರೆದುಕೊಟ್ಟಂತಾಗಿ ವಸೂಲಿಗಿಳಿದಿದ್ದ. ಅದರಲ್ಲಿ ಪಾಲು ಪಡೆಯುತ್ತಿದ್ದವ ಇದೇ ಶಿವರಾಜು. ಜಡೇಜಾ ರವಿ ಶಂಕ್ರನ ಹುಡುಗರಿಂದ ಹತ್ಯೆಯಾದ ಬಳಿಕ ಬೇನಾಮಿ ಹೆಸರಿನಲ್ಲಿ ಅಂಗಡಿಗಳನ್ನ ಹಿಡಿದು ಪಾತಕಿ ರವಿಯ ಕೆಲಸಗಳನ್ನ ಶಿವರಾಜು ಮುಂದುವರೆಸಿದ್ದಾನೆ. ಮಹಾವೀರ ಸರ್ಕಲ್‌ನಲ್ಲಿ ಜಗನ್ನಾಥ್ ಶೆಟ್ಟಿಯ ಶ್ರೀನಿಧಿ ಗೋಲ್ಡ್‌ಗೆ, ಶ್ರೀನಿವಾಸ್ ಮೆಡಿಕಲ್‌ಗಳಿಗೆ ನೀಡಿರುವ ಕಾನೂನುಬಾಹಿರ ಮಳಿಗೆಗಳನ್ನ ಮುಂದುವರೆಸಿ ನಗರಸಭೆಯ ಆಸ್ತಿಗೆ ಕನ್ನ ಕೊರೆದಿದ್ದಾರೆ. ಇದು ರಾಜ್ಯ ಉಚ್ಚನ್ಯಾಯಾಲಯದ ಮೆಟ್ಟಿಲನ್ನ ಹತ್ತಿದ್ದು ನಗರಸಭೆಗೆ ಜಾಡಿಸಿ ಮರು ಟೆಂಡರ್ ಕರೆಯಲು ಸೂಚಿಸಿದೆ. ಆದರೆ ನ್ಯಾಯಲಯದ ತೀರ್ಪನ್ನೇ ಉಲ್ಲಂಘಿಸಲಾಗಿದೆ.


ಶಂಕರೇಗೌಡ




ಶಿವರಾಜ್

ರಾಮಸ್ವಾಮಿಯ ಸಾಮ್ರಾಜ್ಯದಲ್ಲಿ ನಗರದೆಲ್ಲೆಡೆ ಅಕ್ರಮ ಕಟ್ಟಡಗಳು ನಿಯಮಗಳನ್ನ ಗಾಳಿಗೆ ತೂರಿ ತಲೆ ಎತ್ತಿವೆ. ಎಮ್ಮೆಲ್ಲೆ ಪುಟ್ಟರಾಜು ಚೇಲಾ ಕೃಷ್ಣ ತನ್ನ ಕಾವೇರಿ ನರ್ಸಿಂಗ್ ಹೋಂ ಕಟ್ಟಡವನ್ನ ರಸ್ತೆಯನ್ನೂ ಸೇರಿಸಿಕೊಂಡು ಕಟ್ಟುತ್ತಿದ್ದರೂ ಆಯುಕ್ತ ರಾಮಸ್ವಾಮಿ ಮಾತ್ರ ಮುಗುಂ ಆಗಿದ್ದಾನೆ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಸಾದತ್ ಆಲಿಖಾನ್‌ರ ಬಾಟಾ ಶೋರೂಂ, ವಿನೋಭಾ ರಸ್ತೆಯಲ್ಲಿನ ತಮ್ಮಣ್ಣನ ಸಂಬಂಧಿಯ 'ಚಂದ್ರದರ್ಶನ್ ರೆಸಿಡೆನ್ಸಿ' ಹೋಟೆಲ್‌ಗಳು ರಾಮಸ್ವಾಮಿಯ ನೆರಳಿನಲ್ಲೇ ನಿಯಮಗಳನ್ನ ಉಲ್ಲಂಘಿಸಿ ತಲೆ ಎತ್ತಿವೆ. ಆಯುಕ್ತ ರಾಮಸ್ವಾಮಿ ಪಕ್ಷಭೇದ ಮರೆತು ಮೈಶುಗರ್ ಅಧ್ಯಕ್ಷ ನಾಗರಾಜಪ್ಪನ ಬೀಗ ಡಾ.ಜಯರಾಂಗೆ ನಗರಸಭೆ ಆಸ್ತಿಯಿರುವ ಹೊಸ ಬಸ್ ನಿಲ್ದಾಣದ ಬಳಿ ಎರಡು ಅಂಗಡಿ ಮಳಿಗೆಗಳನ್ನ ಕಟ್ಟಿಕೊಂಡು ಬಾಡಿಗೆ ಪಡೆಯಲು ಜಾಗವನ್ನೇ ಬಳುವಳಿಯಾಗಿ ನೀಡಿದ್ದಾನೆ.


ಇತ್ತೀಚೆಗೆ ಜಿಲ್ಲಾ ಯೋಜನಾ ನಿರ್ದೇಶಕರಾಗಿ ಬಂದಿರುವ ಕಡಕ್ ಅಧಿಕಾರಿ ರಾಜು ನಗರಸಭೆಯ ಅದ್ವಾನಗಳ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಭೇಟಿ ನೀಡಿದಾಗ ಹಲವಾರು ಅಕ್ರಮಗಳು ಕಂಡುಬಂದಿವೆ. ಅವರು ಈ ಅಕ್ರಮಗಳನ್ನ ತಡೆಯಲು ಸೂಚಿಸಿದ್ದಾರೆ. ಶಿವರಾಜು ಮತ್ತು ರಾಮಸ್ವಾಮಿ ತಮ್ಮ ಅಕ್ರಮಗಳು ಬಯಲಿಗೆ ಬರುತ್ತವೆಂಬ ವಾಸನೆ ಹಿಡಿದು ರಾಜು ಅವರವರನ್ನೇ ವರ್ಗಾವಣೆ ಮಾಡಿಸುವ ಸಂಚು ಹೂಡಿದ್ದಾರೆ. ಇದಕ್ಕಾಗಿ ನಾಗಮಂಗಲದ ಮಾಜಿ ಶಾಸಕ ಮತ್ತು ಹಾಲಿ ಬಿಜೆಪಿ ಪುಢಾರಿಯಾಗಿರುವ ಎಲ್.ಆರ್.ಶಿವರಾಮೆಗೌಡನಿಗೆ 2 ಲಕ್ಷಗಳ ಸುಪಾರಿ ನೀಡಿದ್ದಾರೆಂಬ ಸುದ್ದಿ ಎಲ್ಲಾ ಕಡೆ ಹರಿದಾಡುತ್ತಿದೆ.

ಮಂಡ್ಯ ನಗರಸಭಾ ಸದಸ್ಯರು ಪ್ರಶ್ನೆ ಮಾಡುವ ಛಾತಿ ಕಳೆದುಕೊಂಡಿದ್ದಾರೆ. ಪ್ರಶ್ನೆ ಮಾಡಬೇಕಾದ ಸಂಘಟನೆಗಳಲ್ಲಿ ಬಹುಪಾಲು ಸಂಘಟನೆಗಳು ರಾಮಸ್ವಾಮಿಯ ಋಣದ ಮರ್ಜಿಗೆ ಬಿದ್ದು ತೆಪ್ಪಗಾಗಿವೆ. ಮಾಹಿತಿ ಹಕ್ಕಿನ ಸಾರ್ವಜನಿಕ ಉದ್ದೇಶವನ್ನೇ ಅರಿಯದೆ ಅದನ್ನೇ ಒಂದು ಅಸ್ತ್ರವಾಗಿ ಉಪಯೋಗಿಸಿಕೊಂಡು, ಪತ್ರಿಕೆಗಳಲ್ಲಿ 'ಪ್ರಗತಿಪರ ಹೋರಾಟಗಾರರು' ಎಂದು ಬರೆಸಿಕೊಳ್ಳುವ ದಂಧೆಕೋರರಿಗೂ ರಾಮಸ್ವಾಮಿಯ ಪ್ರಸಾದ ತಲುಪಿರುವುದರಿಂದ ಅವರ್‍ಯಾರೂ ನಗರಸಭೆಯ ಕಡೆ ತಿರುಗಿಯೂ ನೋಡುತ್ತಿಲ್ಲ ಎಂಬುದು ಹಲವರ ಮಾತಾಗಿದೆ.

ಇದು ಪ್ರಾಮಾಣಿಕ, ಸಜ್ಜನ ಎಂದೆಲ್ಲಾ ಕರೆಸಿಕೊಳ್ಳುವ ಸುರೇಶ್ ಕುಮಾರ್ ಸಚಿವರಾಗಿರುವ ಇಲಾಖೆಯ ಆಯುಕ್ತನೊಬ್ಬ ಎಬ್ಬಿಸುತ್ತಿರುವ ಭ್ರಷ್ಟಾಚಾರದ ರಾಡಿ. ಇದಕ್ಕೆ ಸಚಿವರೇ ಉತ್ತರ ನೀಡಬೇಕಿದೆ. ಖದೀಮ ರಾಮಸ್ವಾಮಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕಿದೆ. ಇದು ಬಿಜೆಪಿ ಸರ್ಕಾರದಲ್ಲಿ ಸಾಧ್ಯವೇ?


• ಲಕ್ಷ್ಮಣ್ ಚೀರನಹಳ್ಳಿ

ಇವರು ವೈಟ್ ಕಾಲರ್ ಭಿಕ್ಷುಕರಂತೆ!?



ಮಂಡ್ಯದ ಶಾಸಕ ಎಂ.ಶ್ರೀನಿವಾಸ್ ಸೇರಿದಂತೆ ಮಂಡ್ಯ ನಗರಸಭಾ ಸದಸ್ಯರುಗಳು, ಇಲ್ಲಿ ಆಯ್ಕೆಯಾಗುವ ಅಧ್ಯಕ್ಷ ಉಪಾಧ್ಯಕ್ಷರಾದಿಯಾಗಿ ಮಂಡ್ಯದ ಬಹುಪಾಲು ಪತ್ರಕರ್ತರೂ ವೈಟ್ ಕಾಲರ್ ಬಿಕ್ಷುಕರು! ಹೀಗೆಂದವರು ಬೇರಾರು ಅಲ್ಲ, ಆಯುಕ್ತ ರಾಮಸ್ವಾಮಿ!! ಇದು ಸತ್ಯವೂ ಹೌದು. ರಾಮಸ್ವಾಮಿ ತಿನ್ನುವ ಅಮೇಧ್ಯದಲ್ಲಿ ತನ್ನಂತೇ ಇರುವ ಹಲವರನ್ನೂ ಸಾಕುತ್ತಿರುವುದೇ ಇದಕ್ಕೆ ಸಾಕ್ಷಿ.

ಮಂಡ್ಯಕ್ಕೆ ನೇಮಕವಾಗುವ ಉಸ್ತುವಾರಿ ಮಂತ್ರಿಗಳಿಗೆ ಆಡಳಿತ ಪಕ್ಷದ ಸದಸ್ಯರಿಗಿಂತ ಮುಂಚಿತವಾಗಿ ಈ ರಾಮಸ್ವಾಮಿ ಕಾಲಿಗೆಬಿದ್ದು ಕಾಣಿಕೆ ಸಲ್ಲಿಸಿಬಿಡುತ್ತಾನೆ. ಹಾಲಿ ಸಚಿವ ಆರ್.ಅಶೋಕ ಮಹಾಶಯರು ಇದಕ್ಕೆ ಹೊರತಲ್ಲ. ಸದ್ಯ ಮಂಡ್ಯ ನಗರ ಸಭೆಯಲ್ಲಿ ವಿರೋಧ ಪಕ್ಷಗಳೇ ಇಲ್ಲದಂತಾಗಿದೆ. ಇದ್ದರೂ ಅವು ರಾಮಸ್ವಾಮಿಯ ಅಮೇಧ್ಯಕ್ಕೆ ಶರಣು ಶರಣೆಂದಿವೆ. ಸಭೆಗಳಲ್ಲಿ ದನಿ ಎತ್ತುತ್ತಿದ್ದ ಕಲ್ಲಹಳ್ಳಿ ನಾಗೇಂದ್ರ, ಸೌದೆ ಡಿಪೋ ಕುಮಾರ, ಭೈರನೂ ಪಕ್ಷಾಂತರ ಕಾಯ್ದೆಯಡಿ ವಜಾಗೊಳ್ಳುವ ಭೀತಿಯಲ್ಲಿ ಬಾಯಿಗೆ ಬೀಗ ಜಡಿದು ಕುಳಿತಿದ್ದಾರೆ. ಅಧ್ಯಕ್ಷ ಅರುಣ್ ಕುಮಾರ್ ಕಾನೂನು ತಿಳಿಯದ ಅಜ್ಞಾನಿಯಂತಾಗಿ ರಾಮಸ್ವಾಮಿಯ ಶಿಷ್ಯನಾಗಿದ್ದಾನೆ. ಉಪಾಧ್ಯಕ್ಷ ಎಂ.ಜೆ.ಚಿಕ್ಕಣ್ಣ ತನ್ನೆಲ್ಲಾ ಅಕ್ರಮ ನಿವೇಶನಗಳು ಬೆಳಕಿಗೆ ಬರುತ್ತವೆಂಬ ಭೀತಿಯಿಂದ ತೆಪ್ಪಗಿದ್ದಾನೆ. ಹಗರಣಗಳನ್ನ ಬಯಲಿಗೆಳೆಯಬೇಕಾಗಿದ್ದ ಪತ್ರಕರ್ತರು ರಾಮಸ್ವಾಮಿಯ ತಿಂಗಳ ಮಂತ್ಲಿಗೆ, ಲ್ಯಾಪ್‌ಟಾಪ್‌ಗಳಿಗೆ, ಕ್ಯಾಮರಗಳಿಗೆ ಹರಾಜಾಗಿದ್ದಾರೆ. ಹೀಗಾದರೆ ಮಂಡ್ಯ ಜನರ ಪಾಡೇನು?



ಕೈದಿಗಳ ಕಾಳಗಕ್ಕೆ ಧೂಳೆದ್ದ ಹುಬ್ಬಳ್ಳಿ ಕಾರಾಗೃಹ!

ಶಾಸಕ ವೀರಭದ್ರಪ್ಪ ಹಾಲಹರವಿ ತನ್ನ ಕಡುವೈರಿ ಗಳಾದ ರಜನಿ ಮತ್ತು ದುರ್ಗಪ್ಪ ಬಿಜವಾಡರನ್ನ ಮಾಡಿಸಿ ನಿಶ್ಚಿಂತನಾಗಿರಲು ಸಂಚು ರೂಪಿಸಿದ್ದಾನೆಯೇ? ಇಬ್ಬರು ರೌಡಿಗಳನ್ನು ಗುಲ್ಬರ್ಗಾ ಜೈಲಿಗೆ ಶಿಫ್ಟ್ ಡಿಸಿ ಅಲ್ಲಿಯೇ ಫಿನಿಷ್ ಮಾಡಿಸುವ ಹಾಲಹರವಿಯ ಗೆ ಮಂತ್ರಿ ಜಗದೀಶ ಶೆಟ್ಟರ್, ಸಿ.ಎಂ.ಉದಾಸಿ ಸಾಥ್ ದ್ದಾರೆಯೇ? ಮೊನ್ನೆ ಹುಬ್ಬಳ್ಳಿ ಜೈಲಿನಲ್ಲಿ ನಡೆದ 'ಮಿನಿ ದ್ಧ' ಇಂತಹ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ರಜನಿ ಮತ್ತು ದುರ್ಗಪ್ಪ ಬಿಜವಾಡ ಮತ್ತು ಬಿಜೆಪಿ ಬಲಿತ ಪೊಲೀಸ್ ಅಧಿಕಾರಿಗಳ ನಡುವೆ ಜೈಲಿನಲ್ಲಿ ದ ಸಮರದಲ್ಲಿ ಜೈಲಿನಲ್ಲಿದ್ದ 97 ಜನ ಕೈದಿಗಳು ಜವಾಡದ್ವಯರಿಗೆ ಬೆಂಬಲವಾಗಿ ನಿಂತಿದರಲ್ಲದೆ, ಾವತ್ತು ಜನ ಪೊಲೀಸರನ್ನು ಅಟ್ಟಾಡಿಸಿ ಹೊಡೆದಿದ್ದಾರೆ. ಗಳ ಆಕ್ರೋಶಕ್ಕೆ ಜೈಲಿನ ಅಡುಗೆ ಮನೆ, ವಿಡಿಯೋ ನ್ಫರೆನ್ಸ್ ರೂಮ್ ಸೇರಿದಂತೆ ಎಲ್ಲ ಬ್ಯಾರಕ್‌ಗಳ ಬಾಗಿಲುಗಳು ಚೆಲ್ಲಾಪಿಲ್ಲಿಯಾಗಿವೆ. ಇದೆಲ್ಲ ನಡೆದಿದ್ದು ತಕಿ ಸೈಂಟಿಸ್ಟ್ ಮಂಜ್ಯಾನ ಸಾರಥ್ಯದಲ್ಲಿ. ಆದರೂ ರ್ಗಪ್ಪ ಬಿಜವಾಡನನ್ನು ಗುಲ್ಬರ್ಗಾಕ್ಕೆ ಶಿಫ್ಟ್ ಮಾಡಲಾಗಿದೆ. ನಿ ಬಿಜವಾಡ ಎದೆನೋವಿನ ಕಾರಣದಿಂದ ಕಿಮ್ಸ್‌ನಲ್ಲಿ ಖಲಾಗಿ ಇಲ್ಲೇ ಸೇಫಾಗಿದ್ದಾನೆ.

ಹುಬ್ಬಳ್ಳಿ ಪಾತಕ ಪ್ರಪಂಚಕ್ಕೆ ಬಿಜವಾಡಗಳೇ ಡಾನ್. ದ ಮೂವತ್ತು ವರ್ಷಗಳಿಂದ ವಂಶಪಾರಂಪರಿಕವಾಗಿ ಿಜಂನ್ನೇ ಮೂಲ ಕಸುಬನ್ನಾಗಿ ನಡೆಸಿಕೊಂಡು ಬಂದಿರುವ ರಪ್ಪ ಬಿಜವಾಡನೇ ಇದರ ಪಿತಾಮಹ.

ತರ ದುರ್ಗಪ್ಪ ಹಾಗೂ ರಜನಿ ಜವಾಡ ಕಳೆದ ಏಳೆಂಟು ವರ್ಷಗಳಿಂದ ಟ್ಲ್‌ಮೆಂಟ್‌ನ ಬಾಸ್ ಆಗಿದ್ದಾರೆ. ಅಲ್ಲದೆ ಜಕೀಯಕ್ಕೂ ಕಾಲಿಟ್ಟು ತನ್ನ ಪ್ರಭಾವ ಚ್ಚಿಸಿಕೊಂಡು ಜನರ ಮಧ್ಯೆ ಬಿಂದಾಸ್ ಓಡಾಡಿಕೊಂಡು ಇದ್ದವರು. ರ್ಗಪ್ಪ ಒಂದು ಅವಧಿ ಮಹಾನಗರ ಲಿಕೆ ಸದಸ್ಯನಾಗಿದ್ದವನು. ರಜನಿ ನಾವಣೆಗೆ ನಿಂತು ಸೋತವನು. ಆದರೆ ವರ ಸಹೋದರಿ ಲಕ್ಷ್ಮಿ ಬಿಜವಾಡ ಗ ಪಾಲಿಕೆ ಮೆಂಬರ್ ಆಗಿದ್ದಾಳೆ. ವರೆಲ್ಲಾ ಕಾಂಗ್ರೆಸ್ ಪಕ್ಷದಿಂದ ಗೆದ್ದು ಂದವರು. ಹೀಗಾಗಿ ಚೆಡ್ಡಿಗಳು ಜವಾಡ ಫ್ಯಾಮಿಲಿ ಮೇಲೆ ಮುಗಿ ದ್ದಾರೆ.

ಸಣ್ಣಪುಟ್ಟ ಸುಪಾರಿ, ಹೊಡೆದಾಟ, ೖಭಟ್ಟಿ, ಲೀಜಿಂಗ್ ದಂಧೆಗಳನ್ನಿಟ್ಟುಕೊಂಡಿರುವ ರಜನಿಗೆ ಮೊದಲಿನಿಂದಲೂ ಗಿನ ಹುಬ್ಬಳ್ಳಿ ಶಹರ ಕ್ಷೇತ್ರದ ಶಾಸಕ ೕರಭದ್ರಪ್ಪ ಹಾಲಹರವಿ ಕಡುವೈರಿ. ಲಹರವಿ ಕೂಡ ಒಂದು ಕಾಲದಲ್ಲಿ ಡಿ ರೌಡಿ ಗ್ಯಾಂಗ್ ಇಟ್ಟುಕೊಂಡು ರೆದವನು. ಸದಾ ರಜನಿಯೊಂದಿಗೆ ದಲ್ಲ ಒಂದರಲ್ಲಿ ಜಗಳ ಮಾಡಿ ಂಡೆ ಬಂದ ಹಾಲಹರವಿ ಕಳೆದ ರಿ ಹಿಂದುಳಿದ ವರ್ಗಕ್ಕೆ ಹುಬ್ಬಳ್ಳಿ ಹರ ಕ್ಷೇತ್ರ ಮೀಸಲಾಗಿದ್ದರಿಂದ ಕೇಸರಿ ವಾದಲ್ಲಿ ಎಂ.ಎಲ್.ಎ ಆದ.

ಹಾಲಹರವಿಯ ಖಾಸಾ ಹಿಂಬಾ ಕ ಪಾಲಾಕ್ಷಿ ಪೆಲ್ಲೂರ್ ಅಲಿಯಾಸ್ ಲ್ಲಿ ಇದ್ದಕ್ಕಿದ್ದಂತೆ ಪ್ರಮೋಷನ್ ಸಿಕ್ಕು ಯಲಿಗೆ ಬಂದವನೇ ಸಿಕ್ಕಿದ್ದನ್ನೆಲ್ಲ ಲೂಟಿ ಮಾಡಹತ್ತಿದ್ದ. ಪಿಕ್ ಪಾಕೆಟ್‌ನಿಂದ ದಿದು ದರೋಡೆ, ಲ್ಯಾಂಡ್ ಡೀಲ್, ಸ್ಟ್ರೀಟ್ ಅಡ್ಡೆಗಳನ್ನು ನಡೆಸುವುದರ ಜೊತೆಗೆ ರಜನಿ ನಡೆಸುತ್ತಿದ್ದ ಖಾಸಗಿ ಬ್ಯಾಂಕರ್‌ಗಳ ಸಾಲ ವಸೂಲಿಯ ಲೀಜಿಂಗ್ ದಂಧೆಗೆ ಪೈಪೋಟಿ ಶುರು ಹಚ್ಚಿಕೊಂಡು ರಜನಿಯೊಂದಿಗೆ ಕಾಲ್ಕೆದರಿ ಜಗಳಕಾಯುತ್ತಿದ್ದ. ಪಲ್ಲಿಗೆ ಹುಬ್ಬಳ್ಳಿಯ ಚೆಡ್ಡಿ ಲೀಡರ್‌ಗಳ ಬ್ಯಾಕ್ ಸಪೋರ್ಟ್ ಇತ್ತು. ಶೆಟ್ಟರ್, ಬೊಮ್ಮಾಯಿ, ಜೋಷಿಗಳಂತಹವರು ಹಾಲಹರವಿಯ ಶಿಷ್ಯನನ್ನು ಬೆಳೆಸಿದರು.

ಮುಂದೊಂದು ದಿನ ಪಾರ್ಟಿಯಲ್ಲಿ ಪೈ ಜೋಸ್ತ್ ಕೂಡ ಪಲ್ಲಿಯ ಪಾಲಾಗಲಿತ್ತು. ಆದರೆ ಆತ ನಡುರಸ್ತೆಯಲ್ಲಿ ಹೊಟ್ಟೆಯಲ್ಲೊಂದು ಮಚ್ಚು ಚುಚ್ಚಿಕೊಂಡು ಹೆಣವಾಗಿ ಬಿದ್ದಿದ್ದ. ಚೆಡ್ಡಿಗಳ ಅಟ್ಟಹಾಸದಿಂದ ರೋಸಿಹೋಗಿದ್ದ ರಜನಿ ಮತ್ತವನ ಗ್ಯಾಂಗು 'ರಕ್ತಚರಿತ' ಸಿನಿಮಾ ನೋಡಲು ಬಂದ ಪಲ್ಲಿ ಮತ್ತವನ ನಾಲ್ಕು ಹುಡುಗರನ್ನು ಹೊಂಚು ಹಾಕಿ ಕಾಯ್ನ್ ರಸ್ತೆಯ ಅಪ್ಸರಾ ಟಾಕೀಸ್ ಹೊರಗೆ ಮಚ್ಚಿನಿಂದ ಹೊಡೆದು ಫಿನಿಶ್ ಮಾಡಿದ್ದರು.


ನಂತರ ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಜನಿ ಮತ್ತು ದುರ್ಗಪ್ಪ ಬಿಜವಾಡ ಪೊಲೀಸರಿಗೆ ಶರಣಾದರು. ಜಾಮೀನು ಸಿಗದೆ, ಹುಬ್ಬಳ್ಳಿ ಸಬ್ ಜೈಲಿನಲ್ಲಿದ್ದರು. ಪಲ್ಲಿಯ ಹತ್ಯೆಯ ನಂತರ ಬಿಜವಾಡ ಫ್ಯಾಮಿಲಿ ಮೇಲೆ ಪಕ್ಕಾ ದ್ವೇಷಕ್ಕೆ ನಿಂತ ಹುಬ್ಬಳ್ಳಿಯ ಚೆಡ್ಡಿ ಪಡೆ ಹೇಗಾದರೂ ಮಾಡಿ ರಜನಿ ಮತ್ತು ದುರ್ಗಪ್ಪನನ್ನು ಫಿನಿಶ್ ಮಾಡಲೇಬೇಕೆಂದು ಸ್ಕೆಚ್ ಹಾಕಿದರು.

ಶಿಫ್ಟಿಂಗ್ ಸ್ಕೆಚ್

ರಜನಿ ಮತ್ತು ದುರ್ಗಪ್ಪ ಜೈಲು ಸೇರಿದ್ದರೂ ಅಲ್ಲಿದ್ದುಕೊಂಡೆ ಎಲ್ಲ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದರು. ಪಲ್ಲಿಯ ಹತ್ಯೆಯ ನಂತರ ನಡೆದ ಬೆಳವಣಿಗೆಗಳಿಂದ ರಜನಿಯನ್ನು ಹುಬ್ಬಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಯಿತು. ಕೆಲ ಪಕ್ಷದೊಳಗಿನ ವಿರೋಧಿಗಳಿಂದ ಇದು ನಡೆದಿದ್ದಾದರೂ ಪಕ್ಷದ ಕಾರ್ಯಕರ್ತರಾಗಲಿ, ಹಿಂಬಾಲಕರಾಗಲಿ ಅವನಿಂದ ದೂರವಾಗಿಲ್ಲ. ಜೈಲಿನಲ್ಲಿದ್ದುಕೊಂಡೆ ಚೆಡ್ಡಿಗಳ ಕುತಂತ್ರಕ್ಕೆ ಸೆಡ್ಡು ಹೊಡೆದ ಬಿಜವಾಡ ದ್ವಯರು ಎಲ್ಲದಕ್ಕೂ ಪ್ರತಿ ತಂತ್ರ ರೂಪಿಸುತ್ತಾ ಬಂದರು. ಈ ಹಿನ್ನಡೆ ಅವಳಿ ನಗರದ ಬಿಜೆಪಿ ಲೀಡರ್‌ಗಳು ಇವರಿಬ್ಬರನ್ನು ಇಲ್ಲಿಂದ ಮೊದಲು ಬೇರೆಡೆ ಸಾಗಿಸಲು ಸ್ಕೆಚ್ ರೂಪಿಸುವಂತೆ ಮಾಡಿತು.

ಶಾಸಕ ವೀರಭದ್ರಪ್ಪ ಹಾಲಹರವಿ ತನ್ನ ಶಿಷ್ಯ ಪಲ್ಲಿ ಸತ್ತ ನಂತರ ಅವನ ಉಸ್ತುವಾರಿಯನ್ನು ಪಾಲಿಕೆ ಸದಸ್ಯ ಗಣೇಶ ಟಗರಗುಂಟಿಗೆ ನೀಡಿದಂತಿದೆ. ಸದ್ಯ ಬಿಜವಾಡರ ವಿರೋಧಿ ಗುಂಪಿನ ಎಲ್ಲ ವ್ಯವಹಾರಗಳನ್ನು ನಿಭಾಯಿಸುತ್ತಿರುವ ಈತ ಬಂದಿಖಾನೆ ಇಲಾಖೆಯ ಅಧಿಕಾರಿಗಳು ಕೇಳಿದಷ್ಟು ಕೊಟ್ಟು ಬಿಜವಾಡ ಅಪ್ಪ-ಮಗನ ನಡವಳಿಕೆ ಆಧಾರವಾಗಿಟ್ಟುಕೊಂಡು ವರದಿ ತಯಾರಿಸಿ ಸ್ಥಳಾಂತರ ಆದೇಶ ಹೊರಡಿಸಿದ್ದಾರೆ. ಜೈಲಿನಲ್ಲಿ ಗುಂಪುಗಾರಿಕೆ, ಉಳಿದ ಕೈದಿಗಳೊಂದಿಗೆ ಅಸಭ್ಯ ವರ್ತನೆ ಮುಂತಾದ ಕಾರಣಗಳನ್ನು ಅದರಲ್ಲಿ ಸೇರಿಸಲಾಗಿದೆ.

ಇನ್ನೊಂದು ವಿಚಿತ್ರವೆಂದರೆ ಸ್ಥಳಾಂತರದ ಆದೇಶ ಹೊರಬೀಳುವ ಹಿಂದಿನ ದಿನವೇ ಸಬ್ ಜೈಲಿನ ಎಲ್ಲ 97 ಜನ ಕೈದಿಗಳಿಗೂ ಈ ಎಲ್ಲ ಬೆಳವಣಿಗೆ ಗೊತ್ತಾಗಿದೆ. ಆಕ್ರೋಶಗೊಂಡ ಕೈದಿಗಳು ಮಧ್ಯಾಹ್ನದ ಊಟದ ಸಮಯದಲ್ಲಿ ಸಭೆ ನಡೆಸಿದ್ದಾರೆ. ರಜನಿಯೊಂದಿಗೆ ಜೈಲು ಸೇರಿರುವ ಅವನ ಸಹಚರರಾದ ರಾಘ್ಯಾ ಕಲಾಲ, ಆಶೀಶ್ ಕಾಂಬಳೆ, ಮಂಜುನಾಥ ಜಾಧವ ಸೇರಿದಂತೆ ಏಳು ಜನ ಸ್ಕೆಚ್ ರೆಡಿ ಮಾಡಿದ್ದಾರೆ. ಇವರ ಗ್ಯಾಂಗಿಗೆ ಮಂಜುನಾಥ ಅಲಿಯಾಸ್- ಸೈಂಟಿಸ್ಟ್ ಮಂಜ್ಯಾ ಹಾಗೂ ಗುರುರಾಜ ಅಲಿಯಾಸ್ ಗುರ್ಯಾ ಸೇರ್ಪಡೆಗೊಂಡಿದ್ದಾರೆ. ಹೀಗಾಗಿ ಇವರ ಕೈಮತ್ತಷ್ಟು ಬಲಗೊಂಡಿದೆ.



ಈ ಬೆಳವಣಿಗೆ ಜೈಲಿನ ಅಧಿಕಾರಿಗಳ ಗಮನಕ್ಕೂ ಬಂದಿದೆ.. ಆದರೆ ಅವರಿಂದ ಏನನ್ನೂ ಮಾಡಲಾಗಲಿಲ್ಲ. ದಿನಾಂಕ 17ರ ಗುರುವಾರ ಇವರೆಲ್ಲಾ ಸೇರಿಕೊಂಡು ಜೈಲಿನ ಅಧೀಕ್ಷಕ ಐ.ಜಿ. ಮ್ಯಾಗೇರಿ ಮೇಲೆ ತಿರುಗಿ ಬಿದ್ದಿದ್ದಾರೆ. ಸ್ಥಳಾಂತರಕ್ಕೆ ವಿರೋಧಿಸಿ ಸಣ್ಣ ಪ್ರಮಾಣದಲ್ಲಿ ಕಲ್ಲು ತೂರಾಟ ನಡೆಸುವ ಮೂಲಕ ಎಚ್ಚರಿಕೆ ನೀಡಿದ್ದಾರೆ. ಅಂದಿನ ಆ ಗಲಾಟೆಯಲ್ಲಿ ಎದೆನೋವಿನ ನೆಪ ಹೇಳಿ ರಜನಿ ಬಿಜವಾಡ ಕಿಮ್ಸ್‌ಗೆ ದಾಖಲಾಗುವ ಮೂಲಕ ಸೇಫಾಗಿದ್ದಾನೆ. ಮಾರನೇ ದಿನ ಜೈಲಲ್ಲೆ ದುರ್ಗಪ್ಪ ಬಿಜವಾಡನನ್ನು ಗುಲ್ಬರ್ಗಾಕ್ಕೆ ಕರೆದೊಯ್ಯಲು ಅಧಿಕಾರಿಗಳು ಮುಂದಾಗಿದ್ದೆ ತಡ ಎಲ್ಲ 97 ಜನ ಕೈದಿಗಳು ಒಟ್ಟಾಗಿ ಹೋರಾಟಕ್ಕೆ ನಿಂತಿದ್ದಾರೆ. ಆಗಲೇ ಕಾರಾಗೃಹ ಅಕ್ಷರಶಃ ರಣರಂಗವಾಗಿ ಮಾರ್ಪಟ್ಟಿದ್ದು.

ಕಡುಬು ತಿಂದ ಖಾಕಿಗಳು

ಕೈದಿಗಳೆಂದಾಕ್ಷಣ ಅವರು ಮನುಷ್ಯರೇ ಅಲ್ಲ ಎಂಬಂತೆ ನೋಡಿಕೊಳ್ಳುವ ಜೈಲಿನ ಅಧಿಕಾರಿಗಳ ವಿರುದ್ಧ ಎಲ್ಲ ಕೈದಿಗಳು ಕೆರಳುವಂತೆ ಮಾಡಿತು. ಕಾರಾಗೃಹದ ಒಳಗಿನ ದಾರಿಗೆ ಹಾಕಿದ್ದ ಕಡಪಾ ಕಲ್ಲಿನ ಹಾಸಿಗೆಯನ್ನು ಸಂಪೂರ್ಣ ಒಡೆದು ಕೈಗೆ ಸಿಕ್ಕ ಕಲ್ಲುಗಳ ಸುರಿಮಳೆಗೈದು ಜೈಲಿನೊಳಗೆ ಅಧಿಕಾರಿಗಳು ಬರದಂತೆ ನಿರ್ಬಂಧ ಹಾಕಿದರು. ಬಂದಿಖಾನೆ ಎಡಿಜಿಪಿ ಕುಚ್ಚಣ್ಣ ಶ್ರೀನಿವಾಸ, ಪೊಲೀಸ್ ಆಯುಕ್ತ ಕೆ. ರಾಮಚಂದ್ರರಾವ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಕೈದಿಗಳ ಆರ್ಭಟಕ್ಕೆ ದಂಗಾಗಿ ಬಾಗಿಲಿನ ಹೊರಗೆ ನಿಂತು ಕೈ ಚೆಲ್ಲಿದರು. ಜೈಲಿನ ಅಡುಗೆ ಮನೆಯನ್ನು ಕ್ಷಣಾರ್ಧದಲ್ಲಿ ಹಾಳುಗೆಡವಿ ಅಲ್ಲಿದ್ದ ಖಾರದ ಪುಡಿಯನ್ನು ಪೊಲೀಸರ ಮುಖಕ್ಕೆ ಶಿಕ್ಕಿದರು. ಸುಮಾರು 25 ಲಕ್ಷ ವೆಚ್ಚದ ವಿಡಿಯೋ ಕಾನ್ಫರೆನ್ಸ್ ಹಾಲ್ ಇಂದು ದನದ ಕೊಟ್ಟಿಗೆ ಥರ ಆಗಿದೆ. ಪೀಠೋಪಕರಣಗಳೂ ತುಂಡಾಗಿ ಕೈದಿಗಳ ಕೈಗೆ ಲಾಠಿಗಳಾಗಿವೆ. ಸುಮಾರು ಮೂರ್ನಾಲ್ಕು ಗಂಟೆ ನಡೆದ ಈ ಕಾಳಗ ಪೊಲೀಸರ ಸಹನೆ ಕೆದಕುವಂತೆ ಮಾಡಿದೆ.

ಹತೋಟಿಗೆ ಬರದ ಕೈದಿಗಳ ಮೇಲೆ ಪೊಲೀಸರು 22 ಬಾರಿ ಅಶ್ರುವಾಯು ಸಿಡಿಸಿದರು, 4 ಸುತ್ತು ರಬ್ಬರ್ ಬುಲೆಟ್ ಹಾರಿಸಿದರು, ಜಲ ಫಿರಂಗಿ ಪ್ರಯೋಗ ಮಾಡಿದರು. ಇದರಿಂದ ಭೀತಿಗೊಳಗಾದ ಕೈದಿಗಳು ಅಡುಗೆಮನೆಯಿಂದ 8-10 ಸಿಲಿಂಡರ್‌ಗಳನ್ನು ತಂದು ಒಳದ್ವಾರಕ್ಕೆ ಅದರ ಅನಿಲ ಸೋರಿಕೆ ಮಾಡಿ ಪೊಲೀಸರ ಬಲಿ ತೆಗೆಯಲು ಮುಂದಾಗಿದ್ದಾರೆ. ಆದರೆ ಅದ್ಯಾವುವೂ ಸ್ಫೋಟಗೊಂಡಿಲ್ಲ. ಇಲ್ಲಾ ಎಂದಿದ್ದರೆ ಸುಮಾರು 30ಕ್ಕೂ ಹೆಚ್ಚು ಪೊಲೀಸರ ಹೆಣ ಅಲ್ಲೇ ಉರುಳುತ್ತಿದ್ದವು.

ಕೈದಿಗಳ ಕರಾಮತ್ತು ಅರಿತ ಖಾಕಿಗಳು ಕೆಲಕಾಲ ಸುಮ್ಮನಿದ್ದು ನಂತರ ಏಕಾಏಕಿ ಜೈಲಿನೊಳಗೆ ನುಗ್ಗಿ ಕೈಗೆ ಸಿಕ್ಕ ಕೈದಿಗಳನ್ನು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಕೈದಿಗಳೂ ತಿರುಗಿಬಿದ್ದ ಪರಿಣಾಮ ಡಿಸಿಪಿ ಚಾಂದಿರಾಮ್‌ಸಿಂಗ್ ಮತ್ತು 3 ಜನ ಎಸಿಪಿಗಳು ಸೇರಿದಂತೆ ಬರೊಬ್ಬರಿ 25ಕ್ಕೂ ಹೆಚ್ಚು ಪೊಲೀಸರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕಾರಾಗೃಹದಲ್ಲಿ ಕೈದಿಗಳು ಸ್ಥಳಾಂತರಕ್ಕೆ ವಿರೋಧ ತೋರಿದರೆ ಜೈಲಿನ ಹೊರಗೆ ಬಿಜವಾಡರ ಇಡೀ ಫ್ಯಾಮಿಲಿ ಪೊಲೀಸರ ವಿರುದ್ಧ ತಿರುಗಿಬಿದ್ದಿತ್ತು. ದುರ್ಗಪ್ಪನ ಸಹೋದರಿ ಪಾಲಿಕೆ ಸದಸ್ಯೆ ಲಕ್ಷ್ಮಿ ಬಿಜವಾಡ ಸೇರಿದಂತೆ ಸುಮಾರು 20 ಜನ ರಾಜಕೀಯ ಪಿತೂರಿ ಹಾಗೂ ಅಧಿಕಾರಿಗಳ ಮಿಲಾಪಿಯನ್ನು ಖಂಡಿಸಿ ಪ್ರತಿಭಟನೆ ನಡೆಸಿ ಚೆಡ್ಡಿಗಳಿಗೆ ಹಿಡಿಶಾಪ ಹಾಕಿದರು. ಆದರೆ ಅವರ ಮುಂದೆಯೇ ದುರ್ಗಪ್ಪನೊಬ್ಬನನ್ನೆ ಗುಲ್ಬರ್ಗಾಕ್ಕೆ ಕರೆದೊಯ್ಯಲಾಯಿತು. ಚೆಡ್ಡಿಗಳ ನಿಯಂತ್ರಣದಲ್ಲಿ ಇಡೀ ಅವಳಿನಗರದ ಅಧಿಕಾರಿ ವರ್ಗ ಬಕೇಟು ಹಿಡಿಯುತ್ತಿದೆ ಎಂಬ ಮಾತಿಗೆ ಬಿಜವಾಡಗಳ ಸ್ಥಳಾಂತರ ಪ್ರಕರಣ ಪುಷ್ಟಿ ನೀಡಿದೆ. ವಿಚಾರಣಾಧೀನ ಕೈದಿಗಳಿಬ್ಬರ ಬೆಂಬಲಕ್ಕೆ ಇಡೀ ಕಾರಾಗೃಹದ ಕೈದಿಗಳೆಲ್ಲಾ ಒಟ್ಟಾಗಿ ಹೋರಾಟಕ್ಕೆ ನಿಂತಿದ್ದನ್ನ ಗಮನಿಸಿದರೆ ಇದರ ಒಳಮರ್ಮ ಏನೆಂಬುದು ಸಹಜವಾಗಿ ಅರ್ಥವಾಗುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನ 97 ಜನ ಕೈದಿಗಳ ಮೇಲೂ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭವಾಗಿದೆ. ತನಿಖೆಗೆ ಓರ್ವ ಪೊಲೀಸ್ ವರಿಷ್ಠಾಧಿಕಾರಿಯನ್ನು ನೇಮಿಸಲಾಗಿದೆ. ಆದರೆ ಘಟನೆ ನಡೆದ ಮರು ದಿನವೇ ಗಲಾಟೆಗೆ ಕಾರಣರಾದವರನ್ನು ಗುರುತಿಸಿ, ಒಟ್ಟು 23 ಜನ ಕೈದಿಗಳನ್ನು ಬೆಳಗಾವಿ, ಬಳ್ಳಾರಿ ಹಾಗೂ ಬಿಜಾಪುರ ಜೈಲುಗಳಿಗೆ ಸ್ಥಳಾಂತರಿಸಿದ್ದಾರೆ. ಈ ಕಾಳಗದ ಪ್ರಮುಖ ರೂವಾರಿ ಮಂಜುನಾಥ ಅಲಿಯಾಸ್ ಸೈಂಟಿಸ್ಟ್ ಮಂಜ್ಯಾ, ಬಸವರಾಜ ರೂಗಿ, ಮೌಲಾಲಿ ನದಾಫ್ ಸೇರಿದಂತೆ ಒಟ್ಟು 7 ಕೈದಿಗಳನ್ನು ಬಿಜಾಪುರ ಜೈಲಿಗೆ ಸ್ಥಳಾಂತರಿಸಲಾಗಿದೆ. ಸ್ಥಳಾಂತರಿಸೊ ವೇಳೆ ಆರೋಪಿ ಗುರ್ಯಾ ಅಲಿಯಾಸ್ ಗುರುರಾಜ ದೊಡ್ಡಮನಿ ಘಟನೆಗೆ ಜೈಲಿನ ಅಧೀಕ್ಷಕ ಮ್ಯಾಗೇರಿನೇ ಕಾರಣ ಹಾಗೂ ಎಮ್‌ಎಲ್‌ಎ ಹಾಲಹರವಿಯ ಎಂಜಲು ಕಾಸಿಗೆ ಇಡೀ ಕಾರಾಗೃಹದ ಅಧಿಕಾರಿಗಳು ಬಿಕರಿಯಾಗಿದ್ದಾರೆ ಎಂದು ಕೂಗಾಡಿದ್ದಾನೆ.

ಈಗ ಬಿಜವಾಡಗಳ ಸ್ಥಳಾಂತರ ಪ್ರಕರಣ ವಿಚಿತ್ರ ತಿರುವು ಪಡೆದುಕೊಂಡಿದೆ. ರಜನಿ ಮತ್ತು ದುರ್ಗಪ್ಪನ ಹತ್ಯೆಗೆ ಬಿಜೆಪಿಗಳು ಸುಪಾರಿ ಸಂಚು ನಡೆಸಿರುವುದು ಗಾಬರಿ ಹುಟ್ಟಿಸುವಂತೆ ಮಾಡಿದೆ. ಕಳೆದ ಹಲವಾರು ವರ್ಷಗಳಿಂದ ತೆರೆಮರೆಯಲ್ಲಿ ರೌಡಿಸಂ ನಡೆಸುತ್ತಿದ್ದ ಬಿಜೆಪಿಗಳು ಈಗ ಬಯಲಿಗೆ ಬರಲು ಸಜ್ಜಾಗಿದ್ದಾರೆ. ಇವರ ಮೂಲಕ ಹೊಸ ತಲೆಮಾರಿನ ಸುಪಾರಿ ರೌಡಿಗಳು ಜನ್ಮವೆತ್ತುವ ಕಾಲ ಇನ್ನೇನು ದೂರವಿಲ್ಲ. ಸುಪಾರಿ ಹಂತಕರೊಂದಿಗೆ ಸಂಬಂಧವಿಟ್ಟುಕೊಂಡಿರುವ ಚೆಡ್ಡಿ ರೌಡಿಗಳನ್ನು ಬಗ್ಗು ಬಡಿಯಲು ಬಿಜವಾಡನೇ ಮತ್ತೆ ಬೀದಿಗಿಳಿದರೆ ಆಶ್ಚರ್ಯಪಡಬೇಕಾಗಿಲ್ಲ.


• ಹುರಳಿಕುಪ್ಪಿ ವಿನಯ್





ಮ್ಯಾಗೇರಿ


ಕುಚ್ಚಣ್ಣ ಶ್ರೀನಿವಾಸ್


ದುರ್ಗ


ರಜನಿ


ಎಡಿಜಿಪಿ


ಲಕ್ಷ್ಮಿ


ವೀರಭದ್ರಪ್ಪ


ಸ್ಯಾಂಟಿಸ್ಟ್ ಮಂಜ



ಮೌಲಾಲಿ

ಹೆಬ್ಬೆಟ್ ಮಂಜನಿಗೆ ಸುಪಾರಿ?

ಪಾತಕ ಹೆಬ್ಬೆಟ್ ಮಂಜನಿಗೆ ಸುಪಾರಿ ಕೊಟ್ಟು ಹುಬ್ಬಳ್ಳಿ ಸೆಟ್ಲ್‌ಮೆಂಟ್‌ನ ಡಾನ್‌ಗಳಾದ ಬಿಜವಾಡ ಫ್ಯಾಮಿಲಿ ನಟೋರಿಯಸ್ ಮುಗಿಸುವಷ್ಟು ದೊಡ್ಡ ಮಟ್ಟದ ರೌಡಿಗಳೇನಲ್ಲ, ಆದರೂ ಬಿಜವಾಡಗಳನ್ನು ಮುಗಿಸಲು ಹೆಬ್ಬೆಟ್‌ಗೆ ಸುಪಾರಿ ತಲುಪಿದೆ. ಇನ್ನೇನು ಸ್ವಲ್ಪೆ ದಿನದಲ್ಲಿ ರಜನಿ ಮತ್ತು ಅವನಪ್ಪ ದುರ್ಗಪ್ಪ ಬಿಜವಾಡ ಫಿನಿಶ್ ಆಗ್ತಾರೆ ಎಂಬ ದೊಡ್ಡ ಮಟ್ಟದ ರೂಮರ್ ಅವಳಿ ನಗರ ಪುಡಿ ಗ್ಯಾಂಗುಗಳಲ್ಲಿ ಹರಿದಾಡುತ್ತಿದೆ.

ಪಾಲಿಕೆ ಸದಸ್ಯೆ ಲಕ್ಷ್ಮಿ ಬಿಜವಾಡ ಜೈಲ್ ಅಂಗಳದಲ್ಲಿ ಈ ರಹಸ್ಯವನ್ನು ಬಿಚ್ಚಿಟ್ಟಿದ್ದಾಳೆ. "ಶಾಸಕ ಹಾಲಹರವಿ ಮತ್ತು ಪಾಲಿಕೆ ಸದಸ್ಯ ಗಣೇಶ ಟಗರಗುಂಟಿ ಗುಲ್ಬರ್ಗಾ ಜೈಲಿನೊಂದಿಗೆ ಲಿಂಕು ಇಟ್ಟುಕೊಂಡಿದ್ದಾರೆ. ಈಗಾಗಲೇ ಮೂರ್ನಾಲ್ಕು ಬಾರಿ ತಮ್ಮ ಸಹಚರರನ್ನು ಅಲ್ಲಿಗೆ ಕಳುಹಿಸಿ ಎಲ್ಲಾ ಸ್ಕೆಚ್ ರೆಡಿಮಾಡಿದ್ದಾರೆ. ರಜನಿ ಮುಂದಿನ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತಾನೆ ಎಂಬ ಭಯ ಬಿಜೆಪಿಗಳಿಗೆ ಕಾಡುತ್ತಿದೆ. ಆದ್ದರಿಂದ ಇದೆಲ್ಲಾ ಡ್ರಾಮಾ ಕ್ರಿಯೇಟ್ ಮಾಡುತ್ತಿದ್ದಾರೆ" ಎಂಬ ಮಾತುಗಳು ಅವಳಿಂದ ಹೊರಬಂದಿವೆ. ಸದ್ಯ ದುರ್ಗಪ್ಪನೊಬ್ಬ ಗುಲ್ಬರ್ಗಕ್ಕೆ ಶಿಫ್ಟ್ ಆಗಿದ್ದಾನೆ. ಕಿಮ್ಸ್‌ನಲ್ಲಿರುವ ರಜನಿಯನ್ನು ಇಲ್ಲಿಯೇ ಇಡುತ್ತಾರೋ ಅಥವಾ ಸ್ಕೆಚ್‌ಗೆ ತಕ್ಕಂತೆ ಅವನನ್ನು ಶಿಫ್ಟ್ ಮಾಡ್ತಾರೋ ಎಂಬುದನ್ನು ಕಾಯ್ದುನೋಡಬೇಕು. ಒಟ್ಟಿನಲ್ಲಿ ಹಾಲಹರವಿಯ ಹಲ್ಕಾ ಬುದ್ಧಿ ಕೆಲಸ ಮಾಡಿದ್ದೇ ಆಗಿದ್ದರೆ ಹೆಬ್ಬೆಟ್ಟಗೆ ಸುಪಾರಿಯಂತೂ ಮುಟ್ಟಿರಬಹುದು. ಯಾಕೆಂದರೆ ಚೆಡ್ಡಿಗಳು ರಕ್ತಪಿಪಾಸುಗಳು ಎಂಬುದಕ್ಕೆ ಹುಬ್ಬಳ್ಳಿಯಲ್ಲಿನ ಕೋರ್ಟ್ ಬ್ಲಾಸ್ಟ್ ಪ್ರಕರಣವೇ ಸಾಕ್ಷಿಯಾಗಿ ನಿಂತಿದೆ.

ಕರ್ನಾಟಕ ಬಿಜೆಪಿ ರಾಜನರ್ತಕಿ ರಾಜ್ಯಸಭೆಗೆ



ಕಿಲಾಡಿ ತಮಿಳು ಬ್ರಾಹ್ಮಣ ಹೆಂಗಸು ಹೇಮಾಗೆ ರಾಜಕೀಯ ಹೊಸದೇನಲ್ಲ. ಇವಳು ಹತ್ತು ವರ್ಷಗಳಿಂದ ಬಿಜೆಪಿಗಳ ಜೊತೆ ಓಡಾಡುತ್ತಿದ್ದಾಳೆ. ಅಧಿಕಾರಸ್ಥ ಬಿಜೆಪಿ ಗುಂಪಿನಲ್ಲಿ ಸೇರಿಕೊಂಡ ಹೇಮಾ ಅಧಿಕಾರ-ದುಡ್ಡು ಎಲ್ಲಾ ಮಾಡಿಕೊಂಡಿದ್ದಾಳೆ.

● ಪಾರ್ವತೀಶ

ಕರ್ನಾಟಕ ಬಿಜೆಪಿಗಳು ಯಾವತ್ತಿದ್ದರೂ ಮನೆಗೆ ಮಾರಿ, ಪರರಿಗೆ ಉಪಕಾರಿಗಳೆಂಬುದು ಮತ್ತೊಮ್ಮೆ ಸಾಬೀತಾಗಿದೆ. ಕರ್ನಾಟಕಕ್ಕೆ ಯಾವ ರೀತಿಯಲ್ಲೂ ಸಂಬಂಧಪಡದ ಹಿಂದಿ ಸಿನಿಮಾ ನಟಿ ಹೇಮಾಮಾಲಿನಿಯನ್ನು ಕರೆತಂದು ರಾಜ್ಯಸಭೆಗೆ ಆರಿಸಿ ಕಳುಹಿಸುವ ಜರೂರತ್ತು ಬಿಜೆಪಿ ಹೈಕಮಾಂಡಿಗೆ ಏನಿತ್ತು ಎಂದು ಕೇಳುವ ತಾಕತ್ತು ರಾಜ್ಯ ಬಿಜೆಪಿಯ ಯಾವನಿಗೂ ಇಲ್ಲದಂತಾಗಿದೆ. ರಾಜ್ಯಸಭಾ ಟಿಕೆಟ್ ಆಕಾಂಕ್ಷಿಗಳಾಗಿದ್ದ ಬಾಯಿಬಡುಕ ಧನಂಜಯ ಕುಮಾರ್ ರೆಡ್ಡಿ ಗ್ಯಾಂಗ್‌ನ ಚೇಲಾ ಕೋಳೂರು ಬಸವನಗೌಡ ಹಾಗೂ ಭೂಗಳ್ಳ ದಯಾನಂದ ಪೈ ಮುಂತಾದವರನ್ನೆಲ್ಲಾ ಸಲೀಸಾಗಿ ತಿಪ್ಪೆಗೆಸೆದು ಹೇಮಾಮಾಲಿನಿ ನುಗ್ಗಿ ಬಂದಿದ್ದು ರಾಜ್ಯ ಬಿಜೆಪಿಗಳಿಗೆ ಆಶ್ಚರ್ಯವಾಗಿಹೋಗಿದೆ.

ಮತ್ತೊಂದೆಡೆ ದಳ ಹಾಗೂ ಕಾಂಗ್ರೆಸ್ ಜಂಟಿಯಾಗಿ ಪಕ್ಷೇತರ ಅಭ್ಯರ್ಥಿಯಾಗಿ ಸಾಹಿತಿ ಕೆ.ಮರುಳಸಿದ್ದಪ್ಪನವರನ್ನು ಕಣಕ್ಕಿಳಿಸಿವೆ.

ಕರ್ನಾಟಕ ಬಿಜೆಪಿಯ ವ್ಯವಹಾರಗಳಲ್ಲಿ ಇನ್ನು ಮುಂದೆ ಯಡ್ಡಿ ಬಣ, ರೆಡ್ಡಿ ಬಣಗಳ ಆಟ ನಡೆಯುವುದಿಲ್ಲವೆಂಬ ಮೆಸೇಜನ್ನು ಹೈಕಮಾಂಡ್ ಈ ಮೂಲಕ ನೀಡಿದೆ ಎಂತಲೂ ಹೇಳಲಾಗುತ್ತಿದೆ.

ಇದೆಲ್ಲ ನಿಜ ಎಂದಾದರೂ ಸಹ ಅವು ಬಿಜೆಪಿಯೊಳಗಿನ ವಿಚಾರಗಳು. ಆದರೆ ಕರ್ನಾಟಕದ ಶಾಸಕರಿಂದ ರಾಜ್ಯಸಭೆಗೆ ಆಯ್ಕೆಯಾಗಿ ಹೋಗುವ ವ್ಯಕ್ತಿ ಕರ್ನಾಟಕದವರೇ ಆಗಿರಬೇಕೆಂಬ ಹಾಗೂ ಕರ್ನಾಟಕದ ಹಿತಾಸಕ್ತಿ ಕಾಪಾಡುವವರಾಗಿರಬೇಕೆಂಬ ಪ್ರಧಾನ ಆಶಯವನ್ನೇ ಬಿಜೆಪಿಗಳು ನಿರ್ಲಕ್ಷಿಸಿದ್ದಾರೆ.

ಈ ಹೇಮಾಮಾಲಿನಿಯಾದರೂ ಎಂಥವಳು?

ಈಕೆಯೇನೂ ಮಹಾನ್ ಕಲಾವಿದೆಯಲ್ಲ. ಇವಳಿಗಿರುವ 'ಡ್ರೀಮ್ ಗರ್ಲ್' ಎಂಬ ಅಡ್ಡಹೆಸರೇ ಇದೊಂದು ಗ್ಲಾಮರ್ ಬೊಂಬೆ ಮಾತ್ರ ಎಂಬುದನ್ನು ಹೇಳುತ್ತಿದೆ.

ಕಿಲಾಡಿ ನರ್ತಕಿ ಇವಳು

ಕಿಲಾಡಿ ತಮಿಳು ಬ್ರಾಹ್ಮಣ ಹೆಂಗಸು ಹೇಮಾಗೆ ರಾಜಕೀಯ ಹೊಸದೇನಲ್ಲ. ಇವಳು ಹತ್ತು ವರ್ಷಗಳಿಂದ ಬಿಜೆಪಿಗಳ ಜೊತೆ ಓಡಾಡುತ್ತಿದ್ದಾಳೆ. ಕಾಂಗ್ರೆಸ್ ದುರ್ಬಲಗೊಂಡು ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬಂದಾಗ ಗಾಳಿ ಬಂದಾಗ ತೂರಿಕೊ ಎನ್ನುವಂತೆ. ಅಧಿಕಾರಸ್ಥ ಬಿಜೆಪಿ ಗುಂಪಿನಲ್ಲಿ ಸೇರಿಕೊಂಡ ಹೇಮಾ ಅಧಿಕಾರ-ದುಡ್ಡು ಎಲ್ಲಾ ಮಾಡಿಕೊಂಡಿದ್ದಾಳೆ. ಆಜನ್ಮ ಬ್ರಹ್ಮಚಾರಿ ವಾಜಪೇಯಿಯಂತವರೇ ತಮ್ಮ ರಾಮರಾಜ್ಯ-ರಾಜನೀತಿಗಳನ್ನೆಲ್ಲಾ ಬದಿಗಿರಿಸಿ ಹೇಮಾಳನ್ನು ರಾಜ್ಯಸಭಾ ಸದಸ್ಯೆಯನ್ನಾಗಿಸಿದ್ದರು. ಇದೊಂಥರಾ ಚಕ್ರವರ್ತಿಗಳು ತಮ್ಮ ಆಸ್ಥಾನ ನರ್ತಕಿಗೆ ರಾಜ್ಯಸಭಾ ಸದಸ್ಯತ್ವದ ಇನಾಮು ಕೊಟ್ಟಂತಿತ್ತು. 2003ರಿಂದ 2009ರವರೆಗೆ ಬಿಜೆಪಿಯಿಂದಲೇ ರಾಜ್ಯಸಭಾ ಸದಸ್ಯೆಯಾಗಿದ್ದ ಹೇಮಾಮಾಲಿನಿ ಒಂದು ದಿನವೂ ನೆಟ್ಟಗೆ ಸಂಸತ್ ಅಧಿವೇಶನಕ್ಕೆ ಹೋಗಲಿಲ್ಲ.

ಒಂದು ಚರ್ಚೆಯಲ್ಲೂ ಭಾಗವಹಿಸಲಿಲ್ಲ, ಎರಡನೇ ಪ್ರಶ್ನೆ ಕೇಳಲಿಲ್ಲ. ಅಲಂಕಾರ ಮಾಡಿಕೊಂಡು ಒಂದೆರಡು ದಿನ ಸಂಸತ್ ಭವನದಲ್ಲಿ ಓಡಾಡಿದ್ದು ಬಿಟ್ಟರೆ ಇವಳು ಸಂಸದೆಯಾಗಿ ಕಿಸಿದಿದ್ದು ಅಷ್ಟರಲ್ಲೇ ಇದೆ. ಪರಿಸ್ಥಿತಿ ಹೀಗಿದ್ದಾಗಲೂ ಅದೇ ಪೆದ್ದು ಗ್ಲಾಮರ್ ಹೆಂಗಸನ್ನೇ ಬಿಜೆಪಿಗಳೇಕೆ ಆರಿಸಿಕೊಂಡಿದ್ದಾರೆ.

ಇದಕ್ಕೆ ಉತ್ತರ ಹುಡುಕಲು ತೀರಾ ಕಷ್ಟ ಪಡಬೇಕಿಲ್ಲ.

ಹೇಮಾಮಾಲಿನಿ ತಾನು ಬಿಜೆಪಿಗೆ ಮಾಡಿದ ಚುನಾವಣಾ ಪ್ರಚಾರದ ಉಪಕಾರಕ್ಕೆ ಈಗ ಮತ್ತೊಮ್ಮೆ ಪ್ರತಿಫಲ ಕೇಳುತ್ತಿದ್ದಾಳೆ. ಮುಂದಿನ ಸಂಸತ್ ಚುನಾವಣೆ ವೇಳೆ ಹೇಮಾಳನ್ನು ಪ್ರಚಾರ ಕಾರ್ಯಕ್ಕೆ ಬಳಸಬಹುದೆಂಬ ಯೋಚನೆಯೂ ಕೇಂದ್ರ ಬಿಜೆಪಿ ಲೀಡರ್‌ಗಳಿಗಿರಬಹುದು. ಜೊತೆಗೆ ಬಿಜೆಪಿ ನಾಯಕರ ಬ್ರಾಹ್ಮಣ ಜಾತಿ ಪ್ರೇಮವೂ ಇಲ್ಲಿ ಸ್ವಲ್ಪ ಕೆಲಸ ಮಾಡಿದೆ. ಅಧ್ಯಕ್ಷ ನಿತೀನ್ ಗಡ್ಕರಿ, ಹೇಮಾ ಹಾಗೂ ಆರೆಸ್ಸೆಸ್ ನಾಯಕರೆಲ್ಲಾ ಬ್ರಾಹ್ಮಣರೇ ಅಲ್ಲವೇ?

ಯಡ್ಡಿ-ರೆಡ್ಡಿ ಬಣದ ಬಾಲ ಕಟ್

ವಾಸ್ತವವಾಗಿ ಹೇಮಾಮಾಲಿನಿಯನ್ನು ಕರ್ನಾಟಕದ ಮೇಲೆ ಹೇರಿದ ಹೈಕಮಾಂಡ್ ಆ ಮೂಲಕ ಯಡ್ಡಿ ಹಾಗೂ ಈಶ್ವರಪ್ಪಗೆ ಕಪಾಳಮೋಕ್ಷ ಮಾಡಿದೆ ಅಂತಲೇ ಹೇಳಬಹುದು. ಧನಂಜಯಕುಮಾರ್‌ಗೆ ರಾಜ್ಯಸಭೆ ಟಿಕೆಟ್ ಕೊಡಿಸಲು ಯಡ್ಡಿ ಎರಡು ಬಾರಿ ದೆಹಲಿಗೆ ಹೋಗಿ ಬಂದರು. ಈಗಿನ ರಾಜ್ಯಸಭಾ ಅಭ್ಯರ್ಥಿ ಯಾರೇ ಆಗಿದ್ದರೂ ಗೆದ್ದ ನಂತರ ಅವರ ಅಧಿಕಾರವಧಿ 2012ರ ಏಪ್ರಿಲ್‌ಗೆ ಮುಗಿದುಹೋಗಲಿದೆ. ಸಿಗುವುದು 14 ತಿಂಗಳುಗಳೇ ಆದರೂ ಅದು ತನ್ನ ಚೇಲಾ ಧನಂಜಯ ಕುಮಾರ್‌ಗೆ ಸಿಗಲಿ ಎಂದಿತ್ತು ಯಡ್ಡಿಗೆ. ಯಡ್ಡಿ ಪ್ರತಿ ಬಾರಿ ಬಿಕ್ಕಟ್ಟಿಗೆ ಸಿಲುಕಿದಾಗಲೂ

▶▶ 12



ಮರುಳಸಿದ್ದಪ್ಪಾಗೆ ಟಿಕೆಟ್ ಕೊಟ್ಟಿದ್ದು ಯಾಕೆ?



ಕಾಂಗ್ರೆಸ್ ಆಗಲೀ, ಜೆಡಿಎಸ್ ಆಗಲೀ ಗೆಲ್ಲುವ ಛಾನ್ಸೇ ಇಲ್ಲವಾದ ಕಾರಣ ಈ ಬಾರಿ ಸಾಹಿತಿ ಕೆ.ಮರುಳಸಿದ್ದಪ್ಪನವರನ್ನು ಹೇಮಾಮಾಲಿನಿ ವಿರುದ್ಧ ಕಣಕ್ಕಿಳಿಸಿದ್ದಾರೆ ಎಂಬುದು ಸ್ಪಷ್ಟ. ಈ ದಳ-ಕಾಂಗ್ರೆಗಳಿಗೆ ಈ ಐಡಿಯಾಗಳು ಬರುವುದು ಗೆಲ್ಲುವ ಛಾನ್ಸ್ ಇಲ್ಲದಿದ್ದಾಗ ಮಾತ್ರ. ಅಕಸ್ಮಾತ್ ಈ ಎರಡು ಪಕ್ಷಗಳ ಶಾಸಕರ ಸಂಖ್ಯೆ ಒಬ್ಬ ರಾಜ್ಯಸಭಾ ಅಭ್ಯರ್ಥಿಯನ್ನು ಗೆಲ್ಲಿಸುವಷ್ಟಿದ್ದರೆ ಮರುಳಸಿದ್ದಪ್ಪನವರ ಮನೆ ಬಾಗಿಲಿಗೆ ಇವರ್‍ಯಾರಾದರೂ ಹೋಗುತ್ತಿದ್ದರಾ?

ಈ ಹಿಂದೆ 2004ರಲ್ಲಿ ದೇವೇಗೌಡರು ಎ.ವಿ.ಎಂ.ರಾಮಸ್ವಾಮಿಗೆ ರಾಜ್ಯಸಭಾ ಟಿಕೆಟ್ ಮಾರಿಕೊಂಡಿದ್ದರು. ಅನಿಲ್ ಲಾಡ್ ಎಲೆಕ್ಷನ್ ಸೋತ ಮರುದಿನವೇ ಕಾಂಗ್ರೆಗಳು ಭಾರೀ ಹಣ ಪಡೆದು ಲಾಡ್‌ನನ್ನು ರಾಜ್ಯಸಭೆಗೆ ಆಯ್ಕೆ ಮಾಡಿಸಿದ್ದರು.

ಇವತ್ತಿನ ಚುನಾವಣಾ ರಾಜಕೀಯ ನಡೆಯುವುದೇ ಹೀಗೆ. ಈ ಹಿಂದೆ ಸಾಹಿತಿ ಅನಂತಮೂರ್ತಿಯವರೂ ಸಹ ಉದ್ಯಮಿ ರಾಜೀವ್ ಚಂದ್ರಶೇಖರ್ ವಿರುದ್ಧ ಸ್ಪರ್ಧಿಸಿದ್ದರು. ಈಗ ರಾಜನರ್ತಕಿ ಹೇಮಾಮಾಲಿನಿ ವಿರುದ್ಧ ಮರುಳಸಿದ್ದಪ್ಪನವರನ್ನು ಕಣಕ್ಕೆ ಎಳೆತರುವ ಮೂಲಕ ದಳ-ಕಾಂಗ್ರೆಗಳು ತಾವೇನೋ ಶುದ್ಧ ನೈತಿಕ ರಾಜಕಾರಣ ಮಾಡುತ್ತಿರುವಂತೆಯೂ ಬಿಜೆಪಿಗಳದ್ದು ಅನೈತಿಕವೆಂತಲೂ ಬಿಂಬಿಸುವ ಯತ್ನ ಮಾಡುತ್ತಿದ್ದಾರೆ.

ಈ ಮೂರು ಪಕ್ಷಗಳಲ್ಲಿ ಯಾರೂ ಸಾಚಾಗಳಲ್ಲ ಎಂಬುದೇ ಇವತ್ತಿನ ವಾಸ್ತವ.

ರಾಜನರ್ತಕಿಯ ಜೀವನಶೈಲಿ



ತಮಿಳು ಬ್ರಾಹ್ಮಣ ಕುಟುಂಬದ ಹೇಮಾಮಾಲಿನಿಗೆ ಈಗ 62 ವರ್ಷ. ಇವಳಮ್ಮ ಜಯಾ ಚಕ್ರವರ್ತಿ ಸಿನಿಮಾ ನಿರ್ಮಾಪಕಿಯಾಗಿದ್ದರು. ಅಪ್ಪ ವಿ.ಎಸ್.ಆರ್.ಚಕ್ರವರ್ತಿ ಏನು ಮಾಡುತ್ತಿದ್ದ ಗೊತ್ತಿಲ್ಲ. 1968ರಲ್ಲಿ ಅಂದರೆ ತನ್ನ 20ನೇ ವಯಸ್ಸಿನಲ್ಲಿ 'ಸಪನೋಂಕಿ ಸೌದಾಗರ್' ಹಿಂದಿ ಸಿನಿಮಾ ಮೂಲಕ ನಟಿಯಾದಳು ಹೇಮಾ. ಇದುವರೆಗೂ ನೂರೈವತ್ತು ಸಿನಿಮಾದಲ್ಲಿ ನಟಿಸಿದ್ದಾಳೆ. ಪದ್ಮಶ್ರೀ ಇತ್ಯಾದಿ ಅವಾರ್ಡ್‌ಗಳೂ ಬಂದಿವೆ. ಹತ್ತಿರ ಹತ್ತಿರ ನೂರಾ ಹತ್ತು ಕೋಟಿ ರೂಪಾಯಿ ಆಸ್ತಿ ಇದೆ ಎಂದು ಅವಳೇ ಹೇಳಿಕೊಂಡಿದ್ದಾಳೆ. ಭರತನಾಟ್ಯ ಕಲಿತಿರುವುದರಿಂದ ಖ್ಯಾತ ನಟಿಯೂ ಆದಕಾರಣ ಈಗಲೂ ಡ್ಯಾನ್ಸ್ ಪ್ರೋಗ್ರಾಂ ನಡೆಸಿಕೊಡುತ್ತಾಳೆ. ಆದರೆ ಫೀಜು ಹತ್ತಾರು ಲಕ್ಷ ಆಗುತ್ತದೆ. ಕಳೆದ ವರ್ಷ ಬಳ್ಳಾರಿ ರೆಡ್ಡಿಗಳ ಹಂಪಿ ಉತ್ಸವಕ್ಕೆ ಹೇಮಾಳನ್ನೂ ಕರೆಸಿದಾಗ 20 ಲಕ್ಷ ರೂಪಾಯಿ ಕಿತ್ತುಕೊಂಡು ಹೋಗಿದ್ದಳು ಈ ರಾಜನರ್ತಕಿ. ಇಂತವರ lavish ಜೀವನಶೈಲಿ ಮ್ಯಾನೇಜ್ ಆಗುವುದೇ ರೆಡ್ಡಿಗಳಂತಹ ಪುಂಡು ರಸಿಕರಿಂದ. ರಾಜಕೀಯ ಸಂಪರ್ಕಗಳು ಹಾಗೂ ಮಿಡಿಯಾ ಪ್ರಚಾರಗಳಿಂದ. 2003 ರಿಂದ 2009ರ ವರೆಗೂ ಬಿಜೆಪಿಯಿಂದ ರಾಜ್ಯಸಭಾ ಸದಸ್ಯೆಯಾಗಿದ್ದ ಹೇಮಾಮಾಲಿನಿ ಇಡೀ ಆರು ವರ್ಷದಲ್ಲಿ ಆಡಿದ್ದು ಒಂದೇ ಒಂದು ಮಾತನ್ನು.

ಬಜೆಟ್ ಮಂಡನೆಯಾಗುವ ಮುನ್ನಿನ ಚರ್ಚೆಯ ವೇಳೆ ಎದ್ದು ನಿಂತ ಈ ಸುಂದರಿ ಶುದ್ಧೀಕರಿಸಿದ ನೀರನ್ನು ಮಾರುವ ಕಂಪನಿಗಳಿಗೆ ತೆರಿಗೆ ರಿಯಾಯಿತಿ ನೀಡಬೇಕೆಂದು ಕೇಳಿದ್ದಳು. ಅದು ಕೂಡಲೇ ವಿವಾದಕ್ಕೆಡೆ ಮಾಡಿತ್ತು. ಏಕೆಂದರೆ ಇದೇ ಹೇಮಾಮಾಲಿನಿ kent Ro ಎನ್ನುವ ವಾಟರ್ ಪ್ಯೂರಿಫೈಯರ್ ಕಂಪನಿಗೆ ಜಾಹಿರಾತು ಮಾಡೆಲ್ ಆಗಿದ್ದಳು. ಆ ಕಂಪನಿಗೆ ಅನುಕೂಲ ಮಾಡಿಕೊಡಲಷ್ಟೆ ಅವಳು ತೆರಿಗೆ ರಿಯಾಯಿತಿಯ ಪ್ರಶ್ನೆ ಕೇಳಿದ್ದಳು.

ಅದು ಸಂಸತ್ ಸದಸ್ಯರ ನೀತಿಸಂಹಿತೆಯ ಉಲ್ಲಂಘನೆಯಾಗುತ್ತದೆಂಬ ಕನಿಷ್ಠ ಕಾನೂನಿನ ತಿಳಿವಳಿಕೆಯೂ ಈಕೆಗಿರಲಿಲ್ಲ. ಕೊನೆಗೆ ಸಂಸತ್ ಸಮಿತಿ ಈಕೆಗೆ ಛೀಮಾರಿ ಹಾಕಿತು.

ಹೇಮಾಳ ಪತಿರಾಯ ಧರ್ಮೇಂದ್ರನೂ 2004 ರಿಂದ 2009ರವರೆಗೆ ರಾಜಸ್ಥಾನದ ಬಿಕಾನೇರ್‌ನಿಂದ ಬಿಜೆಪಿ ಸಂಸದನಾಗಿದ್ದ. ಆದರೆ ಎಂದೂ ಪಾರ್ಲಿಮೆಂಟಿಗೆ ಹೋಗಲಿಲ್ಲ. ಈ ತಾರಾ ದಂಪತಿಗಳಿಬ್ಬರೂ ಒಂದೋ ಶೂಟಿಂಗ್ ಅಥವಾ ತಮ್ಮ ಖಾಸಗಿ ವ್ಯವಹಾರಗಳಲ್ಲೇ ಕಾಲಕಳೆದರೇ ವಿನಃ ಜವಾಬ್ದಾರಿಯುತವಾಗಿ ನಡೆದುಕೊಂಡ ಉದಾಹರಣೆಗಳಿಲ್ಲ.

ಈ ಧರ್ಮೇಂದ್ರ ಎಂತಹ ಅವಿವೇಕಿಯೆಂದರೆ 'ಭಾರತ ದೇಶಕ್ಕೆ ಸರ್ವಾಧಿಕಾರಿಯೊಬ್ಬ ಬರಬೇಕು' ಎಂದು ಹೇಳಿಕೆ ನೀಡಿ ಎಲ್ಲರಿಂದಲೂ ಉಗಿಸಿಕೊಂಡಿದ್ದ. ಹೇಮಾಮಾಲಿನಿ ಇದೇ ಕ್ಯಾಟಗರಿಗೆ ಸೇರಿದವಳು. ●

...ಡಲ್ ಬ್ರಹ್ಮಾಂಡ ವಂಚಕ ಜ್ಯೋತಿಷಿ ಶರ್ಮಾ

1ಕ್ಕೆ ಬೀಳುವ ಮೂರ್ಖರ ದಿನವನ್ನು ...ಷಿಯೊಬ್ಬ 37 ದಿನಗಳ ಮೊದಲೇ ...ಹರಿಯಿದು. ಮೊನ್ನೆ ಅಂದರೆ ಫೆಬ್ರವರಿ ...ಗಳವಾರದ ಸಂಜೆ ಕಂಡಕಂಡ ದೇವಾಲಯ ... ಬೇಕಾಬಿಟ್ಟಿ ದೀಪ ಬೆಳಗಿಸಿ ಪುನೀತರಾದ ...ಗಳ ತಲೆಗೆ ಹಸಂದಾದ ಟೋಪಿಯನ್ನೇ ...ಪುಟ ಜ್ಯೋತಿಷಿ ನರೇಂದ್ರಬಾಬು ಶರ್ಮ! ...ು ದಿನಗಳ ಕಾಲ ಮಾಂಸಮಡ್ಡಿ ತಿನ್ನದೆ ... ವ್ರತ ಮಾಡಬೇಕಂತೆ. ಫೆಬ್ರವರಿ 22 ರ ...ವುದಾವರೂ ದೇವಸ್ಥಾನಕ್ಕೆ ಹೋಗಿ ಐದು ...ಣ್ಣೆಗಳ ದೀಪ ಹಚ್ಚಬೇಕಂತೆ. ಇದಿಷ್ಟನ್ನು 2012 ಕ್ಕೆ ಸಂಭವಿಸಲಿರುವ 'ಮಹಾ ... ಭಾರತ ಬಚಾವಾಗುತ್ತದೆಯಂತೆ. ಹಾಗೊಮ್ಮೆ ...ಪ್ರಳಯ ಅಪ್ಪಳಿಸಿದರೂ ಫೆಬ್ರವರಿ 22 ರ ...ಸ್ಯಾರು 'ಪಂಚ ತೈಲಾರತಿ' ಗೈದಿದ್ದರೋ ... ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಿ ... 'ಜಗನ್ಮಾತೆ' ರಕ್ಷಿಸುತ್ತಾಳಂತೆ. ದೇವಸ್ಥಾನಕ್ಕೆ ... ಬರಬೇಕಂತೆ. ದೀಪ ಹಚ್ಚುವ ವೇಳೆ ...ಾಚು, ಚಿನ್ನದ ಒಡವೆ ಏನೂ ಇರಕೂಡದಂತೆ. ...್ಲೆ ಶೇಂಗಾ ಎಣ್ಣೆ ಕೊಬ್ಬರಿ ಎಣ್ಣೆ ಹೊಂಗೆ ...ಹರಳೆಣ್ಣೆಯಲ್ಲಿ 'ಪಂಚ ತೈಲಾರತಿ' ಮಾಡಿದ ...ಳಯದ ಅನಾಹುತ ಕಮ್ಮಿ ಹೊಡೆಯುತ್ತದೆ ...ಮಾಲಯದ ತಪಸ್ವಿಯೊಬ್ಬ ಈ ಘಡವನಿಗೆ ...

... ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ...ದ 10 ರ ತನಕ 'ಝೀ ಕನ್ನಡ' ವಾಹಿನಿಯಲ್ಲಿ ...ವ 'ಬೃಹತ್ ಬ್ರಹ್ಮಾಂಡ' ಎಂಬ ಜ್ಯೋತಿಷ್ಯದ ...ಲ್ಲಿ ನರೇಂದ್ರ ಬಾಬು ಶರ್ಮ ಎಂಬಾತ ...ನ ವಿಕಟ ವೇದಾಂತ!

...ಪಟ ಜ್ಯೋತಿಷಿ ಶರ್ಮ

...ಕ ತಾಪಮಾನ, ಮನುಷ್ಯನ ದುರಾಶೆ, ಅರಣ್ಯ ...ಮಾಣು, ಪ್ರಕೋಪ, ಆದಿರಿಗಾಗಿ ...ನಿರಂತರ ಹನನ; ಇತ್ಯಾದಿ ಮನುಷ್ಯ ... ಪರಿಕಲ್ಪನೆಯುಳ್ಳ ಯಾರಿ ...ಳಯ ಮತ್ತು ಭೂಮಿಯ ... ಕನಿಷ್ಠ ಅಂದಾಜಾದರೂ ...ುತ್ತದೆ. ಇಂಥಾದರಲ್ಲಿ ... ಜನ ಏಕಕಾಲಕ್ಕೆ ಐದೈದು ... ದೀಪ ಹಚ್ಚಿದರೆಂದರೆ ಅದು ...ಾಪಮಾನವನ್ನು ಮತ್ತಷ್ಟು ಹೆಚ್ಚಿಸಿ ... ಇನ್ನಷ್ಟು ಸಮೀಪಗೊಳಿಸುತ್ತದೆಯೇ ...ಸರ್ಗಿಕವಾಗಿಯಾಗಲಿ, ವೈಜ್ಞಾನಿಕವಾಗಿ ಆಗಲಿ ...ಪ್ರಳಯದ ಎಫೆಕ್ಟಂತೂ ಕುಂದುವುದಿಲ್ಲ. ...ಬಾಲಕರಿಗೂ ಅರ್ಥವಾಗುವ ಇಂಥಾದೊಂದು ...ಝೀ ಕನ್ನಡ ಟಿವಿ ಬ್ರಹ್ಮಾಂಡ ಪಿಂಡ ನರೇಂದ್ರ ...ರ್ಮನಿಗಿದ್ದಂತಿಲ್ಲ. ಕಳೆದ ಒಂದೂವರೆ ತಿಂಗಳಿಂದ ...ಾರತಿ'ಯ ಪ್ರಮೇಯದ ಬೊಬ್ಬೆ ಹಾಕುತ್ತಲೇ ...ಚತುರಗೇಡಿ ಟಿವಿ ಚಾನಲ್ಲೊಂದರ ಇಂಥ ...ಕುಚೇಷ್ಟೆ ಮತ್ತು ದಗಲುಬಾಜಿ ಜ್ಯೋತಿಷಿ ...ವಂಚಕ ಬುದ್ಧಿ ಹೇಗೆ ಮೂಢಭಕ್ತಾದಿಗಳಲ್ಲಿ ...teria ಒಂದನ್ನು ಹುಟ್ಟಿ ಹಾಕುತ್ತದೆಯೆಂದರೆ; ...ಬ್ರವರಿ 22 ರ ಮಂಗಳವಾರ ಸಂಜೆ ಜನ ... ದೇವಾಲಯಕ್ಕೆ ಧಾವಿಸಿ ದೀಪ ಹಚ್ಚಿದ್ದಾರೆ. ...ಂಗಳೂರಷ್ಟೇ ಅಲ್ಲ, ಕೋಲಾರದಿಂದ ಹಿಡಿದು ಕಾರವಾರದ ತನಕ, ಚಾಮರಾಜನಗರದಿಂದ ಬಾಗಲ ಕೋಟೆಯ ತನಕ, ದೂರದ ಆಸ್ಟ್ರೇಲಿಯಾದಲ್ಲೂ ಶುರುವಾಗಿ ಮುಂಬಯಿವರೆಗೆ ಜನ ಪಂಚಾರತಿ ವ್ರತ ಮಾಡಿದ್ದೇ ಮಾಡಿದ್ದು. ದೇವಸ್ಥಾನಕ್ಕೆ ಮುಗಿಬಿದ್ದು ಆರತಿ ಹಚ್ಚಿದ್ದೇ ಹಚ್ಚಿದ್ದು-

ಬಾಗಲಕೋಟೆಯ ಮುಚಖಂಡಿಯ ದೇವಸ್ಥಾನವೊಂದರಲ್ಲಿ ಆರತಿ ಹಚ್ಚಲು ಬಂದ ಜನಸಂದಣಿಗೆ ಕಾಲ್ತುಳಿತ ಸಂಭವಿಸುವುದೊಂದೇ ಬಾಕಿಯಿತ್ತು. ಕಾರವಾರದ ಸಮುದ್ರದ ದಂಡೆಯಲ್ಲಂತೂ ಸಹಸ್ರಾರು ಮಹಿಳೆಯರು ದೀಪ ಹಚ್ಚೀ ಹಚ್ಚಿ ಸಮುದ್ರಕ್ಕೆ ಬಿಟ್ಟರು. ಮುಂಬಯಿಯ ಕನ್ನಡಿಗರು ಸಿಕ್ಕಸಿಕ್ಕ ತುಳಜಾ ಭವಾನಿ, ಅಂಬಾ ಭವಾನಿ ದೇವಸ್ಥಾನಗಳಿಗೆ ಮುಗಿಬಿದ್ದು ಅಲ್ಲಿನ ಮರಾಠಿಗರಿಗೇ ಅಚ್ಚರಿ ಹುಟ್ಟಿಸಿದ್ದರು. ಮಂಡ್ಯದ ಕಾಳಿಕಾಂಬಾ ದೇವಸ್ಥಾನಕ್ಕೆ ಮುಗಿಬಿದ್ದ ಸಹಸ್ರಾರು ಮಹಿಳೆಯರು, ಮೈಸೂರಿನ ಅರಮನೆ ಮುಂದಿನ ಕೋಟೆ ಆಂಜನೇಯ ಸ್ವಾಮಿ, ಮಾತ್ರ ಮಂಡಳಿ ಸರ್ಕಲ್ಲಿನ ಚಂದ್ರಮೌಳೇಶ್ವರ ಮತ್ತು ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ನುಗ್ಗಿದ ಮಹಿಳೆಯರೇ ಸಾಲೇ ಮೈಲು ಉದ್ದಕ್ಕಿತ್ತು.

ಐದೆಣ್ಣೆ ಪೂಜೆ

ಕುಣಿಗಲ್, ಹರಿಹರ, ಹೂವಿನ ಹಡಗಲಿಯಂಥ ಸಣ್ಣಪುಟ್ಟ ಊರುಗಳಲ್ಲೂ ಯಾವುದೇ ಹಬ್ಬವನ್ನೂ ನಾಚಿಸುವಂಥ ಆರತಿ ಜಾತ್ರೆಗೆ ಕಾರಣನಾದವನು ಕಪಟ ಜ್ಯೋತಿಷಿ ನರೇಂದ್ರ ಬಾಬು ಶರ್ಮ. ಬೃಹತ್ ಬ್ರಹ್ಮಾಂಡದ ಈ ದಂಡಪಿಂಡನೇ ಹಾಲಿ ಪ್ರಳಯದ ಹರಿಕಾರ ಮತ್ತು ಪಂಚತೈಲ ಪ್ರಕೋಪಕೋರ.

2012 ಕ್ಕೆ ಪ್ರಳಯ ಆಗುವುದಂತೂ ಶತಸ್ಸಿದ್ಧ. ಆರಿದ್ರಾ ನಕ್ಷತ್ರ ಸ್ಫೋಟಿಸುತ್ತದೆ. ಅದು ರಾಕೆಟ್ಟಿನಂತೆ ಬಂದು ಭೂಮಿಗೆ ಅಪ್ಪಳಿಸಿದಾಕ್ಷಣವೇ ಭೂಮಿ ಪ್ರಳಯವಾಗುತ್ತದೆ. ನಮ್ಮನ್ನು ರಕ್ಷಿಸುವ ಶಕ್ತಿಯಿರುವುದು ಆ ಭಗವತಿ ಜಗನ್ಮಾತೆಗೆ ಮಾತ್ರ. ಆಕೆಯೇ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಿ. ಫೆಬ್ರವರಿ 22 ರ ಸಂಜೆ ಸೂರ್ಯ ಮುಳುಗಿದಾಕ್ಷಣವೇ ಜನ ದೇವಸ್ಥಾನಗಳಿಗೆ ಹೋಗಿ ಜಗನ್ಮಾತೆಯನ್ನು ಭಜಿಸಬೇಕು. ವಿವಿಧ ಐದು ಎಣ್ಣೆಗಳ ದೀಪ ಹಚ್ಚಿದರಷ್ಟೇ ಆ ತಾಯಿ ಪ್ರಸನ್ನಳಾಗುತ್ತಾಳೆ. ಕೊಬ್ಬರಿ ಎಣ್ಣೆ ಕಲ್ಪವೃಕ್ಷದ ಸಂಕೇತ. ಶೇಂಗಾ ಭೂಮಿಯಲ್ಲಿ ಬೆಳೆಯುವುದರಿಂದ ಅದರ ಎಣ್ಣೆ ಭೂತತ್ವವನ್ನು ಪ್ರತಿಬಿಂಬಿಸುತ್ತದೆ. ಎಳ್ಳೆಣ್ಣೆ ನರಸಿಂಹನಿಗೆ ಪ್ರಿಯವಾದದ್ದು. ಹೊಂಗೆ ಎಣ್ಣೆ ವೃಕ್ಷದೇವತೆ ಅರ್ಥಾತ್ ವನದೇವತೆಯ ಪ್ರತೀಕ. ಹರಳೆಣ್ಣೆ ಶನಿದೇವನಿಗೆ ಪ್ರಿಯವಾದ್ದರಿಂದ; ಈ ಐದೂ ಎಣ್ಣೆಗಳಲ್ಲಿ ದೇವಿಗೆ ಆರತಿ ಎತ್ತಿದರೆ ಜಗನ್ಮಾತೆಯ ಸಿಟ್ಟು ತಣಿಯುತ್ತದೆ. ಇಡೀ ಭೂಮಿಯೇ ಪ್ರಳಯವಾದರೂ ಜಗನ್ಮಾತೆಯಿಂದಾಗಿ ಭಾರತದೇಶ ಬಚಾವಾಗುತ್ತದೆ. ಹಾಗೊಮ್ಮೆ ಭಾರತಕ್ಕೂ ಪ್ರಳಯ ಅಪ್ಪಳಿಸಿತೆಂದರೆ ಯಾರ್‍ಯಾರು ಪಂಚ ತೈಲಾರತಿ ಮಾಡಿದ್ದರೋ; ವಿಶೇಷವಾಗಿ ಜಗನ್ಮಾತೆಯನ್ನು ಪೂಜಿಸಿದ್ದರೋ ಅಂಥವರನ್ನು ಆ ತಾಯಿ ಖಂಡಿತಾ ಕಾಪಾಡುತ್ತಾಳೆ!

ಝೀ ಕನ್ನಡ ವಾಹಿನಿಯ 'ಬ್ರಹ್ಮಾಂಡ'ದಲ್ಲಿ ಒಂದೂವರೆ ತಿಂಗಳಿಂದ ನರೇಂದ್ರ ಬಾಬು ಶರ್ಮ ಇದನ್ನೇ ವಟಗುಡುತ್ತಿದ್ದ. ಸಾವಿನ ಭೀತಿ ಮನುಷ್ಯನನ್ನು ಎಂತೆಂಥಾ ಪೇಚಾಟಕ್ಕೆ ಸಿಲುಕಿಸುತ್ತದೆ ಎಂಬುದಕ್ಕೆ ಫೆಬ್ರವರಿ 22 ರ ಪಂಚತೈಲ ಸನ್ನಿ ಲೇಟೆಸ್ಟ್ ಉದಾಹರಣೆಯಷ್ಟೆ. ಇಡೀ ಭೂಮಿಯೇ ಪ್ರಳಯವಾಯಿತೆಂದರೆ ಭಾರತ ಮಾತ್ರ ಹೇಗೆ ಹೊರತಾಗಲು ಸಾಧ್ಯ? ಹಾಗೊಮ್ಮೆ ಭಾರತ ಕೂಡ ಪ್ರಳಯಕ್ಕೆ ಸಿಲುಕಿತೆಂದರೆ ದಂಡಪಿಂಡ ನರೇಂದ್ರ ಶರ್ಮನ ಐದೆಣ್ಣೆ ಪೂಜೆ ಮಾಡಿದವರಷ್ಟೇ ಹೇಗೆ ಬಚಾವಾಗಲು ಸಾಧ್ಯ? ಅಷ್ಟಕ್ಕೂ 2012 ಕ್ಕೇ ಪ್ರಳಯವಾಗುತ್ತದೆ ಎಂಬ ನಾಸ್ಟ್ರಡಾಮಸ್ಸನ ಶಕುನವನ್ನು ಜ್ಯೋತಿಷಿ ಶರ್ಮನ ತಲೆಗೆ ಬತ್ತಿ ಐದೆಣ್ಣೆ ಪೂಜೆ ಮಾಡುವಂತೆ ಉಪದೇಶ ಕೊಟ್ಟ ಹಿಮಾಲಯದ ಆ ತಪಸ್ವಿಯಾದರೂ ಯಾರು?



ಜೀ ಟಿವಿ ತರ್ಲೆ

ಬೆಪ್ಪು ತಕ್ಕಡಿ

ಇದ್ಯಾವುದಕ್ಕೂ ಶರ್ಮ ಉತ್ತರಿಸಲಾರ. ತಮಾಷೆಯೆಂದರೆ ಇಷ್ಟೆಲ್ಲ ಬುರುಡೆ ಬಿಟ್ಟ ನರೇಂದ್ರ ಬಾಬು ಶರ್ಮನಿಗೆ ಜ್ಯೋತಿಷ್ಯದ ಗಂಧಗಾಳಿ ಹಾಳಾಗಲಿ ಸಂಸ್ಕೃತದ ಓ ನಾಮ ಕೂಡ ಗೊತ್ತಿಲ್ಲ; ನೆಟ್ಟಗೆ ಎಸ್ಸೆಸ್ಸೆಲ್ಸಿಯನ್ನೂ ಪಾಸು ಮಾಡದ, ವೇದ, ಆಗಮ, ಉಪನಿಷತ್ತು ಯಾವುದೂ ಗೊತ್ತಿಲ್ಲದ, ಕನ್ನಡದಲ್ಲಿ ನೆಟ್ಟಗೊಂದು ವಾಕ್ಯವನ್ನು ಬರೆಯಲಾರದ ಈ ಗಡವನಿಗೆ ವಿಜ್ಞಾನದ ಕನಿಷ್ಠ ಜ್ಞಾನ, ತಿಳಿವಳಿಕೆಯ ಲೋಕಜ್ಞಾನ ಎಲ್ಲಿಂದ ಬಂತು? ಈ ಹಿಂದೆ ಕಸ್ತೂರಿ ಟಿವಿಯಲ್ಲಿ 'ಬ್ರಹ್ಮಾಂಡ' ಎಂಬ ಜ್ಯೋತಿಷ್ಯದ ಸೀರಿಯಲ್ಲಿನ ಮೂಲಕ ಎಂಟ್ರಿ ಕೊಟ್ಟ ನರೇಂದ್ರ ಬಾಬು ಶರ್ಮ ಸಂಜಯನಗರದ ನಾರಾಯಣ ಶರ್ಮ ಎಂಬ ಪೂಜಾರಿಯೊಬ್ಬನ ಮಗ. ವಯಸ್ಸು ನಲವತ್ತಾದರೂ ಇನ್ನೂ ಮದುವೆಯಿಲ್ಲ, ಹುಟ್ಟಾ ತಿಂಡಿಪೋತ. ಸಿಕ್ಕಾಪಟ್ಟೆ ಬೊಜ್ಜು ಬೆಳೆದು ಕಪ್ಪೆಯೊಂದಕ್ಕೆ ಕೊಬ್ಬಿದ ಹಂದಿಯ ದೇಹ ಜೋಡಿಸಿದರೆ ಹೇಗಿರುತ್ತದೋ ನಾರಾಯಣಶರ್ಮನದ್ದು ಅದೇ ರೂಪ!

ಶುರುವಿನಲ್ಲಿ ನಾರಾಯಣಶರ್ಮ ಗಾಂಧಿನಗರದಲ್ಲಿ ಅಂಡಲೆದುಕೊಂಡಿದ್ದ. ಸಿನಿಮಾ ಮಂದಿಗೆ ಜ್ಯೋತಿಷ್ಯ ಗೊತ್ತಿರುವುದಿಲ್ಲವಾದ್ದರಿಂದ ಇವನ್ಯಾರೋ ತಟ್ಟೆಕಾಸು ಗಿರಾಕಿಯಿರಬೇಕೆಂದು ಚಿತ್ರ ನಿರ್ದೇಶಕ ಡಿ. ರಾಜೇಂದ್ರ ಬಾಬು ಹತ್ತಿರಕ್ಕೆ ಬಿಟ್ಟುಕೊಂಡರು. ಒಂದಷ್ಟು ದಿನಗಳ ಕಾಲ ರಾಜೇಂದ್ರ ಬಾಬುಗೆ ಅಸಿಸ್ಟೆಂಟ್ ಆಗಿಯೂ ಚಾಲ್ತಿಯಲ್ಲಿದ್ದವನು ಕ್ರಮೇಣ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾರ್ಟ್ ಹಾಕಲಾರಂಭಿಸಿದ. ಉಪ್ಪಿದಾದಾ ಎಂಬಿಬಿಎಸ್ ಎಂಬ ಉಪೇಂದ್ರನ ಚಿತ್ರದಲ್ಲಿ ಡೊಳ್ಳು ಹೊಟ್ಟೆ ಬಿಟ್ಟು ಮಾಂಸದ ಮುದ್ದೆಯಂತೆ ಕಾಣುವ ಆಸ್ಪತ್ರೆಯ ವಾರ್ಡ್‌ಬಾಯ್ ಪಾತ್ರಕ್ಕೆ, ಹೂವಾಗಿ ಚಿತ್ರದಲ್ಲಿ ರಾಜನ ಆಸ್ಥಾನದಲ್ಲಿ ದಡಿಯ ವಿಧೂಷಕನ ಪಾತ್ರಕ್ಕೆ ಈತನೇ ಲಾಯಕ್ಕಾಗಿದ್ದ.

ಮಾರ್ಕ್‌ವೆಲ್ ಬಾಲಾಜಿ

ತಿಂಡಿ ಪೋತ ಹೋಟೆಲ್ ಸಪ್ಲೈಯರ್, ದೇವಸ್ಥಾನದ ಹೊಟ್ಟೆಬಾಕ ಪೂಜಾರಿ, ಹೀರೋಯಿನ್ ಬೆನ್ನಲ್ಲೇ ಇಟ್ಟಾಡುವ ಭಟ್ಟಂಗಿ, ನಾಟ್ಯಶಾಲೆಯ ಬಾಗಿಲು ಕಾಯುವ ಜೋಬಾ, ರೌಡಿಯ ಕಾಲೊತ್ತುವ ಛೇಲಾ, ಹೀರೋನ ಚಮಚಾ, ಖಳನಾಯಕಿಯ ಮಾಮಾ, ಕ್ಯಾಬರೆ ಕ್ಲಬ್ಬಿನ ಬ್ರೋಕರ್; ಇತ್ಯಾದಿ ಅಸಹ್ಯದ ಪುಡಿಪುಕ್ಕಾ ಪಾತ್ರಗಳಿಗೇ ಶರ್ಮ ಹೇಳಿ ಮಾಡಿಸಿದಂತಿದ್ದ. ಆಟಕ್ಕುಂಟು ಲೆಕ್ಕಕ್ಕಿಲ್ಲದ ಇಂಥ ನೂರಕ್ಕೂ ಅಧಿಕ ಪಾತ್ರಗಳಲ್ಲಿ ಪುಡಿಕಾಸಿನ ಸಂಭಾವನೆಗೆ ನಟಿಸಿಕೊಂಡಿದ್ದವನು, ಕ್ರಮೇಣ ಎಕ್ಸ್‌ಟ್ರಾ ನಟಿಯರ ಸರಬರಾಜು ದಂಧೆಗೆ ಕೈಯಿಟ್ಟ. ದಿಕ್ಕಿಲ್ಲದ ಹೆಂಗಸರನ್ನು ಬುಟ್ಟಿಗೆ ಹಾಕಿಕೊಂಡು ಸಿನಿಮಾ ಹೀರೋಯಿನ್ ಮಾಡ್ತೀನಿ ಎಂದು ಯಾಮಾರಿಸುತ್ತಿದ್ದ. ಕ್ರಮೇಣ ಪೂಜಾ ಗಾಂಧಿ, ರಕ್ಷಿತಾರಂಥ ನಟಿಯರಿಗೆ ಶೂಟಿಂಗ್ ವೇಳೆಯಲ್ಲಿ ಬಿಟ್ಟೀ ಜ್ಯೋತಿಷ್ಯ ಹೇಳಲಾರಂಭಿಸಿದ.

ಇಂಥವನನ್ನು ಅನಿತಾ ಕುಮಾರಸ್ವಾಮಿಯ ಕಸ್ತೂರಿ ಟಿವಿಗೆ ಕರೆತಂದವನು ಮಾರ್ಕ್‌ವೆಲ್ ಬಾಲಾಜಿ. ಸಿನಿಮಾ ಲಿಂಕ್ ಮೂಲಕವೇ ಕಸ್ತೂರಿ ಟಿವಿಗೆ ಎಂಟ್ರಿ ಕೊಟ್ಟು ಬ್ರಹ್ಮಾಂಡ ಸೀರಿಯಲ್ಲಿನಲ್ಲಿ ಜ್ಯೋತಿಷ್ಯ ಶುರು ಹಚ್ಚಿಕೊಂಡ ಶರ್ಮ ಬೇರೆಲ್ಲ ಜ್ಯೋತಿಷಿಗಳಿಗಿಂತ ವಿಕಾರವಾಗಿ ಕಾಣುತ್ತಿದ್ದ. ಜ್ಯೋತಿಷ್ಯ ಶಾಸ್ತ್ರದ ತಲೆಬುಡ ಗೊತ್ತಿಲ್ಲವಾದ್ದರಿಂದ ವಿಲಕ್ಷಣ ಬುರುಡೆ ಬಿಡಲಾರಂಭಿಸಿದ. ಮಾತುಮಾತಿಗೆ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಿ, ಅಹಂ ಬ್ರಹ್ಮಾಸ್ಮಿ. ನಚ ವಿಘ್ನ ಭಯಂ; ಇತ್ಯಾದಿ ಒಂದಕ್ಕೊಂದು ತಾಳೆಯಾಗದ ಯಾರಿಗೂ ಅರ್ಥವಾಗದ ಸಂಸ್ಕೃತ ಶಬ್ದಗಳನ್ನು ಹೇಳುತ್ತಿದ್ದ.

ಕಸ್ತೂರಿಯ 'ಬ್ರಹ್ಮಾಂಡ' ಇನ್ನೊಂದರ್ಥದಲ್ಲಿ ಬಂಡಲ್ ಬುರುಡೆ ಪುರಾಣದಂತಿತ್ತು. ಜ್ಯೋತಿಷ್ಯಕ್ಕಿಂತಲೂ ಹೆಂಗಸರನ್ನುದ್ದೇಶಿಸಿ ತಮಿಳುನಾಡಿನ ಇಂತಿಂಥಾ ದೇವಸ್ಥಾನಕ್ಕೆ ಹೋಗಿ. ಶುಕ್ರವಾರದ ದಿನ ಇಂತಿಂಥಾ ವ್ರತ ಮಾ... ಇಂಥಾ ತರಕಾರಿ ತಿಂದರೆ ಶುಭವಾಗುತ್ತದೆ. ಮನೆಯಲ್ಲಿ ನಾಯಿಗಳನ್ನು ಇಟ್ಟುಕೊಂಡರೆ ಅಪಶಕುನ. ಗಂಡಸು ಪರಸ್ತ್ರೀ ಸಂಗ ಮಾಡಬಾರದು ಎಂದರೆ ಅಷ್ಟಲಕ್ಷ್ಮಿ ...ತ ಮಾಡಿ; ಇತ್ಯಾದಿ ಹೆಂಗಸರ ತಲೆ ಕೆಡಿಸುವ ಮನೆಹಾಳು ಬೋಧನೆಗಳೇ ಬ್ರಹ್ಮಾಂಡದಲ್ಲಿ ತುಂಬಿರುತ್ತಿತ್ತು. ಗುಡಾಣದಂಥ ಡೊಳ್ಳು ಹೊಟ್ಟೆ, ಮಾಂಸದ ಮುದ್ದೆಯಂಥ ಬೊಜ್ಜುಕಾ... ಹಣೆಗೆ ಅಡ್ಡಡ್ಡ ಪಟ್ಟೆ ಕೊರಳಿಗೆ ಚಿತ್ರವಿಚಿತ್ರ ಮಣಿಸರಗ... ರೇಷ್ಮೆ ಶಲ್ಯ ಹೊದ್ದು ರುದ್ರಾಕ್ಷಿ ತೊಟ್ಟು; ಒಮ್ಮೆ ಕ... ಮಂತ್ರವಾದಿಯಂತೆ ಮತ್ತೊಮ್ಮೆ ಮಠದ ಸ್ವಾಮಿಯ... ಮಗದೊಮ್ಮೆ ಕೊಬ್ಬಿದ ಪೂಜಾರಿಯಂತೆ ಕಾಣುತ್ತಿದ್ದ ಶ... ನಾಯಿ ಅಪಶಕುನ ಎಂದಿದ್ದೇ ತಡ ಹಳ್ಳಕ್ಕೆ ಬಿದ್ದ ಸಹಸ್ರಾ... ಮಂದಿ ತಾವು ಮನೆಯಲ್ಲಿಟ್ಟು ಸಾಕಿದ ನಾಯಿಗಳನ್ನ... ಬೀದಿಗೆಸೆಯತೊಡಗಿದರು.

ಉಗಿದಟ್ಟಿದ ಕುಮಾರಣ್ಣ

ಶರ್ಮನ ಮಾತು ನಂಬಿ ಸಾಕಿದ ನಾಯಿಗಳನ್ನು ಬೀದಿಗೆ ಬಿಡುತ್ತಿದ್ದಾರೆಂದು ಗೊತ್ತಾಗಿದ್ದೇ ತಡ, ನೊಂದ ಒಂದಷ್ಟು ಮಂದಿ ಪ್ರಾಣಿ ದಯಾಳುಗಳು ಆತನ ಸಂಜಯನಗರದ

▶▶ 13

...ದ್ರಾ ನಕ್ಷತ್ರದ ಅಗಾಧದ ಮುಂದೆ ಶರ್ಮನ ಐದೆಣ್ಣೆ ದೇವತೆ ಯಾವ ಲೆಕ್ಕ?

... ನಕ್ಷತ್ರ ಭೂಮಿಗೆ ಬಂದಪ್ಪಳಿಸುವುದರಿಂದಲೇ ...ುತ್ತದೆ ಎಂದು ಅದ್ಯಾವ ಮುಠ್ಠಾಳ ಶರ್ಮನ ...ಟ್ಟನೋ ಗೊತ್ತಿಲ್ಲ, ಯಾರಾದರೂ ಖಗೋಳ ...ನ್ನ ಮುಂದೆ ಇಂಥದೊಂದು ಮೂರ್ಖ ... ಆತ ಗೇಲಿ ಮಾಡಿ ನಕ್ಕು ಬಿಡುತ್ತಾನಷ್ಟೇ- ...ಂಗೆಯ ಅಸಂಖ್ಯಾತ ನಕ್ಷತ್ರ ಪುಂಜಗಳಲ್ಲಿ ...ಸಿಗೊಳಬಲ್ಲದ್ದು betl geuse ಅರ್ಥಾತ್ ... ಹಿಂದೂ ಪುರಾಣಗಳಲ್ಲಿ ಆರ್ದ್ರ ನಕ್ಷತ್ರವೆಂದೂ ...ರೆ ಒದ್ದೆ, ನೀರು, ಜಲದ ಪ್ರತೀಕವೆಂದೂ ...ುದ್ರ, ಈ ನಕ್ಷತ್ರದ ಅಧಿದೇವತೆಯೆಂದೂ ... ಸೂರ್ಯ ಈ ನಕ್ಷತ್ರವನ್ನು ಹಾಯ್ದು ...ಗ ಭೂಮಿಗೆ ನೀರು ಸ್ರಾವವಾಗುತ್ತದೆಯಾದ್ದ ... ಬೀಜ ಬಿತ್ತುವುದಕ್ಕೆ ಇದೇ ಶುಭಕಾಲವೆಂಬ ... ಬಾಸಿಸಲಿದೆ.

... ಆರಿದ್ರಾ ನಕ್ಷತ್ರವಿರುವುದು ... 640 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ... ಎಂದರೆ ಕಿರಣವೊಂದು ಬೆಳಕಿನ ...5 ... ಎಷ್ಟು ದೂರಕ್ಕೆ ತಲುಪುತ್ತೋ ಅಷ್ಟು ದೂರ. ಭೂಮಿಯಿಂದ ಹೊರಟ ಕಿರಣವೊಂದು ಸೂರ್ಯನನ್ನು ತಲುಪಲು ಕೇವಲ 8 ನಿಮಿಷ ಸಾಕು. ಚಂದ್ರನನ್ನು ಮುಟ್ಟಲು ಕೆಲವೇ ಸೆಕೆಂಡುಗಳಷ್ಟೆ. ಸೆಕೆಂಡಿಗೆ 3 ಲಕ್ಷ ಕಿ.ಮೀ. ವೇಗದಲ್ಲಿ ಚಲಿಸುವ ಬೆಳಕು 640 ವರ್ಷಗಳ ಕಾಲ ಚಲಿಸಿದರೆ ಎಷ್ಟು ದೂರವಾಗುತ್ತೋ ಅಷ್ಟು ದೂರದಲ್ಲಿದೆ ಆರಿಧ್ರಾ ನಕ್ಷತ್ರ!


ಸೌರಮಂಡಲದ ಪರಿಧಿಯಿಂದಾಚೆಯ orion ನಕ್ಷತ್ರ ಪುಂಜದ ಆರಿಧ್ರಾ ಅದೆಷ್ಟು ದೈತ್ಯ ಗಾತ್ರದ್ದೆಂದರೆ ಸೂರ್ಯನಿಗಿಂತಲೂ ಹಲವು ಪಟ್ಟು ದೊಡ್ಡದು. ಅಂದರೆ ಆರಿಧ್ರಾ ನಕ್ಷತ್ರದ ಒಂದು ಸಣ್ಣ ಕಣದಷ್ಟಿದ್ದಾನೆ ಸೂರ್ಯ. ಇಷ್ಟು ಸೂರ್ಯಮಂಡಲಕ್ಕೆ, ಬಂದರೆ ಭೂಮಿಗಿಂತಲೂ ದೊಡ್ಡದಿರುವವನು ಸೂರ್ಯ. ಬಹುಶಃ ಸೂರ್ಯನ ಹಲವು ಪಟ್ಟು ದೊಡ್ಡದಿರುವುದರಿಂದಲೇ ಅಷ್ಟು ದೂರದಿದ್ದರೂ ನಮ್ಮ ಕಣ್ಣಿಗೆ ಆರಿಧ್ರಾ ನಕ್ಷತ್ರ ಕಾಣಿಸುತ್ತದೆ. ಅದು ಸ್ಫೋಟಿಸುತ್ತದೆ ಅಥವಾ ಭೂಮಿಗೆ ಬಂದು ಬಡಿಯುತ್ತದೆ ಎಂಬುದೇ ಕಲ್ಪನಾತೀತ ಮತ್ತು ಮೂರ್ಖತನ. ಏಕೆಂದರೆ ಅದರ ಚಲನೆಯೇ ಸೌರಮಂಡಲದ ದಿಕ್ಕಿಗಿಲ್ಲ, ಸೆಕೆಂಡಿಗೆ 3 ಲಕ್ಷ ಕಿ.ಮೀ. ವೇಗದಲ್ಲಿ 1 ನಿಮಿಷಕ್ಕೆ, 1 ಗಂಟೆ ದಿನವೊಂದಕ್ಕೆ, ಅಂದರೆ 24 ಗಂಟೆಗೆ ಇಂಥ 24x365 ದಿನಕ್ಕೆ ಲೆಕ್ಕ ಹಾಕಿ. 1 ವರ್ಷಕ್ಕಾಗುವ ದೂರದ ಪ್ರಮಾಣವನ್ನು 640 ವರ್ಷಗಳಿಗೆ ಲೆಕ್ಕ ಹಾಕುವಷ್ಟು ದೂರದಲ್ಲಿರುವ ಆರಿಧ್ರಾ ನಕ್ಷತ್ರದ ಒಂದು ಕಿರಣ ಭೂಮಿಗೆ ಬಂದು ತಲುಪುವುದಕ್ಕೇ ಏಳು ನೂರು ವರ್ಷಗಳು ಹಿಡಿಯುತ್ತೆ. ಆರಿಧ್ರಾ ನಕ್ಷತ್ರದ ಪರಿಧಿ ದಾಟುವುದಕ್ಕೇ 60 ಜ್ಯೋತಿರ್ವರ್ಷ ಹಿಡಿದರೂ ಇಲ್ಲಿಂದಾಚೆಯ 640 ಜ್ಯೋತಿರ್‌ವರ್ಷಗಳ ದೂರಕ್ಕೆ, ಆರಿಧ್ರಾ ನಕ್ಷತ್ರದ ಕಣ ತಲುಪುದಕ್ಕೂ 700 ಜ್ಯೋತಿರ್ವರ್ಷಗಳು ಬೇಕು.

ಹಾಗೊಮ್ಮೆ ಈ ಕ್ಷಣಕ್ಕೇ ಆರಿಧ್ರಾ ಸ್ಫೋಟಿಸಿತೆಂದರೂ ಅದರ ಒಂದು ಕಣ ಭೂಮಿಗೆ ಬಂದು ಬಡಿಯುವುದಕ್ಕೇ 700 ವರ್ಷ ಹಿಡಿಯುತ್ತದೆ. 700 ಜ್ಯೋತಿರ್ ವರ್ಷ ಎಂದರೆ ಆ ಹೊತ್ತಿಗೆ ನಮ್ಮ ತಾತ ಮುತ್ತಾತಂದಿರೂ ಬದುಕಿರುವುದಿಲ್ಲ, ಇನ್ನೂ ಹೇಳಬೇಕೆಂದರೆ ಆರಿಧ್ರಾ ಭೂಮಿಗೆ ಬಂದು ಬಡಿಯುವುದು ಸಾಧ್ಯವಾಗುವುದಿಲ್ಲ. ಒಮ್ಮೆ ಅದು ಸ್ಫೋಟಿಸಿತೆಂದರೆ ಅದರ ಅಸುಪಾಸಿನ ಬೇರೆ ಬೇರೆ ಗ್ರಹಗಳ ಗುರುತ್ವಾಕರ್ಷಣಾ ಶಕ್ತಿಯು ಸ್ಫೋಟದ ಕಣಗಳನ್ನು ಹೀರಿಕೊಳ್ಳುತ್ತದೆ. ಮೊದಲು ಸೂರ್ಯನನ್ನು ದಾಟಿಯೇ ಆರಿಧ್ರಾ, ಭೂಮಿಗೆ ಬರಬೇಕಾಗುತ್ತದೆ. ಭೂಮಿಗಿಂತಲೂ ದೊಡ್ಡದಾದ ಸೂರ್ಯನನ್ನು ಬಡಿದನಂತರ ತಾನೇ ಆರಿಧ್ರಾದ ಕಣಭೂಮಿ ಮುಟ್ಟಲು ಸಾಧ್ಯ. ಸೂರ್ಯನ ಹಲವು ಪಟ್ಟು ದೊಡ್ಡ ಆರಿಧ್ರಾದ ಒಂದು ಕಣ ಸೂರ್ಯನನ್ನು ಬಡಿದಾಕ್ಷಣವೇ ಆ ಸ್ಫೋಟದ ಅಗಾಧದ ಮುಂದೆ ಭೂಮಿ ಯಾವ ಕಣ? ಈಗ ನಮ್ಮ ಕಣ್ಣಿಗೆ ಕಾಣುವ ಆರಿಧ್ರಾ ಅಷ್ಟು ದೂರದಲ್ಲಿದೆಯೆಂದರೆ, ನಾವು ನೋಡುತ್ತಿರುವುದು ಕೂಡ 640 ಜ್ಯೋತಿರ್ವರ್ಷ ಹಿಡಿಯುತ್ತದೆಯೆಂದರೆ ಇನ್ನು ಸ್ಫೋಟಿಸಿ ಭೂಮಿಗೆ ಬಡಿಯುತ್ತದೆ ಎಂಬುದಕ್ಕೆ, ಅರ್ಥವುಂಟೆ? ವಿಧಾನಸೌಧದಿಂದ ಎಂ.ಜಿ. ರಸ್ತೆಗೆ ಹೋಗುವ ರೈಲೊಂದು ಬನ್ನೇರುಘಟ್ಟದ ಇರುವೆಯನ್ನು ಹುಡುಕಿ ಬರುತ್ತದೆ ಎಂದರೆ ಎಷ್ಟು ಹಾಸ್ಯಾಸ್ಪದವೋ ಸೌರಮಂಡಲದ ವ್ಯತಿರಿಕ್ತ ದಿಕ್ಕಿಗೆ ಚಲಿಸುವ ಆರಿಧ್ರಾ ಎಲ್ಲಾ ಬಿಟ್ಟು ಭೂಮಿಗೇ ಬಂದು ಅಪ್ಪಳಿಸುತ್ತದೆ ಎಂಬುದೂ ಮೂರ್ಖತನ.

ಇನ್ನೂ ವಾಸ್ತವವೇನು ಗೊತ್ತೆ? ಯಾವ ನಕ್ಷತ್ರ ಕೂಡ ತಾನು ಇದ್ದಲ್ಲಿಂದ ಅಂದರೆ ತನ್ನ ಕಕ್ಷೆಯಿಂದ ಹೊರಗೆ ಹೋಗುವುದು ಸಾಧ್ಯವೇ ಇಲ್ಲ.

ಭೂಮಂಡಲ, ಸೌರಮಂಡಲ, ಆಕಾಶಗಂಗೆ ಮತ್ತು ಅದರ ಅಸಂಖ್ಯಾತ ನಕ್ಷತ್ರ ಪುಂಜಗಳ ಅಖಿಲಾಂಡ ಅಗಾಧ ಅಯೋಮಯದ ಮುಂದೆ ಢೋಂಗಿ ಶರ್ಮನ ಸೋಕಾಲ್ಡ್ ಐದೆಣ್ಣೆ ದೇವತೆ ಅರ್ಥಾತ್ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕಿ ಯಾವ ಲೆಕ್ಕ?

ಬಾಗಲಕೋಟೆ ಕಿಸಬಾಯಿದಾಸ ಕಾರಜೋಳನ ಕಳ್ ಸಾಮ್ರಾಜ್ಯ!



ಅತ್ಯಂತ ದಮನಿತ ವರ್ಗದಲ್ಲಿ ಹುಟ್ಟಿದವನೂ ಅಧಿಕಾರ ಕ್ಷಣ ಹೇಗೆಲ್ಲಾ ಬದಲಾಗಬಹುದೆಂಬುದಕ್ಕೆ ಗೋವಿಂದ ಕಾರಜೋಳ ಪಕ್ಕಾ ಉದಾಹರಣೆ. ಮುಸುಡಿಯೆದುರೊಂದು ಮೈಕು ಸಿಕ್ಕರೆ ತನ್ನನ್ನು ತಾನು ಸಾಕ್ಷಾತ್ ಅಂಬೇಡ್ಕರ್ ಎಂಬಂತೆ ಚಿತ್ರಿಸಿಕೊಳ್ಳುವ, ದಲಿತರ ಬದುಕು ಉದ್ಧಾರವಾಗಿದ್ದೇ ತನ್ನಿಂದ ಎಂಬಂತೆ ಫೋಸು ಕೊಡುವ ಕಾರಜೋಳನನ್ನು ಬಾಗಲಕೋಟೆ ಮಂದಿ ಕಿಸಬಾಯಿದಾಸ ಅಂತಲೇ ಆಡಿಕೊಳ್ಳುತ್ತಾರೆ. ಈತನ ನಡವಳಿಕೆ, ಕಾರ್ಯವೈಖರಿಗಳೆಲ್ಲ ಅದಕ್ಕೆ ಪೂರಕವಾಗಿಯೇ ಇವೆ.

ದಲಿತ ಎಂಬುದನ್ನೇ ರಾಜಕೀಯ ಅಡಿಪಾಯ ಮಾಡಿಕೊಂಡು ಸಚಿವಗಿರಿ ಅನುಭವಿಸುತ್ತಿರುವ ಕಾರಜೋಳ ಪಕ್ಕಾ ದಲಿತ ದ್ರೋಹಿ. ಬಿಜೆಪಿ ಸರ್ಕಾರ ಈ ಆಸಾಮಿಗೆ ಸಚಿವಗಿರಿ ಕೊಟ್ಟು ತಾನೂ ದಲಿತ ಪರ ಅಂತ ಬಿಂಬಿಸಿಕೊಳ್ಳಲು ಹೆಣಗುತ್ತಿದೆ. ರಾಜ್ಯದ ಒಂದಷ್ಟು ಅಮಾಯಕರು ಅದನ್ನು ನಂಬಿದ್ದರೂ ಆಶ್ಚರ್ಯವಿಲ್ಲ. ಆದರೆ, ಸ್ವತಃ ದಲಿತ ಹನನ ಕಾರ್ಯ ನಡೆಸುತ್ತಿರುವ ಕಾರಜೋಳನಿಗೆ ಸಚಿವಸ್ಥಾನ ಸಿಕ್ಕಿದ್ದರಿಂದ ಆ ಸಮುದಾಯಕ್ಕೆ ಚಿಕ್ಕಾಸಿನ ಪ್ರಯೋಜನವೂ ಆಗಿಲ್ಲ. ಈತನ ಹಿಸ್ಟರಿ ಗೊತ್ತಿರುವವರ್‍ಯಾರೂ ಕೂಡ ಅದನ್ನು ನಿರೀಕ್ಷಿಸುತ್ತಲೂ ಇಲ್ಲ!

ಇಂಥಾ ಕಾರಜೋಳನ ಕರ್ಮಭೂಮಿ ಮುಧೋಳ ಮೀಸಲು ಕ್ಷೇತ್ರ. ಈ ಹಿಂದೆ ಜನತಾ ಪಕ್ಷದಿಂದ ಒಮ್ಮೆ ಗೆದ್ದು ಬಲಿತುಕೊಂಡ ಈತ ತದನಂತರ ಬಿಜೆಪಿಗೆ ಜಿಗಿದ. ಅದಾದ ಬಳಿಕ ಎರಡು ಬಾರಿ ಆಯ್ಕೆಯಾದ. ಯಾವನೇ ಒಬ್ಬ ನಿಷ್ಠಾವಂತ ಮನುಷ್ಯ ಈ ರೀತಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರೆ ಕ್ಷೇತ್ರವೆಂಬುದು ನಳನಳಿಸುತ್ತಿತ್ತು. ಆದರೆ ಕಾರಜೋಳನ ಕಾರುಬಾರಿನಲ್ಲಿ ಮುಧೋಳ ಕ್ಷೇತ್ರವೆಂಬುದು ಪಾಳುಬಿದ್ದು ನರಳಲಾರಂಭಿಸಿದೆ. ಈ ರೀತಿ ಅಯೋಗ್ಯನಾಗಿರುವಾತ ಮೂರು ಬಾರಿ ಹ್ಯಾಗೆ ಆರಿಸಿ ಬಂದ ಅಂತೊಂದು ಪ್ರಶ್ನೆ ಹುಟ್ಟುವುದು ಸಹಜ. ಅದಕ್ಕೆ ಈ ಭಾಗದ ದಲಿತರ ಅತಿಯಾದ ನಿರೀಕ್ಷೆಯೇ ಪ್ರಮುಖ ಉತ್ತರವಾಗುತ್ತದೆ.

ದುರಂತವೆಂದರೆ, ಬಾಗಲಕೋಟೆ ಜಿಲ್ಲೆಗೆ ಎರಡೆರಡು ಬಾರಿ ಉಸ್ತುವಾರಿ ಮಂತ್ರಿಯಾಗಿ ವಕ್ಕರಿಸಿರುವ ಕಾರಜೋಳ ಕಣ್ಣಳತೆಯಲ್ಲೇ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ತೆಪ್ಪಗಿದ್ದಾನೆ. ದಲಿತರು ವಿನಾಕಾರಣ ಕೊಲೆಯಾದರೂ ಈತನದ್ದು ಮಹಾಮೌನ. ಇದೆಲ್ಲ ಹಾಳುಬಿದ್ದೋಗಲಿ, ತನ್ನದೇ ಕೋಮಾದ ಮಾದಿಗರಿಗಾದರೂ ಈತನ ಕಡೆಯಿಂದ ಸಹಾಯವಾಗಿದೆಯಾ ಅಂತ ನೋಡಹೋದರೆ, ಯಾವ ಕುರುಹುಗಳೂ ಸಿಗುವುದಿಲ್ಲ.

ಸದ್ಯ ಕಾರಜೋಳನಿಗೆ ತನ್ನ ಮೂವರು ಪುಂಡ ಪುತ್ರರಿಗೊಂದು ನೆಲೆ ಕಾಣಿಸುವುದೇ ಪರಮಗುರಿಯೆಂಬಂತಾಗಿದೆ. ಎರಡೆರಡು ಬಾರಿ ಮಂತ್ರಿಯಾಗಿ, ಜಿಲ್ಲಾ ಉಸ್ತುವಾರಿಯನ್ನೂ ಹಿಡಿದಿರುವ ಈತ ಇದೀಗಲೇ ಕೊಬ್ಬಿ ಹೋಗಿದ್ದಾನೆ. ಈಗಿರುವ 'ಚಿಂತೆ' ಮಕ್ಕಳದ್ದು ಮಾತ್ರ. ಇದಕ್ಕೂ ಒಂದು ಪರಿಹಾರ ಕಂಡುಕೊಂಡಿರುವ ಕಾರಜೋಳ ಕೈಮಗ್ಗ ಮತ್ತು ಜವಳಿ ಖಾತೆಯ ಉಪನಿರ್ದೇಶಕ ದೊಡ್ಡ ಬಸವರಾಜ್, ಸಮಾಜ ಕಲ್ಯಾಣ ಇಲಾಖೆಯ ಕಮತರ್, ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿದ್ರಾಮ ಮನವಳ್ಳಿ ಮುಂತಾದವರನ್ನು ಮುಂದಿಟ್ಟುಕೊಂಡು ವಸೂಲಿಗಿಳಿದಿದ್ದಾನೆ. ಇದರನ್ವಯ ಬಾಗಲಕೋಟೆ ಸಮೀಪದ ಭಗವತಿ, ಸಂಗಾಪುರ, ನವನಗರ, ನಿರಲಕೇರಿ ಕ್ರಾಸ್ ಹಾಗೂ ಕೊಪ್ಪಳದ ಕುಕನೂರ, ಬಿಜಾಪುರ ಹತ್ತಿರದ ಕಾರಜೋಳ ಗ್ರಾಮಗಳಲ್ಲೆಲ್ಲಾ ಸಾವಿರಾರು ಎಕರೆ ಭೂಮಿ ಹೊಡೆಯಲು ಶುರುವಿಟ್ಟಿದ್ದಾನೆ.

ಇದೆಲ್ಲ ಡಾಕ್ಟರಿಕೆ ನಡೆಸುವ ಆತನ ಮಕ್ಕಳಾದ ಗೋಪಿ ಹಾಗೂ ಉಮೇಶ್ ಹೆಸರಿಗೆ ಸಂದಾಯವಾಗಿದೆ. ಇದರ ಹಿಂದೆಯೂ ಕಾರಜೋಳನ ದೂರಾಲೋಚನೆ ಅಡಗಿದೆ. ಹೇಳಿಕೇಳಿ ಇದು ಗಣಿಕಳ್ಳ ರೆಡ್ಡಿ ಪಟಾಲಂ ಸ್ಟೀಲ್ ಕಂಪೆನಿ ತೆರೆಯಲು ಹೊಂಚುಹಾಕಿರುವ ಜಾಗಗಳು. ಅದು ಸಾಕಾರಗೊಂಡರೆ ಈ ಭಾಗದ ಭೂಮಿಗೆ ಚಿನ್ನದ ಬೆಲೆ ಬರಲಿದೆ. ಹಾಗಾಗಿ ಭೂಮಿಯನ್ನೆಲ್ಲ ಖರೀದಿಸಿ ಆನಂತರ ಲಾಭ ಮಾಡುವ, ರೆಡ್ಡಿಗಳೊಂದಿಗೆ ಸೇರಿ ವ್ಯವಹಾರ ನಡೆಸುವ ಹುನ್ನಾರ ಕಾರಜೋಳನದ್ದು.

ಬಿಜೆಪಿ ನಾಯಕರ ಚಲ್ಲಣ ಸವರುತ್ತಲೇ ಮಂತ್ರಿಯಾದ ಕಾರಜೋಳನಿಗೆ ಮೊದಲು ಸಿಕ್ಕಿದ್ದು ಸಣ್ಣ ನೀರಾವರಿಯೆಂಬ ನಿರುಪಯೋಗಿ ಖಾತೆ. ಬೇರೆಯವರಾಗಿದ್ದರೆ ಇದರಿಂದ ವಿಚಲಿತರಾಗುತ್ತಿದ್ದರೇನೋ. ಆದರೆ ಕಾರಜೋಳ ಎಂಥಾ ಬರಡು ನೆಲದಲ್ಲೂ ಕಾಂಚಾಣದ ಬುಗ್ಗೆ ಉಕ್ಕಿಸಬಲ್ಲ ಛಾತಿಯಿರುವಾತ. ಆದುದರಿಂದಲೇ ನೀರೇ ಹರಿಯದ ಹಳ್ಳಗಳಿಗೆ ಬ್ಯಾರೇಜು ನಿರ್ಮಿಸಲು ಶುರುವಿಟ್ಟ. ಇದರಿಂದ ಒಂದಷ್ಟು ಬರಖತ್ತಾದ ಬಳಿಕ ಬಿಜಾಪುರ ಜಿಲ್ಲೆಯ ಪ್ರತೀ ಕೆರೆಗಳಿಗೂ ನೀರು ತುಂಬಿಸುವ ಗಿಮಿಕ್ಕು ಶುರುವಿಟ್ಟುಕೊಂಡ. ಇದಕ್ಕೆ ಕೋಟಿಗಳ ಲೆಕ್ಕ ತೋರಿಸಿ ಮನಸಾರೆ ನುಂಗಿದ. ತಮಾಷೆಯೆಂದರೆ ಈ ಭಾಗದ ಒಂದು ಕೆರೆಯೂ ನೀರು ತುಂಬಿ ನಳನಳಿಸಲಿಲ್ಲ.

ಈತನ ರಾಜಕೀಯ ಬದುಕಿನತ್ತಲೊಮ್ಮೆ ಕಣ್ಣು ಹಾಯಿಸಿದರೆ ಯಾರ ಮೇಲೂ ನಿಯತ್ತನ್ನು ನೆಲೆ ನಿಲ್ಲಿಸಿದ ಸಣ್ಣ ಉದಾಹರಣೆಗಳೂ ಸಿಗುವುದಿಲ್ಲ. ಈಗ ಬಿಜೆಪಿಯಲ್ಲಿರುವುದು ಹೌದಾದರೂ ಇವನ ಲಿಂಕುಗಳು, ವ್ಯವಹಾರಗಳು ಬಿಜೆಪಿಗಷ್ಟೇ ಸೀಮಿತವಾಗಿಲ್ಲ. ಲಾಭವಾಗುವುದಾದರೆ ಯಾರೊಂದಿಗೆ, ಯಾವ ರೀತಿಯ ಸಂಬಂಧವಿರಿಸಿಕೊಳ್ಳಲೂ ಈತ ಸದಾ ಸಿದ್ಧ. ಅದಕ್ಕೆ ಇತ್ತೀತ್ತಲಾಗಿ ನಡೆಯುತ್ತಿರುವ ಡೀಲೊಂದು ಸ್ಪಷ್ಟ ಸಾಕ್ಷಿ. ತನ್ನ ಮಕ್ಕಳನ್ನು ರಾಜಕೀಯವಾಗಿಯೂ ನೆಲೆ ಕಾಣಿಸುವ ತರಾತುರಿಯಲ್ಲಿರುವ ಕಾರಜೋಳ ಆ ಕುರಿತು ಚರ್ಚಿಸಿದ್ದು ಯಡಿಯೂರಪ್ಪನ ಬಳಿಯಲ್ಲ, ಬದಲಾಗಿ ಕಟ್ಟಾ ವಿರೋಧಿ ದೇವೇಗೌಡರ ಹತ್ತಿರ! ಕೊಪ್ಪಳ ಜಿಲ್ಲೆಯ ಕನಕಗಿರಿ, ಬಿಜಾಪೂರ ಜಿಲ್ಲೆಯ ನಾಗಠಾಣ, ಬೆಳಗಾವಿ ಜಿಲ್ಲೆಯ ಕುಡಚಿ ಕ್ಷೇತ್ರಗಳಿಂದ ಮುಂದಿನ ಬಾರಿ ತನ್ನ ಮಕ್ಕಳಿಗೆ ಟಿಕೆಟ್ ಕೊಡುವಂತೆ ದೇವೇಗೌಡರ ಬಳಿ ಅಂಗಲಾಚಿರುವ ರೂಮರುಗಳಿವೆ. ಕಾರಜೋಳನ ಜಾಯಮಾನದ ಅರಿವಿರುವವರ್‍ಯಾರೂ ಅದನ್ನು ತಳ್ಳಿ ಹಾಕುತ್ತಿಲ್ಲ.

ಈ ರೀತಿಯ ಹಿನ್ನೆಲೆಯಿರುವ ಕಾರಜೋಳ ತನ್ನ ಕ್ಷೇತ್ರದ ದಲಿತರಿಗೆ ದ್ರೋಹವೆಸಗುತ್ತಿರುವಂತೆಯೇ ತನ್ನದೇ ಪಕ್ಷದ ಅರ್ಹ ದಲಿತರಿಗೂ ದೋಖಾ ನೀಡ ಹತ್ತಿದ್ದಾನೆ. ಹಾವೇರಿ ಕ್ಷೇತ್ರದಿಂದ ಎರಡೆರಡು ಬಾರಿ ಆಯ್ಕೆಯಾದ ನೆಹರು ಓಲೇಕಾರ, ಕೊಳ್ಳೆಗಾಲದ ನಂಜುಂಡಸ್ವಾಮಿ, ದಕ್ಷಿಣಕನ್ನಡ ಸುಳ್ಯದ ಎಸ್. ಅಂಗಾರ, ಚಿಕ್ಕಮಗಳೂರು ಮೂಡಿಗೆರೆಯ ಎಂ.ಪಿ. ಕುಮಾರಸ್ವಾಮಿ ಮುಂತಾದವರ ನೇಕರು ಕಾರಜೋಳನ ಮುಂದೆ ಡಮ್ಮಿಗಳಂತಾಗಿದ್ದಾರೆ. ಅದಕ್ಕೆ ಈತ ತನ್ನ ಭಾಗದಲ್ಲಿ ಮಾದಿಗ ಸಮುದಾಯದ ಅಖಂಡ ಬೆಂಬಲವಿದೆ ಅಂತ ಭೋಂಗುಬಿಟ್ಟಿರುವುದೇ ಪ್ರಮುಖ ಕಾರಣ.

ಆದರೀತನಿಗೆ ತನ್ನದೇ ಸಮುದಾಯವಾದ ಮಾದಿಗರ ಓಟು ಪಡೆಯುವ ಯೋಗ್ಯತೆಯೂ ಇಲ್ಲ. ಕೆಲವೇ ಕೆಲ ಮಂದಿ ಮಾದಿಗರು ಈತನ ಮಾವ ರಮೇಶ ಜಿಗಜಿಣಗಿಯ ಮುಲಾಜಿಗೆ ಜೊತೆಗಿದ್ದರೆ ಇರಬಹುದು. ರಮೇಶ್ ಅಂತಹುದೊಂದು ಹವಾ ಸೃಷ್ಟಿಸಿ ಮಾದಿಗರ ನಾಯ[ಕ]ಕೊಂಡಿದ್ದವರು. ಆದರೆ ಕಾರಜೋಳ ಮಾವನ ಬೆಂಬಲ ತನ್ನದೇ ಎಂಬಂತೆ ಬಿಂಬಿಸಿಕೊಂಡು ಸಚಿವ... ಮೆರೆಯುತ್ತಿದ್ದಾನೆ. ಯಡಿಯೂರಪ್ಪ ಅದನ್ನೇ ನಂಬಿ ... ಮೂರ್ಖರಾಗಿ ಜನರನ್ನು ಮೂರ್ಖರನ್ನಾಗಿಸಿದ್ದಾರೆ.

ನಿಜವಾಗಿ ಹೇಳಬೇಕೆಂದರೆ ಈತನಿಗೆ ಅಧಿ... ಹೊರತಾಗಿ ಬೇರ್‍ಯಾವ ಕಾಳಜಿಗಳೂ ಇಲ್ಲ. ದ... ಬಗೆಗಂತೂ ತಲೆ ಕೆಡಿಸಿಕೊಳ್ಳುವವನೇ ಅಲ್ಲ. ಗೋ... ನಿಷೇಧ ಕಾನೂನು ಜಾರಿಗೆ ತರುವ ತರಾತುರಿ ... ಈ ಭಟ್ಟಂಗಿ ಅವರ ಪರವಾಗಿ ಒದರಾಡಿದ್ದ. ... ಅನ್ನು ದೇಶದ ಆಸ್ತಿ ಅಂತ ಪತ್ರಿಕಾ ಹೇಳಿಕೆ ನೀ... ಹೇಸದ ಈತ ದಲಿತ ವಿರೋಧಿಯಲ್ಲದೆ ಇನ್ನೇನು!

ಸರ್ಕಾರಿ ಇಲಾಖೆಗಳ ತುಂಬಾ ತನ್ನ ಮಂ... ಬಾಂಧವರನ್ನೇ ತುಂಬಿಕೊಂಡಿರುವ ಕಾರಜೋ... ಬಾಗಲಕೋಟೆಯನ್ನು ಎಕ್ಕುಟ್ಟಿಸಲು ಶತಪ್ರ... ಮಾಡುತ್ತಿದ್ದಾನೆ. ಬಗಲಲ್ಲಿದ್ದುಕೊಂಡೇ ವಿರೋಧಿಗಳ ... ಮಸಲತ್ತು ನಡೆಸುವ ಈತನ ಬುದ್ಧಿ ಯಡ್ಡಿ... ಅರ್ಥವಾದಂತಿಲ್ಲ. ಈತನ ಮೇಲೆ ಸಣ್ಣಗೊಂದು ... ಇರಿಸಿದರೂ ಯಡ್ಡಿಗೆ ಎಲ್ಲವೂ ಅರ್ಥವಾಗಲಿದೆ.

ಇಂಥವನನ್ನು ಕಿತ್ತೆಸೆದರೆ ಮಾದಿಗ ಸಮುದಾ... ಸಿಡಿದೇಳಬಹುದೆಂಬ ಭಯ ಯಡ್ಡಿಗಿರುವಂತಿದೆ. ... ಮಾದಿಗರು ಈತನ ವಿರುದ್ಧ ನಖಶಿಖಾಂತ ಕೋಪ... ಕೊಂಡಿದ್ದಾರೆ. ಕಾರಜೋಳನನ್ನು ಈ ಕ್ಷಣವೇ ಕಿತ್ತೆಸೆ... ಮಾದಿಗರು ಹಾಲು ಕುಡಿದು ಸಂಭ್ರಮಾಚರಣೆ ಮಾಡು... ವಿನಃ ಪ್ರತಿಭಟನೆ ಮಾಡಲಾರರು!

ಬಾಗಲಕೋಟೆಯ ಹಿತದೃಷ್ಟಿಯಿಂದ ಯಡ್ಡಿ ಆ... ಚಿಂತಿಸಿ ಕಾರಜೋಳನ ಕಳ್ಳ ಸಾಮ್ರಾಜ್ಯಕ್ಕೆ ಕೊನೆ ಕಾಣಿಸಬೇ...

• ಮೇಘರಾ...

▸▸ 10 ರಾಜನರ್ತಕಿ ರಾಜ್ಯಸಭೆಗೆ

ರಾಮನಗರ ಅಂದಲು ಬಸಂತಿ

ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದ ಫೆ. 21ರಂದು ಹೇಮಾಮಾಲಿನಿ ಚೆನ್ನಾಗಿ ಅಲಂಕಾರ ಮಾಡಿಕೊಂಡು ಬೆಂಗಳೂರಿಗೆ ಬಂದಿಳಿದಳು. ಅವಳು ಬಂದ ತಕ್ಷಣ ಮುಖ್ಯಮಂತ್ರಿ ಯಡ್ಡಿಯಿಂದ ಆರಂಭಿಸಿ ಸಂಪುಟ ಸಚಿವರು ಅಧ್ಯಕ್ಷ ಈಶ್ವರಪ್ಪ ಎಲ್ಲರ ಸ್ಥಾನಮಾನಗಳು ಸಡನ್ನಾಗಿ ಬದಲಾಗಿಹೋದವು. ಹೇಮಾಮಾಲಿನಿ ಅಭಿಮಾನಿಗಳ ಸಂಘದ ಆರ್ಡಿನರಿ ಮೆಂಬರುಗಳಂತೆ ಅವರೆಲ್ಲಾ ಅವಳ ಹಿಂದೆ ಹೋದರು. ಒಬ್ಬ ಶೋಭಾ ಕರಂದ್ಲಾಜೆ ಮಾತ್ರ ಕೊಂಚ ಕಿರಿಕಿರಿಗೊಳಗಾದದ್ದು ಅನೇಕರಿಗೆ ಕಾಣಿಸಿತು. ಯಡ್ಡಿ ಕೊಂಚ ಅತೀ ಎನಿಸುವಷ್ಟು ಅಭಿಮಾನಿಯಂತೆ ಹೇಮಾ ಹಿಂದೆ ಓಡಾಡಿದ್ದು ಅದಕ್ಕೆ ಕಾರಣವಿರಬಹುದು.

ಅದು ಹಾಳಾಗಿ ಹೋಗಲಿ, ಈ ಹೇಮಾಮಾಲಿನಿ ಯಾದರೂ ಕೊಂಚ ಘನತೆ ಗಾಂಭೀರ್ಯದಿಂದ ವರ್ತಿಸಿದಳಾ ಎಂದು ನೋಡಿದರೆ ಅಲ್ಲೂ ನಿರಾಶೆ ಕಾದಿತ್ತು.

ಈ ಪೆದ್ದು ನಟಿ ರಾಜ್ಯಸಭೆ ಚುನಾವಣೆ ಅಂದರೆ ಅದೂ ಕೂಡಾ ಶೂಟಿಂಗ್ ಎಂದು ಭಾವಿಸಿದ್ದಾಳೋ ಏನೋ!

"ನೀವು ಗೆದ್ದರೆ ಕರ್ನಾಟಕಕ್ಕೆ ಏನು ಮಾಡಬೇಕೆಂದಿದ್ದೀರಿ?" ಎಂದು ಪತ್ರಕರ್ತರು ಕೇಳಿದರೆ,

"ರಾಮನಗರದ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತೇನೆ" ಅಂದುಬಿಟ್ಟಳು.

ರಾಮನಗರವೇನೂ ಅವಳ ತವರುಮನೆಯಲ್ಲ. ಎಂದೋ ಒಂದು ಕಾಲದಲ್ಲಿ ರಾಮನಗರದ ಬೆಟ್ಟ ಪ್ರದೇಶದಲ್ಲಿ 'ಶೋಲೆ' ಸಿನಿಮಾದ ಶೂಟಿಂಗ್ ಆಗಿತ್ತು. ಈ ರಾಜನರ್ತಕಿ ಆ ಸಿನಿಮಾದಲ್ಲಿ ಬಸಂತಿ ಎನ್ನುವ ಹುಡುಗಿಯ ಪಾತ್ರ ಮಾಡಿದ್ದಳು. ಡಕಾಯಿತ ಗಬ್ಬರ್‌ಸಿಂಗ್ ವಿರುದ್ಧ ಹೋರಾಡುವ ಪಾತ್ರದಲ್ಲಿ ಅವತ್ತು ಅಮಿತಾಬ್ ಬಚ್ಚನ್ ಹಾಗೂ ಧರ್ಮೇಂದ್ರ ಇದ್ದರು. ಅದೇ ಹೇಮಾ ಇವತ್ತು ಯಡ್ಡಿ-ರೆಡ್ಡಿ-ಗಡ್ಕರಿಯೆಂಬ ಡಕಾಯಿತರ ಜೊತೆ ಸೇರಿಕೊಂಡು ಎಲೆಕ್ಷನ್ ಗೆಲ್ಲಲು ಬಂದಿದ್ದಾಳೆಂಬುದೇ ವಿಪರ್ಯಾಸಕರ.


ಅದಿರಲಿ,

ಹೇಮಾಗೆ ಒಬ್ಬ ರಾಜನರ್ತಕಿಯಾಗಿ ತನ್ನ ಅಂದ ಚೆಂದ, ಗ್ಲಾಮರ್ ಅನ್ನು ಹೇಗೆ ಎನ್‌ಕ್ಯಾಶ್ ಮಾಡಿಕೊಳ್ಳಬೇಕೆಂಬುದು ಗೊತ್ತಿದೆ. ಅವಳಿಗೆ ರಾಮನಗರವೂ ಗೊತ್ತಿಲ್ಲ, ಕರ್ನಾಟಕದ ಜನಜೀವನ ಹಾಗೂ ಸಮಸ್ಯೆಗಳೂ ಗೊತ್ತಿಲ್ಲ, ಅಸಲಿಗೆ ರಾಜ್ಯಸಭಾ ಸದಸ್ಯತ್ವದ ಮಹತ್ವ ಜವಾಬ್ದಾರಿಗಳೇನೆಂಬುದು ಗೊತ್ತಿಲ್ಲ. ಇಂಥ ಅವಿವೇಕಿ ಹೆಂಗಸನ್ನು ಕರ್ನಾಟಕದ ಜನತೆಯ ಮೇಲೆ ಹೇರಿರುವ ಬಿಜೆಪಿ ಹೈಕಮಾಂಡ್ ಭಂಡ ರಾಜಕೀಯ ನಡೆಸುತ್ತಿದೆ. ಹೇಮಾ ಗೆಲ್ಲಲು ಕೇವಲ 103 ಶಾಸಕರ ಓಟುಗಳು ಸಾಕಿವೆ. ಹಾಲಿ ಬಿಜೆಪಿಯಲ್ಲೀಗ 107 ಶಾಸಕರಿದ್ದಾರೆ. ವಿರೋಧಿ ಅಭ್ಯರ್ಥಿ ಕೆ.ಮರುಳಸಿದ್ದಪ್ಪನವರಿಗೆ ಜೆಡಿಎಸ್ ಹಾಗೂ ಕಾಂಗ್ರೆಸ್‌ನ 27+71 ಒಟ್ಟು 98 ಶಾಸಕರ ಬೆಂಬಲ ಸಿಗಲಿದೆ. ಮಾರ್ಚ್ 3ರಂದು ನಡೆಯುವ ಚುನಾವಣೆಯ ಫಲಿತಾಂಶ ಏನೆಂಬುದು ಎಲ್ಲರಿಗೂ ಈಗಲೇ ಗೊತ್ತಿದೆ.

ಆದರೆ

ಕರ್ನಾಟಕದ ಜನರಿಗೆ ಹೇಮಾಮಾಲಿನಿ ಆಯ್ಕೆಯಿಂದ ನಯಾಪೈಸೆಯಷ್ಟೂ ಉಪಯೋಗವಾಗುವುದಿಲ್ಲ.

ಇಷ್ಟಕ್ಕೂ ಇಲ್ಲಿನವರೇ ಯಡ್ಡಿ ಸರ್ಕಾರದಿಂದಲೇ ಆಗುತ್ತಿರುವ ಉಪಕಾರವಾದರೂ ಅಷ್ಟೇ ತಾನೇ?




ವೆಂಕಯ್ಯ ನಾಯ್ಡು ಕಿಸಿದಿದ್ದೇನು?

ಕರ್ನಾಟಕದಿಂದ ಎರಡನೇ ಬಾರಿಗೆ ರಾಜ್ಯಸಭೆಗೆ ಆಯ್ಕೆಯಾಗಿರುವ ಬಿಜೆಪಿಯ ವೆಂಕಯ್ಯ ನಾಯ್ಡುವಿನಿಂದ ರಾಜ್ಯದ ಜನತೆಗೆ ಏನು ಉಪಕಾರವಾಗಿದೆ?

ಈ ಬಾಯಿಬಡುಕ ತನ್ನ ಸಂಸತ್ ಸದಸ್ಯರ ವಾರ್ಷಿಕ 5 ಕೋಟಿ ರೂಪಾಯಿಗಳ ಅನುದಾನವನ್ನು ಎಲ್ಲಿ ಯಾರಿಗೆ ಖರ್ಚು ಮಾಡಿದನೆಂಬುದೇ ಯಾರಿಗೂ ಗೊತ್ತಿಲ್ಲ. ಮತ್ತೊಂದೆಡೆ ಸ್ವತಃ ರಾಜ್ಯ ಬಿಜೆಪಿಗಳಿಗೂ ಗೊತ್ತಿರದ ವಿಚಾರ ಏನೆಂದರೆ ಈ ನಾಯ್ಡು ತನ್ನ ಅಧಿಕಾರದ ಪ್ರಭಾವ ಬಳಸಿಕೊಂಡು ಮಗಳು ದೀಪಾ ಎಂಬಾಕೆಗೆ ಚೆನ್ನೈನಲ್ಲಿ ಒಂದು ದೊಡ್ಡ ಆಟೋಮೊಬೈಲ್ ಶೋರೂಂ ಮಾಡಿಸಿಕೊಟ್ಟಿದ್ದಾನೆ. ಆಂಧ್ರದ ವೆಂಕಟಾಚಲಂನಲ್ಲಿ ಇದೇ ದೀಪಾ ಸ್ವಯಂಭಾರತ್ ಟ್ರಸ್ಟ್ ಸ್ಥಾಪಿಸಿ ಸಮಾಜಸೇವೆಯ ಹೆಸರಿನಲ್ಲಿ ಹಣ ಮಾಡಿಕೊಳ್ಳುತ್ತಿದ್ದಾಳೆ. ವೆಂಕಯ್ಯ ನಾಯ್ಡುನ ರಾಜ್ಯಸಭಾ ಸದಸ್ಯತ್ವ ಅವನ ಕುಟುಂಬದ ಲಾಭಕ್ಕೆ ಅವನ ರಾಜಕೀಯ ವರ್ಚಸ್ಸಿಗೆ ಬಳಕೆಯಾಗಿದ್ದು ಬಿಟ್ಟರೆ ರಾಜ್ಯದ ಜನರಿಗೆ ಸಿಕ್ಕಿರುವುದು ಏನೂ ಇಲ್ಲ.

ಹಂಪಿ ಮಾತಂಗ ಪರ್ವತ
ಮಾದಿಗರ ಹೆಸರು ಚೆಡ್ಡಿಗಳ ದರ್ಬಾರು!



...ವೇಳೆ ಕಾರ್ಲ್‌ಮಾರ್ಕ್ಸ್ ಈ ದೇಶದಲ್ಲಿ ...ಆತನಿಗೂ ಇಲ್ಲಿನ ಪುರೋಹಿತಶಾಹಿಗಳು ...ಓಡಿಸುತ್ತಿದ್ದರು ಎನ್ನುವುದು ದಲಿತ ಸಂಘರ್ಷ ...ಹೋರಾಟವು ಉನ್ನತ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ...ದ ಮಾತಾಗಿತ್ತು. ಈ ಮಾತಿಗೆ ಪೂರಕವೆಂಬಂತೆ ...ಹಂಪಿಯಲ್ಲಿ ಮಾದಿಗ ಸಮಾಜದ ಭಾವನಾತ್ಮಕ ... ಭಾಗವಾಗಿರುವ 'ಮಾತಂಗ ಪರ್ವತದ ...ನ್ನು ಬ್ರಾಹ್ಮಣೀಕರಿಸುವ' ಕುತಂತ್ರದೊಂದಿಗೆ, ...ದಿನಗಳಲ್ಲಿ ಇಡೀ ಪರ್ವತವನ್ನು ಆಕ್ರಮಿಸಿಕೊಂಡು ...ವಾರದ ಸೊತ್ತಾಗಿಸಿಕೊಳ್ಳಲು ಹವಣಿಸುತ್ತಿದ್ದಾರೆ. ...ವದೊಂದಿಗಿನ ಮಾದಿಗ ಜನಾಂಗದ ಸಾಂಸ್ಕೃತಿಕ ...ನ್ನು ಕಿತ್ತುಹಾಕಿ ವೈದಿಕಶಾಹಿ ಆಚರಣೆಗಳನ್ನು ...ಸಿ ಈ ಜನಾಂಗಕ್ಕೆ ಕಂಡರಿಯದ ದ್ರೋಹವನ್ನು ... ಇದೇ ಫೆಬ್ರವರಿ ತಿಂಗಳ 18ರಂದು ಹಂಪಿಯಲ್ಲಿ ನಡೆದಿದೆ. ಈ ಕಾರ್ಯಕ್ರಮದ ಸ್ವಾಗತ ಸಮಿತಿ ಅಧ್ಯಕ್ಷ ಹುಬ್ಬಳ್ಳಿಯ ಶಾಸಕ ವೀರಭದ್ರಪ್ಪ ಹಾಲಹರವಿ. ಹೈದ್ರಾಬಾದ್‌ನ ಮಂಗೇಶ್ ಬೇಂಡೆ ಎಂಬ ಆರೆಸ್ಸೆಸ್‌ನ ಕ್ಷೇತ್ರೀಯ ಪ್ರಚಾರಕ ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ಉಳಿದಂತೆ ಮಾದಿಗ ಸಮಾಜದ ಕೆಲವು ಸ್ವಾಮಿಗಳನ್ನು ಮತ್ತು ಯುವಕರ ಹೆಸರುಗಳನ್ನು ಉದ್ದೇಶ ಪೂರ್ವಕವಾಗಿಯೇ ಕರಪತ್ರದಲ್ಲಿ ಬಳಸಿಕೊಳ್ಳಲಾಗಿತ್ತು. ಇವರಲ್ಲಿ ಹಲವರು ಅಪ್ರಜ್ಞಾಪೂರ್ವಕವಾಗಿ ಈ ಕಾರ್ಯಕ್ರಮಕ್ಕೆ ಸಹಕರಿಸಿರಬಹುದು. ಆದರೆ ಎಂ.ಶಂಕರಪ್ಪನಂತಹ ('ಲಂಕೇಶ್'ನಲ್ಲಿ ಸಂಘ ಪರಿವಾರದೊಂದಿಗಿನ ಈತನ ಗುಲಾಮಗಿರಿಯ ಬಗ್ಗೆ ಈ ಹಿಂದೆ ವರದಿಯಾಗಿದೆ) ಕೆಲವರು ಮಾತ್ರ ಪ್ರಜ್ಞಾಪೂರ್ವಕವಾಗಿ ಕೋಮುವಾದಿಗಳ ಸೇವೆ ಮಾಡುವುದರ ಮೂಲಕ ಮಾದಿಗ ಸಮಾಜಕ್ಕೆ ದ್ರೋಹ







...ಋಷಿಜಯಂತಿ-2011' ಎನ್ನುವ ಮೋಸದ ...ಸುವನ್ನು ಮಾಡಿದ್ದಾರೆ. ಸಂಘ ಪರಿವಾರದ ಹಿಡನ್ ...ದೊಂದಿಗೆ ಈ ಕಾರ್ಯಕ್ರಮ ಪ್ರಾಯೋಜಿತವಾಗಿದೆ. ...ಕಾರ್ಯಕ್ರಮವನ್ನು ರೂಪಿಸಲು ಆರೆಸ್ಸೆಸ್‌ನವರು ... ವಿಕಾಸ ಸಮಿತಿ ಶ್ರೀ ವಿದ್ಯಾರಣ್ಯ ಸಾಧನ ...ಎಂಬುದನ್ನು ಕೃತಕವಾಗಿ ಸೃಷ್ಟಿಸಿಕೊಂಡು 'ಶ್ರೀ ...ಶ್ವರ ವಿದ್ಯಾರಣ್ಯ ಮಹಾಸಂಸ್ಥಾನಂ'ನ ಕೃಪಾಶೀ...ದೊಂದಿಗೆ ಈ ಕಾರ್ಯಕ್ರಮವನ್ನು ಮಾಡಿರುವ ...ಅಪ್ಪಟ ಸುಳ್ಳು ಇತಿಹಾಸವನ್ನೊಳಗೊಂಡಿರುವ ...ಪತ್ರಿಕೆಯನ್ನು ಮುದ್ರಿಸಿ ಹಂಚಿದ್ದಾರೆ.

...ವರ ಸ್ವಾಮಿಗಳಿಗೆ 'ನಡೆದಾಡುವ ಭಗವಂತ, ...ಗಿ ಹಗಲಿರುಳು ಶ್ರಮಿಸುತ್ತಿರುವ ಯುಗಪುರುಷ, ...ಮಧ್ವಾಚಾರ್ಯ' ಎಂಬೆಲ್ಲಾ ಬಿರುದಾವಳಿಗಳನ್ನು ...ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಪೇಜಾವರರ ...ಧ್ಯದಲ್ಲೇ ಈ ದಲಿತ ದ್ರೋಹಿ ಕಾರ್ಯಕ್ರಮ ಬಗೆದಿದ್ದಾರೆ. ವಿಶೇಷವೇನೆಂದರೆ 'ಪೂರ್ಣಾನಂದ ಭಾರತಿ ಸ್ವಾಮೀಜಿ' ಎನ್ನುವ ಕೃತಕ ಹೆಸರಿನ ಸ್ವಾಮೀಜಿ ಒಬ್ಬನನ್ನು ಸಂಘ ಪರಿವಾರದವರು ಮಾತಂಗ ಪರ್ವತದ ಅಧಿಪತಿ ಎಂಬಂತೆ ಸೃಷ್ಟಿಸಿದ್ದಾರೆ. ಗುಲ್ಬರ್ಗ ಮೂಲದವನೆಂದು ಹೇಳಲಾಗುತ್ತಿರುವ ಈತನನ್ನು ಹುಟ್ಟೂರು ಮತ್ತು ನಿಜನಾಮವೇನೆಂದು ಕೇಳಿದ ತಕ್ಷಣ ಈತ ಕೈಗೆ ಸಿಗದಂತೆ ಪರಾರಿಯಾಗುತ್ತಾನೆ.

ಮಾತಂಗ ಪರ್ವತ

ಹಂಪಿ ವಿರೂಪಾಕ್ಷ ದೇವಸ್ಥಾನದಿಂದ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಈ ಬೆಟ್ಟವನ್ನು ದಲಿತ ಸಮಾಜದ ಜನರು ಮಾತಂಗಿ ಪರ್ವತ ಎಂದು ಕರೆದರೆ ಮತ್ತೆ ಕೆಲವರು 'ಮಾತಂಗ' ಪರ್ವತ ಎಂತಲೂ ಕರೆಯುತ್ತಾರೆ. ಮಾತಂಗ ಮುನಿ ಹಾಗೂ ಮಾತಂಗಿಯ ಬಗ್ಗೆ ಪುರಾಣಗಳಲ್ಲಿ ಉಚಿತವಾಗಿರುವ ಅಂಶಗಳನ್ನು ಸಂಘಪರಿವಾರದವರು ಇನ್ನಷ್ಟು ದೈವೀಕರಿಸುತ್ತಿರುವುದರ ಜೊತೆಗೆ ಸುಳ್ಳುಗಳನ್ನು ಪೋಣಿಸುತ್ತಿದ್ದಾರೆ. ಇದೇನೇ ಇದ್ದರೂ ಮಾತಂಗ ಮುನಿ ಸಂಗೀತದ ಕುರಿತ 'ಬೃಹದ್ದೇಶಿ' ಎನ್ನುವ ಕೃತಿಯನ್ನು ರಚಿಸಿರುವುದು ಮತ್ತು ಮಾತಂಗಿಯನ್ನು ಮಾದಿಗ ಸಮಾಜವು ತಮ್ಮ ಕುಲದೈವವನ್ನಾಗಿ ಆರಾಧಿಸುತ್ತಿರುವುದು ಮತ್ತು ಮಾತಂಗಿ ಪರ್ವತದೊಂದಿಗೆ ದಲಿತರು ತಮ್ಮ ಭಾವನಾತ್ಮಕ ಸಂಬಂಧವನ್ನು ಬೆಸೆದುಕೊಂಡಿರುವುದು ಮಾತ್ರ ಈಗಿನ ವಾಸ್ತವ.

ಈಗ್ಗೆ ಸುಮಾರು 50 ವರ್ಷಗಳ ಹಿಂದೆ ಮಾತಂಗ ಪರ್ವತದ ಪಕ್ಕದಲ್ಲಿರುವ ಬಳ್ಳಾಪುರ ಗ್ರಾಮದ ಮಾದಿಗ ಸಮಾಜದ ವ್ಯಕ್ತಿ ಈರಪ್ಪನೆಂಬಾತ ಅದೇ ಊರಿನ ಕುರುಬ ಸಮಾಜದ ಮಹಿಳೆಯನ್ನು ಪ್ರೀತಿಸಿ, ಊರವರು ಕೊಟ್ಟ ತೊಂದರೆಯಿಂದಾಗಿ ಆಕೆಯೊಂದಿಗೆ ಮಾತಂಗ ಪರ್ವತಕ್ಕೆ ಬಂದು ದೇವಸ್ಥಾನದ ಕೆಳಗಿನ ಕಲ್ಲು ಕಂಬಗಳ ಮಂಟಪವನ್ನು ದುರಸ್ತಿ ಮಾಡಿಕೊಂಡು ತಮ್ಮ ಜೀವನ ಪರ್ಯಂತ ಅಲ್ಲಿಯೇ ನೆಲೆಸಿ ಬೆಟ್ಟದ ಮೇಲಿನ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡಿದ್ದರು. ಈರಪ್ಪನವರು 1992ರಲ್ಲಿ ತೀರಿಕೊಂಡಾಗ ಅವರ ಶವವನ್ನು ಮಂಟಪದ ಪಕ್ಕದಲ್ಲಿಯೇ ಸಮಾಧಿ ಮಾಡಲಾಗಿದೆ.

ಈರಪ್ಪ ಯಜಮಾನ ತೀರಿಕೊಂಡ ನಂತರ ಸಂಘ ಪರಿವಾರದಿಂದ ನೇಮಕಗೊಂಡಿರುವ ವಿದ್ಯಾರಣ್ಯ ಸ್ವಾಮೀಜಿ ಎನ್ನುವವನು ಈರಪ್ಪನ ಹೆಂಡತಿ ಮತ್ತು ಮಕ್ಕಳಿಂದ ಒಂದು ವರ್ಷದ ಕೆಳಗೆ ಖಾಲಿ ಪೇಪರ್‌ಗಳಿಗೆ ಸಹಿ ಹಾಕಿಸಿಕೊಂಡು, ಈಗ ನೇಮಕಗೊಂಡಿರುವ ಪೂರ್ಣಾನಂದ ಭಾರತಿ ಸ್ವಾಮಿಯನ್ನು ಈರಪ್ಪನ ಶಿಶುಮಗ ಎಂದು ಹೇಳಿ, ಈತನೇ ಈ ಪರ್ವತಕ್ಕೆ ವಾರಸುದಾರ ಎನ್ನುತ್ತಿದ್ದಾನೆ. ಆದರೆ ಇಲ್ಲಿನ ಸುತ್ತಮುತ್ತಲಿನ ಗ್ರಾಮದ ಜನರು ಈರಪ್ಪನವರನ್ನು ಈರಪ್ಪ ಯಜಮಾನ ಎಂದು ಗೌರವಿಸಿ ಪೂಜ್ಯ ಭಾವನೆಯಿಂದ ಕಾಣುತ್ತಿರುವ ಪರಂಪರೆಯು ಈಗ ಪ್ರಾರಂಭವಾಗಿದೆ. ಹೀಗಾಗಿ ಮಾತಂಗಿ ಪರ್ವತದ ಸಾಂಸ್ಕೃತಿಕ ವಿಧಿ-ವಿಧಾನಗಳನ್ನು ನಿರ್ವಹಿಸುವುದು 'ನಮ್ಮ ಪ್ರಾಥಮಿಕ ಹಕ್ಕು' ಎನ್ನುವ ದಲಿತರ ನ್ಯಾಯಯುತವಾದ ಧೋರಣೆ ಇಲ್ಲಿ ಬಹಳ ಪ್ರಬಲವಾಗಿದೆ.

ಇದು ಆರೆಸ್ಸೆಸ್‌ನ ಪೂರ್ವಯೋಜಿತ ಕುತಂತ್ರ

ಸಂಘ ಪರಿವಾರದ ಚೆಡ್ಡಿಗಳು ಮಾತಂಗ ಪರ್ವತದ ಮೇಲೆ ನಡೆದ ಮಾತಂಗ ಋಷಿಯ ಜಯಂತಿಗೂ ಈ ಹಿಂದೆ ಪೇಜಾವರರು ನಡೆಸಿದ ನಾಟಕಗಳಿಗೂ ಸಂಬಂಧ ಕಲ್ಪಿಸಿ ನೋಡಿದಾಗ ಅಂದರೆ: ಇತ್ತೀಚಿನ ದಿನಗಳಲ್ಲಿ ಪೇಜಾವರ ಸ್ವಾಮಿ ದಲಿತರಿಗೆ ವೈಷ್ಣವ ದೀಕ್ಷೆ ಕೊಡುತ್ತೇನೆಂದು ಹೇಳುತ್ತಿರುವುದು, ದಲಿತರ ಕೇರಿಗಳಿಗೆ ಹೋಗಿ ದೊಡ್ಡ ಮಟ್ಟದಲ್ಲಿ ಪ್ರಚಾರವನ್ನು ಪಡೆದುಕೊಳ್ಳುತ್ತಿರುವುದು, ಚಿತ್ರದುರ್ಗದ ಮಾದಾರ ಚೆನ್ನಯ್ಯ ಸ್ವಾಮಿಯನ್ನು ಮೈಸೂರಿಗೆ ಕರೆಸಿಕೊಂಡು ಬ್ರಾಹ್ಮಣರಿಂದ ಪಾದತೊಳೆಸಿದ್ದು, ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆನ್ನುವ ಮಾತುಗಳನ್ನಾಡುತ್ತಿರುವುದು- ಇದನ್ನೆಲ್ಲಾ ಗಮನಿಸಿದರೆ ದಲಿತರನ್ನು ದಿಕ್ಕು ತಪ್ಪಿಸಿ, ಇಡೀ ದಲಿತ ಜನಾಂಗವನ್ನು ದುರ್ಬಳಕೆ ಮಾಡಿಕೊಳ್ಳಲು ಸಂಘ ಪರಿವಾರ ರೂಪಿಸಿರುವ ಪೂರ್ವ ಯೋಜಿತ ಸಂಚೇ ಈ 'ಮಾತಂಗ ಋಷಿ ಜಯಂತಿ' ಕಾರ್ಯಕ್ರಮ ಎನ್ನುವುದು ಸಾಮಾನ್ಯ ತಿಳಿವಳಿಕೆಯುಳ್ಳ ಯಾರಿಗಾದರೂ ಅರ್ಥವಾಗುತ್ತದೆ.

ಫೆಬ್ರವರಿ 18ರಂದು ನಡೆದ ಮಾತಂಗ ಜಯಂತಿ ಕಾರ್ಯಕ್ರಮದಲ್ಲಿ 5 ರಿಂದ 10 ಸಾವಿರ ಮಂದಿ ಭಾಗವಹಿಸುತ್ತಾರೆಂದು ಚೆಡ್ಡಿಗಳು ಪ್ರಚಾರ ಮಾಡಿದ್ದರು. ಆದರೆ ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರ ಸಂಖ್ಯೆ 400ನ್ನು ಸಹ ದಾಟಲಿಲ್ಲ. ದಲಿತರ ಪಾಲ್ಗೊಳ್ಳುವಿಕೆಯಂತು ಬೆರಳೆಣಿಕೆಯಷ್ಟು ಮಾತ್ರವೇ ಇದ್ದದು ಚೆಡ್ಡಿಗಳ ಕುತಂತ್ರವು ದಲಿತರಿಗೆ ಅರ್ಥವಾಗಿದೆ ಎನ್ನುವುದನ್ನು ಸಾರಿ ಹೇಳುವಂತಿತ್ತು.

ಸಂಘಪರಿವಾರದ ಈ ದಲಿತ ವಿರೋಧಿ ಕಾರ್ಯಕ್ರಮದ ತಯಾರಿಯ ಜೊತೆಜೊತೆಗೇ ದಲಿತ ಸಮುದಾಯದಿಂದ ವಿರೋಧಗಳು ಪ್ರಾರಂಭವಾಗಿದ್ದವು. ತಾವು ಬಿಡುತ್ತಿರುವ ಬೂಸಿಯನ್ನೆಲ್ಲ ನಂಬುತ್ತಾರೆಂದು ದಲಿತ ಸಮುದಾಯವನ್ನೇ ಟಾರ್ಗೆಟ್ ಮಾಡಿ ಈ ಕಾರ್ಯಕ್ರಮಕ್ಕೆ ಮುಂದಾಗಿದ್ದ ಚೆಡ್ಡಿಗಳಿಗೆ ದೊಡ್ಡ ಮುಖಭಂಗವಾಗಿದೆ. ಹಾಗಾಗಿ ಇದನ್ನು ಸಹಿಸಲಾರದ ಚೆಡ್ಡಿಗಳು 'ಕಮಲಾಪುರದಲ್ಲಿರುವ ಎಲ್ಲಾ ಚರ್ಚ್‌ಗಳು ಅನಧಿಕೃತ ಹಾಗೂ ಮತಾಂತರ ಮಾಡುವಲ್ಲಿ ನಿರತವಾಗಿವೆ' ಎಂಬ ಹೊಸ ವಿವಾದವನ್ನು ಸೃಷ್ಟಿಸುವುದರ ಜೊತೆಗೆ ಕಮಲಾಪುರದ ಪಟ್ಟಣ ಪಂಚಾಯತಿಯ ಅಧ್ಯಕ್ಷ ಮತ್ತು ಸದಸ್ಯರ ಸರ್ವಾನುಮತದ ಒಪ್ಪಿಗೆಯಿಂದ ದಲಿತ ಸಮುದಾಯಕ್ಕೆ ನೀಡಿದ್ದ ವಾದ್ಯ ನುಡಿಸುವ ಸಲಕರಣೆಗಳನ್ನು ಹಿಂಪಡೆಯುತ್ತೇವೆ, ಚರ್ಚ್‌ಗಳ ಮೇಲೆ ದಾಳಿ ನಡೆಸುತ್ತೇವೆನ್ನುವ ರೂಮರ್‌ಗಳನ್ನು ಹರಿಯಬಿಡುತ್ತಿದ್ದಾರೆ. ದಲಿತ ಸಮುದಾಯದೊಂದಿಗೆ ಅನ್ಯೋನ್ಯದಿಂದ ಬಾಳುತ್ತಿರುವ ನಾಯಕ ಜನಾಂಗವನ್ನು ದಲಿತರ ವಿರುದ್ಧ ಎತ್ತಿಕಟ್ಟಲು ಪ್ರಾರಂಭಿಸಿದ್ದಾರೆ.

ಚೆಡ್ಡಿಗಳ ಕುತಂತ್ರಗಳು ಭಗ್ನಗೊಳ್ಳುತ್ತವೆ


ಮಾತಂಗ ಪರ್ವತದ ಮೇಲೆ ಚೆಡ್ಡಿಗಳು ಕಣ್ಣು ಹಾಕಿರುವುದು ಈ ಭಾಗದ ದಲಿತರನ್ನು ತೀವ್ರವಾಗಿ ಕೆರಳಿಸಿದೆ. 14-2-2011ರಂದು 'ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ'ಯ ನಾಯಕರಾದ ಕರಿಯಪ್ಪ ಗುಡಿಮನಿ ಮತ್ತು 20-25 ದಲಿತ ಯುವಕರು ಮಾತಂಗ ಪರ್ವತಕ್ಕೇ ಹೋಗಿ ಅಲ್ಲಿ ನೂತನವಾಗಿ ಸಂಘ ಪರಿವಾರದಿಂದ ಸ್ವಾಮೀಜಿಯಾಗಿ ರಿಕ್ರೂಟ್ ಆಗಿ ಒಕ್ಕರಿಸಿಕೊಂಡಿರುವ ಪೂರ್ಣಾನಂದ ಭಾರತಿ ಸ್ವಾಮಿಯ ನೀರಿಳಿಸಿ, ಇನ್ನು ಮುಂದೆ ಇಲ್ಲಿ ಸಂಘ ಪರಿವಾರದ ಯಾವುದೇ ಕಾರ್ಯಕ್ರಮಗಳಿಗೆ ಅವಕಾಶ ನೀಡುವುದಿಲ್ಲವೆಂದು ಎಚ್ಚರಿಸಿ ಬಂದಿದ್ದಾರೆ. ಚಿತ್ರದುರ್ಗದ ಮಾದರ ಚೆನ್ನಯ್ಯಸ್ವಾಮಿ ಕೂಡ ಈ ಕಾರ್ಯಕ್ರಮವನ್ನು ವಿರೋಧಿಸಿದ್ದಾರೆ. ಜೊತೆಗೆ ಕರ್ನಾಟಕದ ಇತರೆಡೆಗಳ ಮಾದಿಗ ಸಮಾಜದ ಸಂಘಟನೆಗಳು ಚೆಡ್ಡಿಗಳು ನಡೆಸಿದ ಕಾರ್ಯಕ್ರಮಕ್ಕೆ ಸಹಕರಿಸದೇ ಇರುವುದರ ಮೂಲಕ ಪ್ರತಿಭಟನೆ ಸೂಚಿಸಿದ್ದಾರೆ. ಸಂಘಪರಿವಾರದವರು ಹೆಚ್ಚು ಸದ್ದು ಮಾಡದೇ ಈ ಕಾರ್ಯಕ್ರಮವನ್ನು ಆಯೋಜಿಸಿದ್ದರಿಂದ ಅಲ್ಪ ಸ್ವಲ್ಪ ವಿರೋಧಗಳ ನಡುವೆ ಈ ಕಾರ್ಯಕ್ರಮವನ್ನು ನಡೆಸುವಲ್ಲಿ ಸಫಲರಾಗಿದ್ದಾರೆ. ಆದರೆ ಮುಂಬರುವ ದಿನಗಳಲ್ಲಿ ಮಾತಂಗ ಪರ್ವತದ ಸುದ್ದಿಗೆ ಬಂದರೆ ದಲಿತ ಸಮುದಾಯವು ಸಂಘಪರಿವಾರಿಗಳ ಚೆಡ್ಡಿ ಹರಿದು ಅವರ ಕುತಂತ್ರಗಳನ್ನು ಭಗ್ನಗೊಳಿಸುವುದರಲ್ಲಿ ಯಾವುದೇ ಅನುಮಾನವಿಲ್ಲ- ದಲಿತರ ಮುಂದಿನ ದಿನಗಳ ಈ ಹೋರಾಟಕ್ಕೆ ಎಲ್ಲಾ ಪ್ರಗತಿಪರ ಹೋರಾಟಗಾರರು ಕೈ ಜೋಡಿಸಬೇಕಾಗಿದೆ.

• ಚಂದ್ರಶೇಖರ ತೋರಣಘಟ್ಟ

---

11 ಬ್ರಹ್ಮಾಂಡ


...ನುಗ್ಗಿ ಗೂಸಾ ಕೊಟ್ಟರು. ಒದೆ ಬಿದ್ದ ಮೇಲೆ ...ದ ಶರ್ಮ ನಾಯಿದೇವರ ರೂಪ, ಸಾಕ್ಷಾತ್ ...ಎಂದು ವರಸೆ ಬದಲಿಸಿಕೊಂಡ. ಕಸ್ತೂರಿಯಲ್ಲಿ ...ಜನಪ್ರಿಯಗೊಂಡಿದ್ದೇ ಅದರ ಲಾಭ ...ಕಲ್ಲ ಅದಕ್ಕೊಂದು ಸದಾಶಿವನಗರದ ಮೈದಾನದಲ್ಲಿ ...ವಿರುದ್ಧ ಮಹಾಚಂಡಿಕಾ ಯಾಗ ...ಕೊಂಡ. ಪ್ರಳಯ ಆಗಬಾರದು ...ನಾನು ನಡೆಸುವ ಯಾಗಕ್ಕೆ 5 ...0 ಸಾವಿರದ ತನಕ ದೇಣಿಗೆ ...ದು ಬ್ರಹ್ಮಾಂಡ ಪಾಹಿಸಿಯಲ್ಲೇ



...ದ ಭೀತಿ ಹುಟ್ಟಿಸಿ, ತಮ್ಮ ... ...ಲ್ ಕಾಲ್ ... ...ಸುತ್ತಿರುವುದನ್ನು, ಗಮನಿಸಿದ ಕುಮಾರಸ್ವಾಮಿ, ... ಶರ್ಮ ನನ್ನು ಹೊರದಬ್ಬಿದರು. ...ಗಳೇ 20 ಲಕ್ಷಕ್ಕೂ ಅಧಿಕ ಮೊತ್ತದ ಕಾಸು ... ಶರ್ಮ ಚಂಡಿಕಾಯಾಗವನ್ನು ಅರ್ಧಕ್ಕೇ ಕೈಬಿಟ್ಟು ಸುವರ್ಣ ಟಿವಿಯಲ್ಲಿ ಪ್ರತ್ಯಕ್ಷನಾದ. ಹಿಂದಿದ್ದ ಬ್ರಹ್ಮಾಂಡ ಎಂಬ ಹೆಸರನ್ನು ಭವ್ಯ ಬ್ರಹ್ಮಾಂಡ ಎಂದು ಬದಲಿಸಿದ್ದ. ಇಲ್ಲೂ ಅದೇ ಚಾಳಿ ಮುಂದುವರಿಸಿದ. ಹಿಂದೆ ನಾಯಿಗಳ ವಿರುದ್ಧ ಬುರುಡೆ ಬಿಟ್ಟಂತೆ ಈಗ ಕ್ಷೌರಿಕರನ್ನು ಬಲಿ ಹಾಕಿದ. 'ಸಂಜೆ ದೀಪ ಹಚ್ಚಿದ ಮೇಲೆ ಹಜಾಮರ ಮುಖ ನೋಡಬೇಡಿ. ಅದು ಅಪಶಕುನ ದರಿದ್ರ ಬರುತ್ತೆ' ಎಂದು ಮತ್ತೊಂದು ಬಾಂಬ್ ಹಾಕಿಬಿಟ್ಟ.

ಇದರಿಂದ ರೊಚ್ಚಿಗೆದ್ದ ಸವಿತಾ ಸಮಾಜದ ಯುವಕರು ಸುವರ್ಣ ಟಿವಿಯ ಕಚೇರಿಗೇ ದಾಳಿಯಿಟ್ಟರು. ಇಂಥವನನ್ನು ಇರ ಗೊಟ್ಟರೆ ಇನ್ನೇನು ಬತ್ತಿ ಇಟ್ಟಾನೋ ಎಂದು ಹೆದರಿದ ಸುವರ್ಣ ಟಿವಿಯವರು ಸಾಕಪ್ಪಾ ಜಾಗ ಖಾಲಿ ಮಾಡು ಎಂದಿದ್ದೇ ಆಚೆಗಟ್ಟಿಬಿಟ್ಟರು.

ಇಂಥ ಅಧಿಕ ಪ್ರಸಂಗಿಯನ್ನು ಅದೇನೆಂದು ಜೀ ಟಿವಿ ಕರೆದು ಮಣೆ ಹಾಕಿತೊ. ಹಾಸ್ಯಾಸ್ಪದವೆಂದರೆ ಯಃಕಶ್ಚಿತ್ ಅರ್ಚಕನಿಗೂ ಗೊತ್ತಿರುವಷ್ಟು ಜ್ಯೋತಿಷ್ಯ ಈತನಿಗೆ ಗೊತ್ತಿರಲಿಲ್ಲ, ವಾಸ್ತು, ಹಸ್ತ ಸಾಮುದ್ರಿಕೆ, ಜಾತಕದ ಕನಿಷ್ಠ ಪರಿಜ್ಞಾನವೂ ಇರಲಿಲ್ಲ. ಸುವರ್ಣ



ಟಿವಿಯಲ್ಲಿ ಬೃಹತ್‌ಬ್ರಹ್ಮಾಂಡ ಶುರುವಾಗಿದ್ದೇ ತಡ, ಶರ್ಮ ಎಂಥಾ ಉದ್ಧಟತನಕ್ಕಿಳಿದನೆಂದರೆ 'ಮುಂಡೆ ಮಕ್ಳಾ ಬೆಳಿಗ್ಗೆ ಎದ್ದು ಗಂಡ ಸತ್ತೋರ್ ಮುಖ ನೋಡಬೇಡಿ ಅಂತ ಎಷ್ಟು ಸಲ ಬಾಯಿ ಬಡಕೊಂಡ್ರೂ ಕೇಳಲ್ಲ.' ಈ ಹೆಂಗಸರಿಗಂತೂ ಮೂರ್ಕಾಸಿನ ಬುದ್ಧಿ ಇಲ್ಲ, ಮುಂಡೆವು ಎಷ್ಟು ಸಲ ಹೇಳಿದ್ರೂ ಕೇಳಲ್ಲ' ಎಂದು ವೀಕ್ಷಕರನ್ನೇ ಬಯ್ಯುತ್ತಿದ್ದ.

ಬೊಜ್ಜನ್ನೇ ಕರಗಿಸಲಾರ

ಜ್ಯೋತಿಷ್ಯದ ತಲೆಬುಡ ಗೊತ್ತಿಲ್ಲದ, ನೆಟ್ಟಗೆ ಎಸ್ಸೆಸ್ಸೆಲ್ಸಿಯನ್ನೂ ಪಾಸು ಮಾಡದ, ಲೋಕಜ್ಞಾನದ ಪರಿವೆಯಿಲ್ಲದ, ವಿಜ್ಞಾನ ಗಂಧವಿಲ್ಲದ ಪಟಾಲಂ ವಂಚಕನೊಬ್ಬನಿಗೆ ಜೀ ಟಿವಿ ಮಣೆ ಹಾಕಿತೆಂದರೆ ಇದಕ್ಕಿಂತ ಇನ್ನೇನಾಗಲು ಸಾಧ್ಯ. ನರೇಂದ್ರ ಬಾಬು ಶರ್ಮನಿಗೆ ಗೊತ್ತಿರುವುದು ಹೆಂಗಸರ ಸೈಕಾಲಜಿ ಮತ್ತು ಪ್ರಳಯದ ಪ್ರತೀತಿ ಮಾತ್ರ. ಅದನ್ನೇ ತನ್ನ ಲಾಭಕ್ಕೆ ಬಳಸಿಕೊಂಡಿದ್ದಾನೆ. ನಂಬಿದ ಮಂಕುದಿಣ್ಣೆಗಳು ಐದೆಣ್ಣೆ ದೀಪ ಹಚ್ಚಿದ ಮಾತ್ರಕ್ಕೇ ಪ್ರಳಯ ನಿಲ್ಲುತ್ತಾ? ಐದೆಣ್ಣೆದೀಪ ಹಚ್ಚಿದ ಮಾತ್ರಕ್ಕೇ ಆ ಜಗನ್ಮಾತೆ ಪ್ರಸನ್ನಳಾಗುವುದಾದರೆ ಇದನ್ನು ಹಿಮಾಲಯದ ನಿಗೂಢ ತಪಸ್ವಿಯೊಬ್ಬ ಶರ್ಮನ ಅಡ್ರೆಸ್ಸನ್ನೇ ಹುಡುಕಿಕೊಂಡು ಬಂದು ಹೇಳುತ್ತಾನೆಂದರೆ, ಅಂಥ ದೈವಿಶಕ್ತಿಯುಳ್ಳ ಜ್ಯೋತಿಷಿ ಶರ್ಮ ಸಾವಿರ ರೂಪಾಯಿಗೆ ಭವಿಷ್ಯ ಹೇಳಿ ಬದುಕಬೇಕಾದ ದುರ್ಗತಿ ಏಕೆ ಬರುತ್ತಿತ್ತು? ಇವತ್ತಿಗೂ ಮನೆ ಬ್ರೋಕರ್ ಕೆಲಸ ಮಾಡುತ್ತಾ ಪುಡಿ ಕಮೀಷನ್ನಿಗೆ ಕೈಚಾಚುತ್ತಾ ಜ್ಯೋತಿಷ್ಯ ಹೇಳಿಕೊಂಡು ಉಪಜೀವನ ಮಾಡುತ್ತಿರುವ ಶರ್ಮ ಪ್ರಳಯವನ್ನು ತಡೆಯುವುದು ಹಾಳಾಗಲಿ ಕನಿಷ್ಠ ತನ್ನ ಬೊಜ್ಜನ್ನಾದರೂ ದೈವೀಶಕ್ತಿಯಿಂದ ಕರಗಿಸಿಕೊಳ್ಳಬಹುದಿತ್ತಲ್ಲವೆ? ತನ್ನ ದೇಹದ ಬೊಜ್ಜನ್ನೇ ಕರಗಿಸಿಕೊಳ್ಳಲಾಗದವನು ಪ್ರಳಯವನ್ನು ತಡೆಯುವುದುಂಟಾ?

ಇಂಥ ಹಲಾಲುಟೋಪಿಗಳ ಮಾತು ನಂಬಿ ಮನುಷ್ಯತ್ವವನ್ನೇ ಮರೆತು ಪಂಚೈಲಕ್ಕೆ ಹೊರೆ ಹೋಗುವ ಮಂಕುದಿಣ್ಣೆಗಳಿಗೆ ಏನನ್ನಬೇಕು!

• ಡಾ. ಸೋಮನಾಥ್

ನಗೆಯನ್ನೇ ನುಂಗಿದ ಕೋಮುವಿಷ

ಕರಾವಳಿಯಲ್ಲಿ ಕೋಮುವಾದದ 'ವಿಷ' ಯಾವ ರೀತಿ ಹರಡುತ್ತಿದೆ ಎಂಬುದಕ್ಕೆ ಇತ್ತೀಚೆಗೆ 'ನಗೆ ಹಬ್ಬ' ಕಾರ್ಯಕ್ರಮದಲ್ಲಿ 'ಕಿಡಿಗೇಡಿ'ಗಳು ನಡೆಸಿದ ಸಣ್ಣ ದಾಂಧಲೆಯೇ ಒಂದು ಉದಾಹರಣೆ.

ಫೆಬ್ರವರಿ 20ರಂದು ತನ್ನ ಪತ್ರಿಕಾ ಪ್ರಸಾರವನ್ನು ಹೆಚ್ಚಿಸುವ ಸಲುವಾಗಿ 'ಪ್ರಜಾವಾಣಿ' ಪತ್ರಿಕಾ ಬಳಗ ಉಡುಪಿಯ ಪ್ರಖ್ಯಾತ ಬೋರ್ಡ್ ಹೈಸ್ಕೂಲ್ ಆವರಣದಲ್ಲಿ 'ನಗೆ ಹಬ್ಬ' ಎಂಬ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕರ್ನಾಟಕದಲ್ಲಿ ಹಾಸ್ಯ ಚಕ್ರವರ್ತಿಗಳೆಂದೇ ಹೆಸರಾಗಿರುವ ಎಂ.ಎಸ್.ನರಸಿಂಹ ಮೂರ್ತಿ, ರಿಚರ್ಡ್ ಲೂಯಿಸ್, ಡುಂಡಿರಾಜ್, ರವಿ ಭಜಂತ್ರಿ ಮತ್ತು ಮೈಸೂರು ಆನಂದರ ಬಳಗ ಈ ಕಾರ್ಯಕ್ರಮದಲ್ಲಿ ನಗೆ ಚಟಾಕಿ ಹರಿಸಿ ಜನರನ್ನು ರಂಜಿಸಲು ಆಗಮಿಸಿದ್ದರು. ಸರಳ ಉದ್ಘಾಟನಾ ಸಮಾರಂಭದ ಬಳಿಕ ಎಂ.ಎಸ್.ನರಸಿಂಹ ಮೂರ್ತಿ ವಿವಿಧ ವಿಡಂಬನೆಗಳನ್ನು ಉದಾಹರಿಸಿ ನಗೆ ಮಾತಿಗೆ ನಾಂದಿ ಹಾಡಿದರು. ಬಳಿಕ ರಿಚರ್ಡ್ ಲೂಯಿಸ್ ತಮ್ಮ ನಗೆ ಬಾಣ ಬಿಡಲು ಬಂದರು. ಅಲ್ಲಿದ್ದ ಜನರನ್ನು ಅಭಿನಂದಿಸಿ "ನಾನು ಇಲ್ಲಿಗೆ ಹಿಂದೊಮ್ಮೆ ಬಂದಿದ್ದನೇನೋ ಅನ್ನಿಸಲಾರಂಭಿಸಿದೆ. ಆದರೆ ನಿಜವಾಗಿ ನಾನು ಈವರೆಗೆ ಇಲ್ಲಿಗೆ ಬಂದಿಲ್ಲ. ಆದರೆ ವಿಚಾರಿಸಿದಾಗ ಇಲ್ಲಿ ಹಿಂದೆ ಜೈಲು ಇತ್ತಂತೆ. ಆದ್ದರಿಂದ ನನ್ನ ಪೂರ್ವ ಜನ್ಮದ ನೆನಪು ಬಂದಿರಬಹುದು" ಎಂದಾಗ ಜನರು ನಗಲಾರಂಭಿದಂತೆ "ಬಹುಶಃ ಇಲ್ಲಿರುವ ಎಲ್ಲರೂ ಆಗ ನನ್ನ ಜೊತೆ ಇದ್ದಿರಬಹುದು" ಎಂದು ಕುಟುಕಿದರು.



"ನಮ್ಮ ಮಾತು ಗಣಪತಿ ಸ್ತುತಿಯೊಂದಿಗೆ ಆರಂಭವಾಗಬೇಕಿತ್ತು. ಆದರೆ ನಮ್ಮ ನರಸಿಂಹಮೂರ್ತಿಗಳು ಅದನ್ನು ಮರೆತಂತೆ ಕಾಣುತ್ತೆ. ಆದ್ದರಿಂದ ನಾನೇ ಗಣಪತಿಯನ್ನು ಸ್ತುತಿಸುತ್ತೇನೆ. ನನಗೆ ನಮ್ಮ ನಾಟಕ ತಂಡದ ದಿನಗಳಲ್ಲಿ ಈ ರೀತಿ ಪ್ರಾರ್ಥಿಸಿ ಅಭ್ಯಾಸವಿದೆ. ನಾಟಕ ತಂಡಗಳು ನಾಟಕ ಆರಂಭಿಸುವ ಮುನ್ನ ವಿಘ್ನ ವಿನಾಯಕನಿಗೆ ನಮನ ಸಲ್ಲಿಸುತ್ತವೆ. ಬಹುಶಃ ನಾಟಕಗಳಲ್ಲಿ ಬಳಸುವ ವಿಗ್‌ಗಳಿಂದ ವಿಘ್ನ ಬರದಿರಲಿ ಎಂದಿರಬಹುದು. ಹೆಚ್ಚಿನ ನಾಟಕಗಳಲ್ಲಿ ವಿಗ್‌ಗಳ ಒಳಗೆ ಸೇರಿರುವ ಸೊಳ್ಳೆ, ಜಿರಲೆಗಳಿಂದ ಅನುಭವಿಸುವ ತಾಪತ್ರಯಗಳು ಒಂದೆರಡಲ್ಲ" ಎಂದು ಸೋದಾರಣೆಯೊಂದಿಗೆ ಹೇಳುತ್ತಾ ರಂಜಿಸಲಾರಂಭಿಸಿದರು.

"ಗಣಪತಿ ದೇವರು ಬಹಳ ಬುದ್ಧಿವಂತ. ಅದಕ್ಕಾಗಿಯೇ ಆತ ಮದುವೆಯಾಗಿಲ್ಲ. ತನ್ನ ತಂದೆಯನ್ನು ನೋಡಿ ಅವನಿಗೆ ಮದುವೆಯ ಬಗ್ಗೆ ಅಸಡ್ಡೆ ಬಂದಿರಬಹುದು. ಅವನ ತಂದೆ ಎರಡು ಮದುವೆಯಾಗಿ ಪಟ್ಟ ಪಾಡು ಒಂದೆರಡಲ್ಲ. ತೊಡೆ ಮತ್ತು ತಲೆಯಲ್ಲಿ ಇಬ್ಬರು ಪತ್ನಿಯರನ್ನು ಇಟ್ಟುಕೊಂಡ ತನ್ನ ತಂದೆ ತೊಂದರೆ ಅನುಭವಿಸಿದ್ದ ಎಂಬುದು ಗಣಪ್ಪನ ಗಮನಕ್ಕೆ ಬಂದಿರಬಹುದು. ನೀವು ನಿಮ್ಮ ಹೆಂಡತಿಯನ್ನು ಕೆಲವು ಗಂಟೆಗಳಷ್ಟು ಕಾಲ ತೊಡೆಯಲ್ಲಿ ಕುಳ್ಳಿರಿಸಿದ್ದರೆ ಏನಾಗುತ್ತೆ ಎಂಬ ಅನುಭವ ಎಣಿಸಿಕೊಳ್ಳಿ. ಲ್ಯಾಪ್ ಮತ್ತು ಟಾಪ್‌ಗಳ ಈ ಅವಾಂತರ ನೆನೆದೇ ಗಣಪ ಮೌಸ್ ಹಿಡಿದು ಇಲಿ ಮೇಲೆ ಏರಿದ" ಎಂಬುದಾಗಿ ಚಟಾಕಿ ಹಾರಿಸಿ ಗಣಪತಿಯ ಪ್ರಾರ್ಥನಾ ಗೀತೆಯನ್ನು ಹಿಮ್ಮೇಳದ ಜೊತೆ ರಾಗಬದ್ಧವಾಗಿ ಹಾಡಲಾರಂಭಿಸಿದರು.

ಮುಂದುವರೆದು "ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರದ್ದು ಇಲಾಸ್ಟಿಕ್ ಇಲ್ಲದ ಚೆಡ್ಡಿ ಧರಿಸಿ, ಅದರ ಮೇಲೆ ಪ್ಯಾಂಟ್ ಹಾಕಿಕೊಂಡ ಪರಿಸ್ಥಿತಿಯಂತಾಗಿದೆ. ಅದಕ್ಕಾಗಿ ಅವರು ಪ್ಯಾಂಟ್ ಜಾರಿದಂತಾಗಿ ಮೇಲೆ ಎಳೆಯುತೊಡುತ್ತಾರೆ. ಆದರೆ, ಜಾರಿದ ಅನುಭವ ನಿಲ್ಲುವುದೇ ಇಲ್ಲವಾಗಿದೆ. ಅದಕ್ಕಾಗಿ ದೆಹಲಿ-ಬೆಂಗಳೂರು ಎಂದೆಲ್ಲಾ ಓಡಬೇಕಾಗಿದೆ" ಎಂದು ವಿಡಂಬನೆ ಮಾಡಿದರು. ಆನಂತರ ಹಿಂದೊಮ್ಮೆ ತಮ್ಮ ಊರಲ್ಲಿ ತಾವು ನಾಟಕಗಳನ್ನು ಆಡುತ್ತಿದ್ದಾಗ 'ಕುರುಕ್ಷೇತ್ರ' ನಾಟಕಕ್ಕೆ ದುಡ್ಡು ನೀಡುತ್ತಿದ್ದ ಗ್ರಾಮದ ವಯೋವೃದ್ಧರು ತಮ್ಮ ಚಪಲಕ್ಕೆಂದು ದ್ರೌಪದಿಯ ಪಾತ್ರಕ್ಕೆ ಮಹಿಳಾ ಪಾತ್ರಧಾರಿಯನ್ನೇ ಕರೆಸಬೇಕೆಂದು ಕಂಡೀಶನ್ ಹಾಕುತ್ತಿದ್ದದ್ದು, ಅದಕ್ಕೆ ತಾವು ಮುಸ್ಲಿಂ ಯುವಕನೊಬ್ಬನಿಗೆ ಜುಟ್ಟು ಬಿಡುವಂತೆ ರೆಡಿ ಮಾಡಿ, ಅವನಿಂದ ಪಾತ್ರ ಮಾಡಿಸಿದನ್ನೆಲ್ಲ ರಂಜನೀಯವಾಗಿ ಹೇಳಿದರು.

ರಿಚರ್ಡ್ ಅವರ ಮಾತು ಮುಗಿಯುವ ವೇಳೆಗೆ ಎದುರಲ್ಲಿ ಕುಳಿತಿದ್ದ 'ನಶೆ' ಏರಿಸಿಕೊಂಡಿದ್ದ ಪ್ರೇಕ್ಷಕನೊಬ್ಬ ಏನನ್ನೋ ಬಡಬಡಿಸಲಾರಂಭಿಸಿದ. ಬಂದೋಬಸ್ತಿಗೆಂದು ಬಂದಿದ್ದ ಪೊಲೀಸರು ಆತನನ್ನು ಕರೆದೊಯ್ದರು. ಆದಾದ ಬಳಿಕ ಒಂದು ಸಣ್ಣ ಗುಂಪು "ರಿಚರ್ಡ್ ಲೂಯಿಸ್ ಹಿಂದೂ ದೇವರಿಗೆ ಅವಮಾನ ಮಾಡಿದ್ದಾರೆ., ಅವರು ಕ್ಷಮೆ ಕೇಳಬೇಕು. ಕಾರ್ಯಕ್ರಮಕ್ಕೆ ಧಿಕ್ಕಾರ" ಎಂದೆಲ್ಲಾ ವರಾತ ಶುರುವಿಟ್ಟಿತು. ಪೊಲೀಸರು ಅವರನ್ನು ಸಮಾಧಾನಪಡಿಸಿದರೂ ಅವರು ಕೇಳುವ ಸ್ಥಿತಿಯಲ್ಲಿರಲಿಲ್ಲ, ಸ್ವಲ್ಪ ಹೊತ್ತಿನ ನಂತರ ಮೊದಲು ಹೊರಗೆ ಕರೆದುಕೊಂಡು ಹೋಗಿದ್ದ ವ್ಯಕ್ತಿಯನ್ನು ಪೊಲೀಸರು ಮತ್ತೆ ವಾಪಸ್ಸು ಕರೆತಂದರು. ಅಷ್ಟುಹೊತ್ತಿಗೆ ವರಾತ ಮಾಡುತ್ತಿದ್ದ ಬೆರಳೆಣಿಕೆಯ ಗುಂಪಿನ ಸಂಖ್ಯೆ ಜಾಸ್ತಿಯಾಗಲಾರಂಭಿಸಿತು. ಸುಮಾರು ಒಂದು ಸಾವಿರದಷ್ಟಿದ್ದ ಪ್ರೇಕ್ಷಕರು ನಗೆಹಬ್ಬದ ಸಂಭ್ರಮದಲ್ಲಿದ್ದರೆ, ಧರ್ಮದ ಅಮಲೇರಿಸಿಕೊಂಡಿದ್ದ ಈ ಸಣ್ಣ ಗುಂಪು ವೇದಿಕೆಯ ಎದುರು ತನ್ನ 'ಕಿಡಿಗೇಡಿತನ'ವನ್ನು ಆರಂಭಿಸಿತ್ತು.

ಪರಿಸ್ಥಿತಿ ಕೈಮೀರುತ್ತಿದೆ ಎಂದು ಕಾರ್ಯಕ್ರಮದ ಸಂಘಟಕರಿಗೆ ಅನಿಸಿದ್ದರಿಂದ ಅವರು ರಿಚರ್ಡ್ ಅವರು ಕ್ಷಮೆಯಾಚಿಸಬೇಕೆಂದು ಸೂಚನೆ ನೀಡಿದರು. ರಿಚರ್ಡ್ ಕೂಡಾ ಪ್ರಾಂಜಲ ಮನಸ್ಸಿಂದ ಕ್ಷಮೆ ಕೇಳಿದರು. ಆದರೆ ಇದರಿಂದ ಈ ಗುಂಪಿಗೆ ಸಮಾಧಾನವಾಗಲಿಲ್ಲ. ಅಷ್ಟೊತ್ತಿಗೆ ವೇದಿಕೆಯ ಮೇಲೆ ಮೈಸೂರು ಆನಂದರ ಹಾಸ್ಯಗೋಷ್ಠಿ ನಡೆಯುತ್ತಿತ್ತು, ಮತ್ತೊಮ್ಮೆ ಕ್ಷಮೆಯಾಚಿಸಬೇಕೆಂಬ ಸೂಚನೆ ರಿಚರ್ಡ್ ಅವರಿಗೆ ಬಂದಿದ್ದರಿಂದ ಅವರು ಸ್ಪಷ್ಟವಾಗಿ "ನಾನು ಏನೂ ತಪ್ಪು ಮಾಡಿಲ್ಲ. ಆದರೂ ನನ್ನ ಹಾಸ್ಯ ಮಾತುಗಳಿಂದ ಯಾರ ಮನಸ್ಸಿಗಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಿ. ಬೇಕಾದರೆ ಒಂದು ಕಂಡೀಶನ್ ಹಾಕಿಕೊಳ್ಳೋಣ - ಈ ಕಾರ್ಯಕ್ರಮದಲ್ಲಿ ನಾನು ಇನ್ನು ಮಾತಾಡೋಲ್ಲ; ನನ್ನ ಇತರ ಮಿತ್ರರೇ ಇಡೀ ಕಾರ್ಯಕ್ರಮ ನಡೆಸುತ್ತಾರೆ. ನೀವು ಕೂಡಾ ನಿಮ್ಮ ಈ ಪ್ರತಿಭಟನೆ ನಿಲ್ಲಿಸಿ" ಅಂದರು. ಅಷ್ಟು ಮಾತ್ರವಲ್ಲ "ಬಹುಶಃ ನನ್ನ ಧರ್ಮ ಮತ್ತು ಹೆಸರು ನಿಮ್ಮ ಅಸಮಾಧಾನಕ್ಕೆ ಕಾರಣ ಅಂತಿದ್ದರೆ, ದಯವಿಟ್ಟು ಕೇಳಿ, ನಾನು ನನ್ನ ಹೆಸರನ್ನು ಬೇಕಿದ್ದರೆ ಬದಲಿಸಿಕೊಳ್ಳುತ್ತೇನೆ. ನನಗೂ ಆರೆಸ್ಸೆಸ್ ಗೊತ್ತು, ನಾನು ಅದರಲ್ಲಿ ಮೂರು ವರ್ಷ ಇದ್ದವ. ನಿಮ್ಮ 'ನಮಸ್ತೆ ಸದಾ ವತ್ಸಲೆ' ನನಗೂ ಗೊತ್ತು, ಬೇಕಿದ್ದರೆ ನರಹರಿ ಅಥವಾ ಚಕ್ರವರ್ತಿ ಸೂಲಿಬೆಲೆಯನ್ನು ಕೇಳಿ. ನನಗೆ ನನ್ನ ಬೈಬಲ್‌ಗಿಂತ ಹಿಂದೂ ಧರ್ಮ ಗ್ರಂಥಗಳ ಬಗ್ಗೆ ಹೆಚ್ಚು ತಿಳಿದಿದೆ. ನಾನು ಇರುವುದೇ ಇಂತಹ ಗೆಳೆಯರ ಜೊತೆಗೆ......" ಇತ್ಯಾದಿ ಹೇಳಿದರು.

ಆದರೂ ಆ ಗುಂಪು ಸಮಾಧಾನಗೊಳ್ಳಲಿಲ್ಲ. 'ಪ್ರಜಾವಾಣಿ' ಆಡಳಿತ ಮಂಡಳಿಯ ಮುಖ್ಯಸ್ಥರಲ್ಲಿ ಒಬ್ಬರಾಗಿದ್ದ ಕೆ.ಎನ್.ತಿಲಕ್ ಕುಮಾರ್ ಅವರನ್ನು ಕೆಲವರು ಪ್ರಶ್ನೆ ಮಾಡಲು ತೊಡಗಿದ್ದರು. ರಿಚರ್ಡ್ ಅವರು ಲಿಖಿತ ರೂಪದ ಕ್ಷಮಾಪಣಾ ಪತ್ರ ಓದಬೇಕೆಂಬ ಆಗ್ರಹ ಬಂತು. ಅದಕ್ಕೆ ರಿಚರ್ಡ್ ಅವರು "ಇದರಲ್ಲಿ ಗಣಪತಿ, ಈಶ್ವರ, ದ್ರೌಪದಿಗಳ ಬಗ್ಗೆ ಬರಹ ಇದೆ. ನಾನು ಅವರಿಗೆ ಏನೂ ಅವಹೇಳನ ಮಾಡಿಲ್ಲವಾದ್ದರಿಂದ ಇದನ್ನು ಓದಿ ಹೇಳಿ ನಾನು ಮಾಡದ ತಪ್ಪಿಗೆ ಕ್ಷಮೆ ಯಾಕೆ ಕೇಳಬೇಕು" ಎಂದಾಗ ಅಲ್ಲಿ ನೆರೆದಿದ್ದ ಬಹುತೇಕ ಜನ "ಬೇಡ, ಬೇಡ" ಎಂದೇ ಹೇಳಿದರು.

ಆದರೂ ರಿಚರ್ಡ್ ಮತ್ತೊಮ್ಮೆ "ನನ್ನ ಮಾ... ನಿಮ್ಮ ಭಾವನೆಗಳಿಗೆ, ಮನಸ್ಸಿಗೆ ನೋವಾಗಿದ್ದರೆ ಕ್ಷ... ಅಂದರು. ಹಿಂದೂ ಧರ್ಮದಲ್ಲಿ 'ಕ್ಷಮಯಾ ಧ... ಎಂಬ ಮಾತುಗಳಿವೆ ಎಂಬುದರ ಅರಿವೇ ಇಲ್ಲದ ಕಿಡಿಗೇಡಿಗಳಿಗೆ ಇದಾವುದೂ ಕೇಳಿಸಲೇ ಇಲ್ಲ. ಕೊ... ರಿಚರ್ಡ್ ಲೂಯಿಸ್ ಅವರನ್ನು ವೇದಿಕೆಯಿಂದ ಇಳಿ... ಪೊಲೀಸರು ಅವರನ್ನು ತಮ್ಮ ಭದ್ರತಾ ವಾಹನ... ಕರೆದುಕೊಂಡು ಹೋದ ಬಳಿಕವಷ್ಟೆ ಪ್ರತಿಭಟನೆ ನಿಂ...

ಇಷ್ಟೆಲ್ಲಾ ನಡೆಯುತ್ತಿದ್ದರೆ ಕೆಲವು ಜನ ಇನ್ನೆಲ್ಲಿ ಗಲ... ಆಗುತ್ತದೋ ಎಂದು ಅಲ್ಲಿಂದ ಎದ್ದು ನಡೆದರೆ, ಗ... ಒಂಭತ್ತು ದಾಟುತ್ತಾ ಬಂದಿದ್ದರಿಂದ ಇನ್ನು ಕೆಲವ... ಹೊರಟುಹೋದರು. ಒಂದು ವೇಳೆ 'ನಗೆ ಹಬ್ಬ'ಕ್ಕೆ ನೆರೆ... ಬಹುತೇಕ ಪ್ರೇಕ್ಷಕರು ಈ ಬಗ್ಗೆ ಗಟ್ಟಿ ಧ್ವನಿ ಮಾಡಿ... ಪೊಲೀಸರು ಈ ಸಣ್ಣ ಗುಂಪನ್ನು ಬಂಧಿಸುತ್ತಿದ್ದ... ಏನೋ? ಆದರೆ ಹಾಗಾಲಿಲ್ಲ.

ವಾಸ್ತವವಾಗಿ ಹೀಗೆ ದೇವರನ್ನು ವಿಮರ್ಶಿಸುವ ಹಲ... ಮಾತುಗಳು ದಾಸರ ಕೀರ್ತನೆಗಳಲ್ಲಿ ಇವೆ. ವಚನಗಳ... ಧರ್ಮವನ್ನೇ ಖಂಡತುಂಡವಾಗಿ ವಿಮರ್ಶಿಸಲಾಗಿ... ಉಡುಪಿ ಕೃಷ್ಣ ದೇವಸ್ಥಾನದಲ್ಲಿ ಶಂಕರಾಚಾರ್ಯರ... ತೀವ್ರವಾಗಿ ವಿರೋಧಿಸುವ, ಶೈವ ಪರಂಪರೆಯ... ಖಂಡಿಸುವ ಧ್ವನಿ ಕೇಳಿಸುತ್ತದೆ.

ಕರಾವಳಿಯ ಗಂಡು ಕಲೆ ಯಕ್ಷಗಾನದಲ್ಲಿ ಈ 'ದೇವ... ಪಾತ್ರ ಹಾಕಿದವರು ಪರಸ್ಪರ ವಿಡಂಬನೆ ಮಾಡಿಕೊಳ್ಳ... ಪರಂಪರೆಯೇ ಇದೆ. ಆದರೆ ಇತ್ತೀಚೆಗೆ ಬಹುತೇ... ಯಕ್ಷಗಾನಗಳಲ್ಲಿ ಒಂದು ಧರ್ಮವನ್ನು ಹೀಯಾಳಿಸು... ಪದಗಳು ಹೆಚ್ಚು ಬಳಕೆಯಾಗುತ್ತಿವೆ. ಆದರೆ ಎಲ್ಲಿಯೂ... ಈ ರೀತಿಯ 'ಪ್ರತಿಭಟನೆ'ಗಳು ಕಂಡು ಬಂದಿಲ್ಲ. ಆದ್ದರಿ... ಈ 'ಪ್ರತಿಭಟನೆ' ಪೂರ್ವ ನಿಯೋಜಿತವಾಗಿತ್ತೇ ಎಂ... ನನಗೆ ಅನ್ನಿಸಿತು.


ನಮ್ಮ ದೇವರು ಯಾರೋ ಒಬ್ಬ ಕಲಾವಿದ/ ಹಾ... ಗಾರನ ವಿಡಂಬನೆಯಿಂದ ಸಣ್ಣವನಾಗುತ್ತಾನಾ? ಇದ... ಬೇರೆ ಯಾವುದೋ ಕಾರ್ಯಕ್ರಮದಲ್ಲಿ ಪ್ರಗತಿಪರ... ಮಾಡಿದ್ದರೆ ಪೊಲೀಸರು ಮತ್ತು ಸಂಘಟಕರು ಸುಮ್ಮ... ಇರುತ್ತಿದ್ದರೇ? ಇಂತಹ ವರ್ತನೆಗಳು ನಮ್ಮ ಅಭಿವ್ಯ... ಸ್ವಾತಂತ್ರ್ಯಕ್ಕೆ ಧಕ್ಕೆಯಲ್ಲವೇ? ನಮ್ಮ ಕರಾವಳಿಯಲ್ಲಿ ಒಂ... ಧರ್ಮದ ಅಥವಾ ದೇವರ ಬಗೆಗಿನ ವಿಮರ್ಶೆಗೆ ಅವಕಾ... ಇಲ್ಲದಂತಾಗಿದೆಯೇ?

ಅಥವಾ ರಿಚರ್ಡ ಲೂವಿಸ್ ಅವರು ಬೇರೆ ಧರ್ಮ... ದವರು ಎಂಬ ಕಾರಣಕ್ಕೆ ಮಾತ್ರ ಈ ರೀತಿ ಮಾಡಲಾಯಿತೇ... ಇಲ್ಲವಾದಲ್ಲಿ ಅದೇ ಗಣಪತಿಯ ಬಗ್ಗೆ ನರಸಿಂಹ... ಮೂರ್ತಿಗಳು ಇದೇ ತರಹದ ಮಾತುಗಳನ್ನು ಆಡಿದಾ... ಅದಕ್ಕೆ ಯಾಕೆ ಈ ರೀತಿಯ ಆಕ್ಷೇಪಣೆಗಳು ಕೇಳಿಸಲಿಲ್ಲ... ಜಸ್ಟೀಸ್ ಸೋಮಶೇಖರ್ ಆಯೋಗದ ವರದಿಯ... ಸಂಘಟಿತರಾಗಿ ಪ್ರತಿಭಟಿಸಿದ ಕ್ರೈಸ್ತ ಸಮುದಾಯಕ್ಕೆ, ಸೂ... ಉತ್ತರು ನೀಡುವ ಯತ್ನ ಇದಾಗಿತ್ತಾ? ಅದಕ್ಕೆಂದೇ ರಿಚರ್ಡರನ್ನು ಗುರಿಯಾಗಿಸಲಾಯಿತಾ?

• ಆದಿತ್...

'ನಗೆ ಹಬ್ಬ'ದ ನಡುವೆ ಒಂದು 'ಫ್ಯಾಸಿಸ್ಟ್ ಬ್ರೇಕ್'!

ಮಾರ್ಚ್ 13, 2005ರಂದು ನಡೆದ 'ಆದಿ ಉಡುಪಿ ಬೆತ್ತಲೆ ಪ್ರಕರಣ'ದ ಕುರಿತ ನ್ಯಾಯಾಲಯದ ವಿಚಾರಣೆ ಮೂರು ವರ್ಷಗಳ ಕಾಲ ನಡೆದು, 2008ರ ಜುಲೈ 29ರಂದು ತೀರ್ಪು ನೀಡಲಾಯಿತು. ಆ ತೀರ್ಪಿನಲ್ಲಿ 13 ಜನ ಆಪಾದಿತರನ್ನು 'ನಿರಪರಾಧಿ'ಗಳೆಂದು ಖುಲಾಸೆ ಮಾಡಲಾಯಿತು. ಈ ತೀರ್ಪಿನಲ್ಲಿ ಎರಡು ಕಡೆ ನ್ಯಾಯಾಧೀಶರು ತಮ್ಮ ತೀರ್ಪಿಗೆ ಉಡುಪಿಯ ನಾಗರಿಕರ ಪ್ರತಿಕ್ರಿಯೆಯನ್ನು ಆಧಾರವಾಗಿ ನಮೂದಿಸಿದ್ದಾರೆ. ಎರಡೂ ಕಡೆಗಳಲ್ಲೂ ನ್ಯಾಯಾಧೀಶರು ಈ ಪ್ರಮಾಣದ ಅಪರಾಧ ನಡೆಯುವುದನ್ನು ಕಣ್ಣಾರೆ ಕಂಡ ನಾಗರಿಕರು ಹಿಂಸೆಗೆ ತುತ್ತಾದವರ ನೆರವಿಗೆ ಬರಲಿಲ್ಲ ಎಂದು ನಂಬುವುದಕ್ಕೆ ಸಾಧ್ಯವೇ ಇಲ್ಲವಾದ್ದರಿಂದ, ಈ ಘಟನಾವಳಿ ನಡೆದೇ ಇಲ್ಲವೆಂದು ತೀರ್ಮಾನಿಸಬೇಕಾಗುತ್ತದೆ ಎಂಬ 'ಪ್ರಾಸಂಗಿಕ ಪುರಾವೆ ಆಧಾರಿತ ನಿರ್ಣಯ' (ಜಡ್ಜ್‌ಮೆಂಟ್ ಬೇಸ್ಡ್ ಆನ್ ಸರ್ಕಂಸ್ಟೆನ್ಷಿಯಲ್ ಎವಿಡೆನ್ಸ್) ತೆಗೆದುಕೊಂಡಿದ್ದಾರೆ. ಈ ತೀರ್ಪು ಪ್ರಕಟವಾದದ್ದು ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ. ಆಗ ನಮ್ಮ ಹಿರಿಯ ಮಿತ್ರರೂ; ಈ ಕೇಸು ನಡೆದ ಮೂರು ವರ್ಷಗಳ ಕಾಲ ಸತತವಾಗಿ ಕೋರ್ಟಿಗೆ ಹಾಜರಾಗಿದ್ದು ನ್ಯಾಯದಾನ ವಿಧಾನವನ್ನು ತಮ್ಮ ಬರಹ-ಭಾಷಣಗಳ ಮೂಲಕ ವಿಮರ್ಶಿಸಿದ ಜಿ.ರಾಜಶೇಖರ್ ಕೋರ್ಟಿನ ಆವರಣದಲ್ಲಿದ್ದರು. ಪತ್ರಿಕಾ ವರದಿಗಾರರು ಹಾಗು ಪೊಲೀಸರ ಸಮ್ಮುಖದಲ್ಲಿ, ಅವರನ್ನು ಸಂಘಪರಿವಾರದವರು ಸುತ್ತುವರೆದು ಹೀಯ್ಯಾಳಿಸಿದರು. ನಂತರ, ಉಡುಪಿಯ ಮುಖ್ಯ ಬೀದಿಯಲ್ಲಿ ವಿಜಯೋತ್ಸವದ ಮೆರವಣಿಗೆ ನಡೆಸಿ, ಸದಾ ಜನನಿಬಿಡವಾಗಿರುವ ಸರ್ವೀಸ್ ಬಸ್‌ಸ್ಟ್ಯಾಂಡ್ ಬಳಿಯ ಗಾಂಧಿ ಪ್ರತಿಮೆಯ ಎದುರು ಸಭೆ ಸೇರಿ 'ದನ ಸಾಗಾಟ ಮಾಡಿದರೆ ಎಚ್ಚರ! ಮಾಡಿದವರಿಗೆ ಆದಿ ಉಡುಪಿಯ ಶಿಕ್ಷೆಯೇ ಕಾದಿದೆ' ಎಂದು ರಾಜಾರೋಷವಾಗಿಯೇ ಘೋಷಿಸಿದರು. ಇದರ ಬಗ್ಗೆಯೂ ಉಡುಪಿಯ ಸಭ್ಯ ನಾಗರಿಕರು ಚಕಾರವೆತ್ತಿಲ್ಲವಾದ್ದರಿಂದ, ಇದ್ಯಾವುದೂ ನಡೆದೇ ಇಲ್ಲ ಎಂದೇ ನಾವು ಭಾವಿಸತಕ್ಕದ್ದು. ಆದಿ ಉಡುಪಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದ ಹೊತ್ತಿನಲ್ಲಿಯೇ, ಈ ಪ್ರಕರಣದ ಆರೋಪಿ ನಂ.5 ಯಶಪಾಲ್ ಸುವರ್ಣ ಉಡುಪಿಯ ಶಾಸಕರು ಹಾಗು ಕರ್ನಾಟಕ ಸರಕಾರದ ಸನ್ಮಾನ್ಯ ಗೃಹ ಸಚಿವರ ಬೆಂಬಲದಿಂದ ಉಡುಪಿ ನಗರ ಸಭೆಯ ನಾಮನಿರ್ದೇಶಿತ ಸದಸ್ಯನಾದ; ಮತ್ತೂ ನಂತರದ ಕೆಲವೇ ತಿಂಗಳುಗಳಲ್ಲಿ ನಡೆದ ಉಡುಪಿ ನಗರಸಭೆ ಚುನಾವಣೆಯಲ್ಲಿ ಆತ, ಉಡುಪಿಯ ಅತ್ಯಂತ ಸುಶಿಕ್ಷಿತ ನಾಗರಿಕರು ಮತದಾರರಾಗಿರುವ ವಾರ್ಡಿನಿಂದ ಭಾರಿ ಬಹುಮತದಿಂದ ಗೆದ್ದ. ಇಂಥ ವ್ಯಕ್ತಿ 'ಆದಿ ಉಡುಪಿ ಪ್ರಕರಣ'ದಂತಹ ಆರೋಪಿತ ಕೃತ್ಯದಲ್ಲಿ ಭಾಗವಹಿಸಿದ ಎಂದು ನಂಬಲಾದೀತೇ! ಉಡುಪಿಯ ಸಭ್ಯ ನಾಗರಿಕರು ಇಂತಿರುತ್ತಿರಲಾಗಿ, ಉಡುಪಿಯ ಬಿ.ಜೆ.ಪಿ. ಶಾಸಕರ ಪತ್ನಿ ರಾತ್ರೋರಾತ್ರಿ ಸಂಸಾರ ತೊರೆದು, ದೆಹಲಿಯ ಅಪಾರ್ಟ್‌ಮೆಂಟ್ ಒಂದರಲ್ಲಿ ನಿಗೂಢವಾಗಿ ಆತ್ಮಹತ್ಯೆ ಮಾಡಿಕೊಂಡರು. ಈ ಬಗ್ಗೆಯೂ, ಶಾಸಕರನ್ನು ಬಹುಮತದಿಂದ



ಚುನಾಯಿಸಿದ ಉಡುಪಿಯ ಸಭ್ಯ ನಾಗರಿಕರು ನಿರುಮ್ಮಳವಾಗಿರುವುದರಿಂದ ಅಂತಹದೊಂದು ಪ್ರಕರಣ ನಡೆದಿದೆ ಎಂದೂ ಯಾರಾದರೂ ನಂಬಬಹುದೋ?

ಉಡುಪಿಯ ನಾಗರಿಕರ ಈ ಸಭ್ಯ ವರ್ತನೆಗಳನ್ನು 'ನಗೆ ಹಬ್ಬ'ದ ಪ್ರಕರಣದಲ್ಲಿ ಜ್ಞಾಪಿಸಿಕೊಳ್ಳುವುದಕ್ಕೆ ಕಾರಣವಿದೆ. ಪ್ರಸ್ತುತ ಪ್ರಕರಣ ನಡೆದದ್ದು ಉಡುಪಿಯ ಸರ್ವೀಸ್ ಬಸ್‌ಸ್ಟ್ಯಾಂಡ್ ಬಳಿ ಇರುವ ಬೋರ್ಡ್ ಹೈಸ್ಕೂಲ್ ಆವರಣದಲ್ಲಿ, ಅಂದು ಆ ಸಭೆಯಲ್ಲಿ ಮಾ... ಕರ್ನಾಟಕ ಸರಕಾರದ ಅಧಿಕಾರಿ ವರ್ಗವೂ ಸೇರಿದಂ... ಒಂದು ಸಾವಿರಕ್ಕೂ ಮಿಕ್ಕಿದ ಸಭ್ಯ ನಾಗರಿಕರು ಸೇರಿದ್ದರು. ಈ ದಾಂಧಲೆ ನಡೆಯುವ ಮುಂಚೆ 'ನಗೆಹಬ್ಬ'ದ ಸಡಗರವನ್ನು ಮನಸಾರೆ ಆನಂದಿಸುತ್ತಿದ್ದರು. ದಾಂಧಲೆ ಶುರುವಾದಾಗ ಕೆಲವು ನಾಗರಿಕರು ಈ ಉಸಾಬರಿ ಬೇಡ ಎಂದು ಜಾಗ ಖಾಲಿ ಮಾಡಿದರು. ದಾಂಧಲೆ ಮಾಡಿದವ... ಪ್ರಕಾರ ಅಪರಾಧಿಗಳಾದ ಕಲಾವಿದರನ್ನು ಪೊಲೀಸು ರಕ್ಷಣೆಯಲ್ಲಿ ಕರೆದೊಯ್ಯಲಾಯಿತು. ನಂತರ ಮತ್ತೆ 'ಜನಸಾಗರ... ನಡುವೆ ಕೃಷ್ಣನ ನಾಡಲ್ಲಿ ಉಕ್ಕಿತ್ತು ನಗೆ... ಗಡಲು...'(ಪ್ರಜಾವಾಣಿ, ದಿ. 21.2. 2011ರ ಮಂಗಳೂರು ಆವೃತ್ತಿಯ ತಲೆಬರಹ ಪು.2). ಉಡುಪಿ ಪೊಲೀಸ್ ಅಧಿಕಾರಿಗಳ ಎದುರೇ ನಡೆದ ಈ ದಾಂಧಲೆಯ ಬಗ್ಗೆ ಒಂದು ದೂರಿಲ್ಲ, ಒಂದು ಕೇಸೂ ದಾಖಲಾಗಿಲ್ಲವೆಂದಾದ ಮೇಲೆ ಈ ಪ್ರಕರಣವನ್ನು ಹೇಗೆ ಅರ್ಥಮಾಡಿಕೊಳ್ಳುವುದು ಎಂದು ತಲೆ ಕೆಡಿಸಿಕೊಳ್ಳಬೇಡಿ. ಪ್ರತಿಷ್ಠಿತ 'ನಗೆಹಬ್ಬ'ದ ನಡುವೆ ಇದೊಂದು 'ಫ್ಯಾಸಿಸ್ಟ್ ಬ್ರೇಕ್' ಅಷ್ಟೇ ಎಂದು ಭಾವಿಸಿ 'ನಗುನಗುತ್ತಾ ನಲಿ ನಲಿ ಏನೇ ಆಗಲಿ' ಎಂದು ಹಾಡಿಕೊಂಡಿರಲು ನಿಮಗೇನು ಧಾಡಿ?

• ಕೆ.ಫಣಿರಾಜ್

ನನ್ನ ಇಂಗ್ಲಿಷ್ ವೃತ್ತಿ

"...ಸ್, ಈ ಸರ್ತಿ ಕಾಲೇಜ್ ಡೇ ಚೆನ್ನಾಗಿ ಆಯ್ತು!" ...ನ್ನಾ ಕೆಲಸ ಮಾಡಿ ಸುಸ್ತಾಗಿ ಟೇಬಲ್ಲಿನ ಮೇಲೆ ...ಕೆಳಮುಖ ಮಾಡಿ ನಿದ್ರಿಸುತ್ತಿದ್ದ ನಾನು ತಲೆ ...ು ಅಂತ ನೋಡಿದೆ. ಐದಾರು ವಿದ್ಯಾರ್ಥಿಗಳು ...ದ ಕೈ ಕಟ್ಟಿಕೊಂಡು ನಿಂತಿದ್ದಾರೆ. ಅವರ ... ಖುಷಿಯ ಭಾವನೆ ಎದ್ದು ಕಾಣಿಸ್ತಿದೆ. ... ಅಲ್ಲ ಈ ಕಾರ್ಯಕ್ರಮ. ಚೆನ್ನಾಗಿ ಆಗ್ಲೇಬೇಕಾ ...ಂತ ಹೇಳಿದೆ. ಅವರು ಮತ್ತಷ್ಟು ವಿನಯವಂತಿಕೆ ...ವವನ್ನು ಪ್ರದರ್ಶಿಸೋದಿಕ್ಕೆ ಪ್ರಯತ್ನಿಸುತ್ತಿರುವ್ರು ...ತಿ ನಾನು ಅವರನ್ನು ಬೀಳ್ಕೊಟ್ಟು ನನ್ನ ಕೊಠಡಿಗೆ ...ತುಕೊಂಡೆ. ನೆನಪುಗಳು ಮತ್ತೆ ಕಾಡತೊಡಗಿದವ್ರು. ...ಲೇಜಿಗೆ ಬಂದು ಐದು ವರ್ಷಗಳಾದವು. ಈ ... ನಾನು ಎಷ್ಟೊಂದು ಬದಲಾವಣೆಯಾಗಿದ್ದೇನೆ! ...ದ ಹಿಂದೆ ಇದ್ದ ದುಗುಡ, ಆತಂಕ, ... ಕೀಳರಿಮೆ ಕಡಿಮೆಯಾಗಿ, ಈಗ ... ಒಂದು ಥರದ ಧೈರ್ಯ, ಭರವಸೆ

... ಬೆಸಗರಹಳ್ಳೀಲಿ ಹುಟ್ಟಿದ್ದು ಅಂತ ...ಳ್ತಾಯಿರ್ತಾಳೆ. ಅಪ್ಪ ಯಾರು ಅಂತ ...ನನ್ನವ್ವನಿಗೆ ಕೈ ಕೊಟ್ಟು ಎಲ್ಲೋ ...ಹೋಗಿದ್ದ ಅವನನ್ನು ಹುಡುಕಿಕೊಂಡು ...ಬ್ಬೂರು ಹಳ್ಳಿಗೆ ಬಂದಳು. ನನ್ನಪ್ಪ ...ಲ್ಲ. ಅಲ್ಲೇ ಹೊಲದಲ್ಲಿ ಕೂಲಿ ...ಡು ನನ್ನನ್ನ ಸಾಕಿದ್ಳು. ನನ್ನ ಮೈಯ ...ದ್ದರಿಂದ ಹಳ್ಳೀಲಿ ಎಲ್ಲರೂ ನನ್ನನ್ನು ...ು" ಅಂತ ಕರಿತಿದ್ರು. ಅಲ್ಲೇ ಇರೋ ...ಲೆಯಲ್ಲಿ ನಾನು ವಿದ್ಯಾಭ್ಯಾಸ ಮುಗಿ ...ಎಸ್‌ಎಲ್‌ಸಿ ಪಾಸ್ ಆದಾಗ ನನ್ನ ...ದೇ ದೊಡ್ಡ ಸಾಧನೆ ಅಂತ ಒಬ್ಬ ... ಹೇಳಿದ ನೆನಪು. "ಏ ಹುಡುಗಾ, ...ಗೆ ಹೋಗಿ ಸರ್ಕಾರಿ ಕಾಲೇಜ್ ...ಅಲ್ಲಿ ನಿಮ್ಮಂತ ಬಡ ಹುಡುಗರಿಗೆ ...ಡುಡ್ತು ಅಂತೆ" ಅಂತ ಯಾರೋ ...ಗೆ ಹೇಳಿದ್ದನ್ನು ಕೇಳಿ, ಅವ್ವನ ಹತ್ತಿರ ...ತಿದು ಬೆಂಗಳೂರಲ್ಲಿ ಕಾಲೇಜು ... ಮುಗಿಸಿದ್ದೆ. ಅಷ್ಟು ಸಾಲದಕ್ಕೆ ...ಲ್ಲಿ ಎಮ್‌ಎ ಮಾಡಿದ್ರೆ ಕೆಲಸ ...ಂತ ಯಾರೋ ಹೇಳಿದ್ರು. ಅದನ್ನೂ ...ಸ್ ಮಾಡಿದೆ. ಹೈಯರ್ ಫಸ್ಟ್ ... ವ್ಯಾವಹಾರಿಕ ಇಂಗ್ಲಿಷನ್ನ ಸುಲಲಿತ ...ತನಾಡೋದಕ್ಕೆ ಆಗದಿದ್ದರೂ, ಪಾಠ ...ಷ್ಟು ಇಂಗ್ಲಿಷ್ ಕಲಿತಿದ್ದೆ. ಈಗ ...ನ ಪ್ರತಿಷ್ಠಿತ ಫಸ್ಟ್ ಗ್ರೇಡ್ ಡಿಗ್ರಿ ...ಲ್ಲಿ ಕೆಲಸಕ್ಕೆ ಸಂದರ್ಶನ ಇದ್ದಿದ್ರಿಂದ, ಬೆಳಗ್ಗೆ ...ಟ್ಟಿ ಬೆಂಗಳೂರಿನ ಕಡೆಗೆ ಹೊರಟಿದ್ದೆ.

... ಸಂದರ್ಶನಕ್ಕೆ ಹೋಗ್ತಾ ಇರೋ ಕಾಲೇಜ್ ...ಲ್ಲಿ ಅತಿ ಪ್ರಸಿದ್ಧಿ ಪಡೆದ ಕೆಲವೇ ಖಾಸಗಿ ...ಗಳಲ್ಲಿ ಒಂದು. ಸರ್ಕಾರದ ಅನುದಾನ ಇತ್ತು. ...ಯುಜಿಸಿಯಿಂದ ಅದಕ್ಕೆ ಸ್ವಾಯತತ್ತೆಯ ಸ್ಥಾನ ... ಸಿಕ್ಕಿದ್ದವು. ಸಂದರ್ಶನಕ್ಕೆ ಬಂದ ಮೂರು ...ಗಳಲ್ಲಿ ನಾನು ಒಬ್ಬ.

...ರ್ಶನದ ಸಮಯದಲ್ಲಿ ಎಲ್ಲಾ ಔಪಚಾರಿಕ ...ನ್ನು ಪರಿಶೀಲಿಸಿದ ನಂತರ, ಪ್ರಿನ್ಸಿಪಾಲ್ ...ಕಾರರನ್ನು ಉದ್ದೇಶಿಸುತ್ತಾ,

"...is is Mr. ಕೆಂದ. . ಗಣ. . ಸ್ವಾಮಿ" ...ಂಗಿಯವರು ಹೇಳುವ ರೀತಿಯಲ್ಲಿ ನನ್ನ ಹೆಸರನ್ನು ...ಕೊಂಡು ಹೇಳಿ "ಇವರು ಅಬ್ಬೂರಿನ ...ು" ಎಂದು ಪರಿಚಯಿಸುವಾಗ ನಾನು ಹಳ್ಳಿಯ ...ವನು ಎಂದು ಆತ ಒತ್ತಿ ಹೇಳುತ್ತಿದ್ದಾನೆ ಅನಿಸಿತು. ...ದರ್ಶನಕಾರರಲ್ಲಿ ಒಬ್ಬಾಕೆ ನನ್ನ ಹೆಸರನ್ನು ಪೂರ್ತಿ ...ಗಿದೆ.


"...: Swamy, ನಮ್ಮಲ್ಲಿ ನೀವು ಕೇವಲ ಇಂಗ್ಲಿಷ್ ...ಮಾತ್ರ ಅಲ್ಲ ಹೊಸ, ಹೊಸ ಸಾಹಿತ್ಯ ಮತ್ತು ... ಕಲಿಸಬೇಕಾಗುತ್ತೆ. Gender studies, ...ern English Literature ಅಥವಾ at ... Literature of the Blacks ...ಗುತ್ತದೆ. ನೀವು ತಯಾರಿದ್ದೀರ?" ಎಂದು ... ಇತ್ತೀಚೆಗಷ್ಟೆ ಜಗತ್ತಿನ ಅನೇಕ ಹೊಸ ಸಾಹಿತ್ಯ ...ಸಂಘರ್ಷ ಲೋಕವನ್ನು ಪಠ್ಯಕ್ರಮದಲ್ಲಿ ಸೇರಿಸ ...ದಕ್ಕಾಗಿ ಈ ಕಾಲೇಜ್ ಅನೇಕ ಪ್ರಸಿದ್ಧ ಇಂಗ್ಲಿಷ್ ...–ಪ್ರಗತಿಪರರನ್ನು ಆಹ್ವಾನಿಸಿ, ಅವರ ಪಾಂಡಿತ್ಯದ ...ಡ ಇಂಗ್ಲಿಷ್ ಸಾಹಿತ್ಯದ ಸಂಪ್ರದಾಯವನ್ನು

ಮುರಿಯುವ ಕೆಚ್ಚೆದೆಯಿಂದ ಹೊಸ, ಹೊಸ, ಸಾಹಿತ್ಯಗಳನ್ನು ತಮ್ಮ ಪಠ್ಯ ಕ್ರಮದಲ್ಲಿ ಸೇರಿಸಿದ್ದರು ಅಂತ ನಾನು ಕೆಲಸಕ್ಕೆ ಸೇರಿದ ಕೆಲವು ದಿನಗಳ ನಂತರ ತಿಳಿಯಿತು.

Subaltern ಅನ್ನೋ ಪದ ನಾನು ಆಗ್ಲೇ ಮೊದಲು ಕೇಳಿದ್ದು. ನನ್ನ ಅಸಹಾಯಕತೆಯನ್ನು ಮುಚ್ಚಿಟ್ಟು, ಈಗ ಹೂಂ ಅಂತ ಹೇಳಿ ಆಮೇಲೆ ನೋಡಿಕೊಳ್ಳೋಣ ಅನ್ನೋ ಜಾಣತನ ಆ ಕ್ಷಣಕ್ಕೆ ನನಗೆ ಬರ್ಲಿಲ್ಲ. ನೇರವಾಗಿ ನಾನು,

"Sorry, madam. I did not study these subjects in my M.A. But I am confident to teach them".

ಆ ಮೇಡಮ್ ಪ್ರಿನ್ಸಿಪಾಲನನ್ನು ನೋಡಿ ತುಟಿಯಂಚಿನಲ್ಲಿ ವ್ಯಂಗ್ಯದ ನಗು ಬೀರಿದ್ದು ನನ್ನನ್ನು ಆ ಕ್ಷಣ ಚುಚ್ಚದೇ ಬಿಡಲಿಲ್ಲ. ಹೃದಯ ಭಾರವಾದರೂ, ಅದನ್ನು ತೋರಿಸಿ



ಕೊಳ್ಳದೆ ಸಂದರ್ಶನ ಮುಗಿದ ಮೇಲೆ ಹೊರಬಂದೆ.

ಆದರೆ ಒಂದು ವಾರದ ನಂತರ ನನಗೆ ಕೆಲಸ ಸಿಕ್ಕಿದ್ದು ಗೊತ್ತಾಗಿ ಪರಮಾಶ್ಚರ್ಯವಾಯಿತು. ಪವಾಡ ಅಂತ ಹೇಳಬಹುದೇನೋ? ಕೆಲಸಕ್ಕೆ ಸೇರಿದ ಒಂದು ತಿಂಗಳ ನಂತರ ನನ್ನ ಸಹೋದ್ಯೋಗಿ ಹೇಳಿದ ಪ್ರಕಾರ ಕಾಲೇಜಿನ ಮ್ಯಾನೇಜ್‌ಮೆಂಟ್‌ಗೆ ನನ್ನನ್ನು ಆಯ್ಕೆ ಮಾಡಲು ಸುತಾರಾಂ ಇಷ್ಟ ಇರಲಿಲ್ಲ. ನನಗೆ ನಿರರ್ಗಳವಾಗಿ ಇಂಗ್ಲಿಷ್ ಮಾತನಾಡಲು ಬರುವದಿಲ್ಲವೆಂದು, ಕಾಲೇಜಿನ ವಾತಾವರಣಕ್ಕೆ ಸೂಕ್ತವಾದ ಶೈಲಿ ನನ್ನಲಿಲ್ಲವೆಂದು ನನ್ನ ಆಯ್ಕೆಯನ್ನು ಪಕ್ಕಕ್ಕಿಟ್ಟು ಮ್ಯಾನೇಜ್‌ಮೆಂಟ್‌ನ ಕಡೆಯವರನ್ನು ಸೇರಿಸಿಕೊಳ್ಳಬೇಕೆಂದು ಅವರು ಬಹಳ ಪ್ರಯತ್ನ ಪಟ್ಟರಂತೆ. ಆದರೆ ಸಂದರ್ಶನದಲ್ಲಿದ್ದ ಶಿಕ್ಷಣ ಇಲಾಖೆಯ ಪ್ರತಿನಿಧಿ ನಾನು ಸಂದರ್ಶನವನ್ನು ಚೆನ್ನಾಗಿ ಮಾಡಿದನೆಂದು ಮತ್ತು ಬೇರೆಯವರಿಗಿಂತ ನನ್ನ ಎಮ್.ಎ. ಫಲಿತಾಂಶ ಚೆನ್ನಾಗಿ ಇರುವದರಿಂದ ನನ್ನ ಆಯ್ಕೆಗೆ ಹಠ ಹಿಡಿದನಂತೆ. ಈಗಾಗಲೇ ಹಲವಾರು ಹಗರಣದಲ್ಲಿ ಸುದ್ದಿ ಮಾಡಿದ್ದ ಕಾಲೇಜಿಗೆ ಮತ್ತೊಂದು ತೊಂದರೆ ಬೇಡವೆಂದು ಪ್ರಿನ್ಸಿಪಾಲ್ ನನ್ನ ಆಯ್ಕೆಯನ್ನು ಅಂಗೀಕರಿಸಿದ್ದರು.

ನನ್ನ ಕಾಲೇಜಿನಲ್ಲಿ ಓದುವ ಶೇಕಡಾ 70 ರಷ್ಟು ವಿದ್ಯಾರ್ಥಿಗಳು ಕಾಲೇಜಿಗೆ ನಡೆದುಕೊಂಡು ಬರುವುದು ಅತಿ ವಿರಳ. ಬಹುತೇಕ ಎಲ್ಲರು ಕಾರಿನಲ್ಲಿಯೋ ಅಥವಾ ಟೂವೀಲರ್‌ಗಳಲ್ಲೋ ಬರುತ್ತಾರೆ. ಇಂಗ್ಲಿಷ್ ಅವರಿಗೆ ಅನವಶ್ಯಕ. ಏಕೆಂದರೆ ಅವರೆಲ್ಲರಿಗೂ ಇಂಗ್ಲಿಷ್ ಬರುತ್ತೆ. ಅವರು ಮಾತನಾಡೋದು, ತಿನ್ನೋದು, ಉಸಿರಾಡೋದು ಇಂಗ್ಲಿಷೇ ಅಂತ ಉತ್ಪ್ರೇಕ್ಷೆ ಮಾಡಬಹುದು. ಇಂತಹ ಕಾಲೇಜಿಗೆ ಸೇರಿದ ಮೇಲೆ ಗೊತ್ತಾಯಿತು ನನ್ನ ವೃತ್ತಿಯ ಹಾದಿ ಸುಗಮವಾಗಿ ಸಾಗೋದಿಲ್ಲ ಅಂತ. ಡಿಪಾರ್ಟ್‌ಮೆಂಟಿನ ಮುಖ್ಯಸ್ಥೆ ಯಾರೂ ತೆಗೆದುಕೊಳ್ಳಲು ಇಷ್ಟಪಡದ ಗ್ರಾಮರ್ ಕ್ಲಾಸನ್ನ ನನ್ನ ಮೇಲೆ ಹೇರಿದ್ದು ನನಗಾದ ಮೊದಲ ಅವಮಾನ. ಜನರಲ್ ಇಂಗ್ಲಿಷ್‌ನ ಭಾಗವಾದ್ದರಿಂದ ನನ್ನ ಕ್ಲಾಸಿಗೆ ಬರುತ್ತಿದ್ದ ವಿದ್ಯಾರ್ಥಿಗಳು ಅತಿ ಕಡಿಮೆ. ವಿದ್ಯಾರ್ಥಿಗಳನ್ನು ನನ್ನ ಕ್ಲಾಸಿಗೆ ಬರುವಂತೆ ಮಾಡಲು ನಾನು ವಿಫಲನಾಗಿದ್ದೇನೆಂದು ನನ್ನ ಕೆಲ ಸಹದ್ಯೋಗಿಗಳು ಆಡಿಕೊಂಡಿದ್ದು ಎಷ್ಟೋ ಸಲ. ಅವರ ಕ್ಲಾಸಲ್ಲೂ ಸಹ ವಿದ್ಯಾರ್ಥಿಗಳು ಕಡಿಮೆ ಇರ್ತಾ ಇದ್ರು. ಹಾಗಾದ್ರೆ ಅವರು ವಿಫಲರಾಗಿದ್ದಾರೋ ಅಥವ ಸಫಲರಾಗಿದ್ದಾರೋ ಅಂತ ಪ್ರಶ್ನೆ ಕೇಳೋದಿಕ್ಕೆ ಮೊದಮೊದಲು ಹಿಂಜರಿಕೆ ಆಗ್ತಾ ಇತ್ತು. ಜೊತೆಗೆ ಅದ್ಯಾಕೋ ಈಗೀಗ ನನ್ನ ಮೈ ಬಣ್ಣ, ಮಾತಿನ ಶೈಲಿಯ ಬಗ್ಗೆ ಹೆಚ್ಚು, ಹೆಚ್ಚು ಪ್ರಜ್ಞಾಪೂರ್ವಕನಾಗಿ ವರ್ತಿಸುತ್ತಿದ್ದೆ. ಹಳ್ಳೀಲಿ ಸ್ನೇಹಿತರೆಲ್ಲರೂ ತನ್ನನ್ನು "ಕರಿ ಸ್ವಾಮಿ, ಕರಿ ಸ್ವಾಮಿ" ಅಂತ ಅಣಗಿಸಿ ಕರೆದಾಗ ಇಲ್ಲದ ಅಸಮಾಧಾನ ನನ್ನಲೀಗ ಹುಟ್ಟಿಕೊಂಡಿತ್ತು. ಹಂಗಂತ ಕಾಲೇಜಿನಲ್ಲಿ ನನ್ನನ್ನು "ಕರಿ ಸ್ವಾಮಿ" ಅಂತ ಯಾರು ಕರ್ದಿರಲಿಲ್ಲ. ಆದ್ರೂ, ಯಾಕೋ ನನಗೆ ನನ್ನ ಮೈ ಬಣ್ಣ ಇತ್ತೀಚೆಗೆ ಸ್ವಲ್ಪ ತಾತ್ಸಾರ ಬೆಳೆದಿತ್ತು. ಆದ್ರೆ ಏನು ಮಾಡೊಕಾಗುತ್ತೆ? ಕರಿ ಬಣ್ಣ ಇದೆ ಅಂತ ಚರ್ಮ ಸುಲಿದು, ಬಿಸಾಕಿ, ಬೆಳ್ಳಗೆ ಮಾಡಕಾಗುತ್ತಾ? ಹಾಗಾಗಿ ಇದು ನನ್ನ ಹಣೆ ಬರಹ ಅಂತ ಸುಮ್ಮನಿದ್ದೆ.

III

ಈ ದಿನ ಕ್ಲಾಸಿನಲ್ಲಿ ನಡೆದ ಘಟನೆ ನನ್ನ ಹೃದಯವನ್ನು ಇರಿಯುತ್ತದೆ ಎಂದು ನಾನು ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ.

ಯಾವತ್ತೂ ಕನ್ನಡದಲ್ಲಿ ಮಾತನಾಡದ ವಿನೋದ್ ಈ ದಿನ ಎದ್ದು ನಿಂತು, "ಸಾರ್, ನನಗೆ ಒಂದು ಪ್ರಶ್ನೆ ಕಾಡ್ತಾ ಇದೆ. ಅದಕ್ಕೆ ಉತ್ತರ ಹೇಳ್ತೀರ?" ಅಂತ ಕನ್ನಡದಲ್ಲಿ ಮಾತನಾಡಿದಾಗಲೇ ನನಗೆ ಅವನ ಬಗ್ಗೆ ಅನುಮಾನವಿತ್ತು. ಅವನ ಸ್ನೇಹಿತರು ವಿನೋದ್ ಏನು ಕೇಳ್ತಾನಂತ ಮೊದಲೇ ಗೊತ್ತಿರೋ ಹಾಗೆ ತಮ್ಮತಮ್ಮಲ್ಲೆ ಮುಸಿಮುಸಿ ನಕ್ಕರು. ಆದರೆ ನನ್ನ ಗಂಭೀರ ಮುಖವನ್ನು ನೋಡಿ ಸುಮ್ಮನಾದರು.

"Yes. You can ask. What is your question?"

"ನೀನು ನಿನ್ನ ಅಪ್ಪನಿಗೆ ಎಷ್ಟನೇ ಮಗ? ಇದನ್ನು ಇಂಗ್ಲಿಷ್‌ನಲ್ಲಿ ಹೇಳೋದು ಹೇಗೆ ಸಾರ್?" ಎಂದು ಕೇಳಿದಾಗ ಆತನ ಸ್ನೇಹಿತರೆಲ್ಲರೂ ಗೊಳ್ಳೆಂದು ನಕ್ಕರು. ಅವರ ನಗುವಿನಿಂದ ಉಂಟಾದ ಗಲಭೆಯನ್ನು ಸುಮ್ಮನಾಗಿಸಲು ಪ್ರಯತ್ನಿಸುತ್ತಿದ್ದಾಗ, ಮಧ್ಯಂತರದ ಕರೆಗಂಟೆಯ ಶಬ್ದ ಕೇಳಿಸಿ, ಎಲ್ಲಾ ವಿದ್ಯಾರ್ಥಿಗಳು ನಾನು ಅನುಮತಿ ಕೊಡೊ ಮೊದಲೆ ಕ್ಲಾಸ್‌ರೂಮಿನಿಂದ ಹೊರಬಿದ್ದರು. ಕ್ಲಾಸ್‌ರೂಮಿನಲ್ಲಿ ಈಗ ನಾನೊಬ್ಬನೇ. ಸಂಪೂರ್ಣ ವಿಚಲಿತನಾಗಿ ನಿಂತದ್ದು ನನಗೆ ಅರಿವಾಗಲೇ ಇಲ್ಲ. ಕೇಳಿದ ಪ್ರಶ್ನೆಯ ಕಠಿಣತೆಗಿಂತ ಅದರ ಹಿಂದಿನ ಉದ್ದೇಶ, ಮೂಲ ನನ್ನನ್ನು ಇರಿಯಿತು. ವಿನೋದ್ ಪ್ರಿನ್ಸಿಪಾಲರ ಮಗ ಎಂದು ನನಗೆ ಗೊತ್ತಾದಾಗ ಅವನ ಪ್ರಶ್ನೆಯ ಮೂಲದ ಬಗ್ಗೆ ನನಗೆ ಖಾತ್ರಿಯಾಯಿತು. ದುಃಖ ಉಮ್ಮಳಿಸಿ ಬಂತು. ತಡಕೊಂಡೆ.

ಎಷ್ಟೋ ಸಲ ನಾನು "ಅವ್ವ, ನನ್ನ ಅಪ್ಪ ಯಾರಮ್ಮ? ಅವನ ಹೆಸರು ಏನು?" ಎಂದು ಕೇಳಿದಾಗಲೆಲ್ಲ ನನ್ನನ್ನು ಗದರಿಸಿ, ತಾನೊಬ್ಬಳೆ ಕೋಣೆಯ ಒಳಗೆ ಹೋಗಿ, ಚಿಲಕವನ್ನು ಜಡಿದುಕೊಂಡು ಎಷ್ಟು ಹೊತ್ತಾದರೂ ಹೊರಗೆ ಬರುತ್ತಿರಲಿಲ್ಲ. "ಅವ್ವ, ಹೊರಗೆ ಬಾರವ್ವ" ಎಂದು ಎಷ್ಟು ಸಲ ಕೂಗಿದರು, ಅವಳಿಂದ ಉತ್ತರ ಬರದೇ, ಅವಳು ಅಳುತ್ತಿರುವದನ್ನು ಕೇಳಿಸಿಕೊಂಡಿದ್ದು ಎಷ್ಟೋ ಸಲ. ಅಪ್ಪನ ಬಗ್ಗೆ ಕೇಳಿದರೆ ಅವ್ವ ಮತ್ತೆ ಅಳುತ್ತಾ ಕುಳಿತುಕೊಳ್ಳುತ್ತಾಳೆಂದು ತಿಳಿದು ಆ ವಿಷಯವನ್ನು ಕೇಳುವುದೇ ಬಿಟ್ಟಿದ್ದೆ. ಅಪ್ಪನ ಬಗ್ಗೆ ಮತ್ತೆ ನೆನಪಾಗಿದ್ದು ಕಾಲೇಜಿನ ಸಂದರ್ಶನದಲ್ಲಿ ನನಗೆ ಪ್ರಿನ್ಸಿಪಾಲ್ ಕೇಳಿದ ಪ್ರಶ್ನೆಗಳಿಂದ.

IV

"ಅಲ್ರಿ, ಮೂರನೇ ವರ್ಷದ ವಿದ್ಯಾರ್ಥಿಗಳನ್ನ ಬಾಯಿಗೆ ಬಂದ ಹಾಗೆ ಬಯ್ದು ಕ್ಲಾಸ್‌ನಿಂದ ಹೊರಗಾಕಿದ್ರಂತಲ್ಲ? ಯಾಕೆ?" ಪ್ರಿನ್ಸಿಪಾಲ್ ಗಡುಸು ದನಿಯಲ್ಲಿ ಕೇಳಿದ. ಬಾಯಿಗೆ ಬಂದದ್ದು ಬಯ್ದೆ ಅಂತ ಆತ ಹೇಳಿದ್ದು ನನಗೆ ಇಷ್ಟವಾಗಲಿಲ್ಲ. ಅದು ಅವನ ಉದ್ದೇಶಪೂರ್ವಕ ಕಲ್ಪನೆ ಅಂತ ತಿಳಿದುಕೊಳ್ಳೋಕೆ ನಂಗೆ ಬಹಳ ಹೊತ್ತು ಬೇಕಾಗಿರ್ಲಿಲ್ಲ. ಈಗಾಗಲೇ ಅನೇಕ ಘಟನೆಗಳಿಂದ ನನ್ನ ಮನಸ್ಸಿನ ನೆಮ್ಮದಿ ಹಾಳಾಗಿತ್ತು. ಈಗ ಮತ್ತೊಂದು ವಿಷಮ ಸ್ಥಿತಿ.

ಆ ವಿದ್ಯಾರ್ಥಿಗಳು (ಇಬ್ಬರು ಹುಡುಗಿಯರು, ಮೂರು ಜನ ಹುಡುಗರು) ಕ್ಲಾಸಿಗೆ ಸರಿಯಾಗಿ ಬರ್ತಾ ಇಲ್ಲ; ಯಾವಾಗಲೊ ಒಮ್ಮೆ ಬರ್ತಾರೆ; ಇದಷ್ಟು ಬಂದು ಸುಮ್ಮನೆ ಕುಳಿತುಕೊಂಡು ಪಾಠ ಕೇಳೋ ಬದಲು ಅಶಿಸ್ತಿನಿಂದ ನಡೆದುಕೊಂಡ್ರು; ಎರಡು, ಮೂರು ಬಾರಿ ಎಚ್ಚರಿಸಿದರೂ ಕೇಳಲಿಲ್ಲ; ಹಾಗಾಗಿ, ಅವರನ್ನ ಕ್ಲಾಸಿನಿಂದ ಹೊರಗೆ ಹಾಕಬೇಕಾಯಿತು; ಅವರನ್ನ ನಾನು ಬೈಯ್ದಿಲ್ಲ ಎಂದು ಸಮಜಾಯಿಷಿ ಕೊಟ್ಟರೂ ಪ್ರಿನ್ಸಿಪಾಲ್‌ಗೆ ಸಮಾಧಾನವಾದ ಹಾಗೆ ಕಾಣಲಿಲ್ಲ. ಆ ವಿದ್ಯಾರ್ಥಿಗಳು ಮ್ಯಾನೇಜ್‌ಮೆಂಟ್ ಕಡೆಯವರು, ಅವರಿಗೆ ಏನು ಉತ್ತರ ಹೇಳೋದು ಅಂತ ಪ್ರಿನ್ಸಿಪಾಲ್ ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದ. ಇದು ಸಣ್ಣ ವಿಷಯವಾದರೂ, ಪ್ರಿನ್ಸಿಪಾಲ್ ನನ್ನ ಬೆಂಬಲಕ್ಕೆ ನಿಲ್ಲದೆ, ಈ ಐದು ವಿದ್ಯಾರ್ಥಿಗಳ ಪರವಾಗಿ ಮಾತನಾಡುತ್ತಿರುವ ಹಿನ್ನೆಲೆ ನನಗೆ ತಿಳಿದುಕೊಳ್ಳಲು ಸಾಕಷ್ಟು ಸಮಯ ಹಿಡಿಸಲಿಲ್ಲ. ಬೇಸರ, ಸಿಟ್ಟು ಎಲ್ಲವು ಒಟ್ಟೊಟ್ಟಿಗೆ ಉಕ್ಕಿ ಬಂದವು.

ನಮ್ಮ ಸಮಸ್ಯೆಗಳಿಗೆ ಯಾವತ್ತೂ ಬೇಗ ಸ್ಪಂದಿಸದ ಮ್ಯಾನೇಜ್‌ಮೆಂಟ್, ಈಗ ಮೂರೇ ದಿನದಲ್ಲಿ ನನ್ನನ್ನ ಸಸ್ಪೆಂಡ್ ಮಾಡ್ತು, ಪ್ರಿನ್ಸಿಪಾಲ್‌ನ ವರದಿಯ ಆಧಾರದ ಮೇಲೆ. ನನ್ನನ್ನು ಕಾಲೇಜಿನಿಂದ ಹೊರ ಹಾಕುವ ಹುನ್ನಾರ ಅಂತ ನನಗಿಗಾಗಲೆ ಸ್ಪಷ್ಟ ಆಗಿತ್ತು. ಈಗ ನನ್ನ ಮುಂದೆ ಎರಡು ಆಯ್ಕೆಗಳಿದ್ದವು. ಮೊದಲನೆಯದು ನನ್ನ ಕೆಲವು ಸ್ನೇಹಿತರ ಹಾಗೆ ಈ ಕಾಲೇಜನ್ನು ಬಿಟ್ಟು ಸರ್ಕಾರಿ ಕಾಲೇಜನ್ನು ಸೇರುವುದು. ಎರಡನೆಯದು ಇಲ್ಲೆ ಇದ್ದು ಸಸ್ಪೆಂಡ್ ಆದೇಶವನ್ನು ಎದುರಿಸುವುದು. ಮೊದಲನೆಯದು ನನಗೆ ಸರಿಬೀಳಲಿಲ್ಲ. ಈಗಾಗಲೇ ನನಗಿಂತ ಮೊದಲು ಕೆಲಸ ಮಾಡಿದ ಇಬ್ಬರು (ನನ್ನ ಹಿನ್ನೆಲೆಯುಳ್ಳವರು) ಈ ಕಾಲೇಜಿನ ಒತ್ತಡಗಳಿಗೆ ಮಣಿದು ಕೆಲಸ ಬಿಟ್ಟಿದ್ದರು. ಒಬ್ಬ ಸರ್ಕಾರಿ ಕಾಲೇಜಿನಲ್ಲಿ ಕೆಲಸ ದಕ್ಕಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ. ಇನ್ನೊಬ್ಬ ಈಗಲೂ ಪ್ರಯತ್ನಿಸುತ್ತಿದ್ದಾನೆ. ಹಾಗಾಗಿ ನಾನು ರಿಸ್ಕ್ ತೆಗೆದುಕೊಳ್ಳುವ ಸಾಹಸಕ್ಕೆ ಇಳಿಯಲಿಲ್ಲ. ಸಸ್ಪೆಂಡನ್ನು ಪ್ರಶ್ನಿಸಿದೆ. ನನ್ನ ವಾದಗಳು ಸರಿ ಇದ್ದಿದ್ರಿಂದ ಸಸ್ಪೆಂಡ್ ಆದೇಶವನ್ನು ಹಿಂದಕ್ಕೆ ಪಡೆಯಬೇಕು ಅಂತ ಶಿಕ್ಷಣ ಇಲಾಖೆ ಕಾಲೇಜಿಗೆ ಛೀಮಾರಿ ಹಾಕಿತು. ಈ ಕಾಲೇಜಿಗೆ ಬಂದ ಒಂದು ವರ್ಷದಲ್ಲಿ ಇದು ನನಗೆ ಸಂದ ಮೊದಲ ಜಯ ಅಂತ ಅಂದುಕೊಳ್ಳುವಷ್ಟು ಕೆಚ್ಚು ರೋಷ ಮತ್ತು ಗರ್ವವನ್ನು ಈ ಕಾಲೇಜ್ ನನ್ನಲ್ಲಿ ಪ್ರಚೋದಿಸಿತ್ತು.


V

ಈಗ ಈ ಕಾಲೇಜಿಗೆ ಬಂದು ಆರು ವರ್ಷಗಳಾಗಿವೆ. ಗ್ರಾಮರ್ ಕ್ಲಾಸ್‌ಗಳಿಗೆ ಮಾತ್ರ ಸೀಮಿತವಾಗುವುದನ್ನು ನಾನು ಮೀರಿದ್ದೇನೆ. **Subaltern English Literature** ಬಗ್ಗೆ ಪಿಎಚ್.ಡಿಯನ್ನು ಈಗ ತಾನೆ ಮುಗಿಸಿದ್ದೇನೆ. ಬೆಂಗಳೂರಿನಂತ ದೊಡ್ಡ ನಗರಕ್ಕೆ ಬಂದು ಮೊದಲ ಬಾರಿಗೆ ಕಾಲೇಜಿನ ಮೆಟ್ಟಿಲನ್ನು ತುಳಿಯುತ್ತಿರುವ ಈ ಕಾಲೇಜಿನ ಕೆಲವು ವಿದ್ಯಾರ್ಥಿಗಳಿಗೆ **subaltern** ಅಂದ್ರೆ ಯಾರು, ಏನು ಎಂದು ಹೇಳಿಕೊಡ್ತಿರೋದು ನನಗೆ ಸಮಾಧಾನ ತಂದಿದೆ. ಹಿರಿಯರ ಸಂಪ್ರದಾಯವನ್ನು ಮುರಿದು

ಕತೆ

ಡಾ. ವಿಜಯಕುಮಾರ್ ಎಂ. ಬೋರಟ್ಟಿ

ಇವರಿಗೋಸ್ಕರ ಕನ್ನಡ–ಇಂಗ್ಲಿಷ್ ಎರಡರಲ್ಲೂ ಬೋಧಿಸುತ್ತಿದ್ದರಿಂದ ಇವರ ಅಚ್ಚು–ಮೆಚ್ಚಿನ ಮೇಷ್ಟ್ರು ಆಗಿದ್ದೀನಿ ಅಂತ ನನ್ನ ಭಾವನೆ. ಎಲ್ಲಾನು ಸುಖಾಂತ್ಯ ಆಯಿತು ಅಂತ ತಿಳ್ಕೊಂಡಿದ್ದೀರ? ಪ್ರತಿಯೊಬ್ಬ ವಿದ್ಯಾರ್ಥಿಯ ಮೆಚ್ಚುಗೆಯನ್ನು ಪಡೆಯಬೇಕು ಎಂಬ ಭ್ರಮೆ ಈಗ ಸ್ವಲ್ಪ ಕಡಿಮೆಯಾಗಿದೆ. ಎರಡು ವರ್ಷದಿಂದ ನನಗೆ ಕೊಡಬೇಕಾಗಿದ್ದ ಪ್ರಮೋಷನ್ ಇನ್ನೂ ಸಿಕ್ಕಿಲ್ಲ. ನನ್ನ ಜೊತೆ ಸೇರಿದವರಿಗೆಲ್ಲಾ ಪ್ರಮೋಷನ್ ಸಿಕ್ಕಿದೆ. ನನ್ನ ಸ್ನೇಹಿತರು ಸರ್ಕಾರಿ ಕಾಲೇಜಿಗೆ ಸೇರ್ಕೊ ಅಥವಾ ಪಿಎಚ್.ಡಿ ಆಗಿರೋದ್ರಿಂದ ಯಾವುದಾದರು ಯೂನಿವರ್ಸಿಟಿಗೆ ಸೇರ್ಕೊ ಅಂತ ಉಪದೇಶಿಸುತ್ತಿದ್ದಾರೆ. ಈಗ ನನ್ನ ಮುಂದೆ ಮತ್ತೆ ಎರಡು ಆಯ್ಕೆಗಳು. ಮೊದಲನೆಯದು ನನ್ನ ಸ್ನೇಹಿತರು ಹೇಳಿದ ಹಾಗೆ ಸರ್ಕಾರಿ ಕಾಲೇಜು ಅಥವಾ ಯೂನಿವರ್ಸಿಟಿಗೆ ಪ್ರಯತ್ನ ಪಡೋದು ಅಥವಾ ನನ್ನ ಪ್ರಮೋಷನ್‌ಗಾಗಿ ಹೋರಾಟ ಮಾಡೋದು. ಮೊದಲನೇ ಆಯ್ಕೆ ನನ್ನಂತೋರಿಗೆ ಈಗಲೂ ಗಗನ ಕುಸುಮ. ಶಿಫಾರಸು ಅಥವಾ ಹಣ ಇಲ್ಲದೇ ಕೆಲಸ ಸಾಧ್ಯವಿಲ್ಲ. ನನಗೆ ಇತ್ತೀಚೆಗೆ ಎಷ್ಟೊಂದು ಸ್ವಾಭಿಮಾನ ಬಂದಿದೆಯೆಂದರೆ, ಶಿಫಾರಸು ಅಥವಾ ಹಣ ಸರಿಯಾದ ದಾರಿಯಲ್ಲ ಅಂತ ಹುಂಬ ನಂಬಿಕೆ ಹುಟ್ಟಿದೆ. ಹಾಗಾದೆ ಇರೋದು ಒಂದೇ ಮಾರ್ಗ. ನನ್ನ ಪ್ರಮೋಷನ್ ಇನ್ನೂ ಯಾಕೆ ಆಗಿಲ್ಲ ಅಂತ ಮೊದಲು ಕಾಲೇಜಿನ ಮ್ಯಾನೇಜ್‌ಮೆಂಟ್‌ಗೆ, ನಂತರ ಶಿಕ್ಷಣ ಇಲಾಖೆಗೆ ಪತ್ರ ಬರೆಯೋದಿಕ್ಕೆ ... ಮಾಡಿದೆ....



ಬೋನಿನೊಳಗೆ ಗೋವಿಂದ


ಗೋವಿಂದ ಎಷ್ಟೇ ಪ್ರಯತ್ನಪಟ್ಟರೂ ಬೋನಿನ ಬಾಗಿಲು ತೆಗೆಯಲಾಗಲಿಲ್ಲ. ಆ ರಾಘವಾಚಾರಿ ಅದ್ಯಾವ ತರಹ ಬಾಗಿಲು ಮಾಡಿದ್ದನೋ ಗೋವಿಂದನಿಗೆ ಗೊತ್ತಾಗಲಿಲ್ಲ. ಗೋವಿಂದ ಹುಚ್ಚನಂತೆ ಮತ್ತೆ ಮತ್ತೆ ಕೂಗಿ ಕರೆದ. ಯಾರೂ ಬರಲಿಲ್ಲ. ಅಷ್ಟೇ ಅಲ್ಲ, ಇವನು ಕೂಗಿದರೆ ಇವನಂತೆಯೇ ಬೋನಿನಲ್ಲಿ ಸಿಕ್ಕಿಬಿದ್ದಿದ್ದ ಮಂಗಗಳು ಇವನನ್ನೇ ಹೆದರಿಸುವಂತೆ ಅರಚಾಡುತ್ತಿದ್ದವು. ಗೋವಿಂದ ಸುಸ್ತಾಗಿ ಕೈಚೆಲ್ಲಿ ಕುಳಿತು 'ಅಯ್ಯೋ ದೇವರೆ, ನನಗೆಂತ ಗತಿ ಬಂತಪ್ಪಾ' ಅಂತ ತನ್ನನ್ನು ತಾನೆ ಬೈದುಕೊಂಡ.

ಮಂಗಗಳಿಗೂ ಇವನಂತೆ ತಲೆ ಕೆಟ್ಟು ಅವೇ ಪರಸ್ಪರ ಕಚ್ಚಿಕೊಳ್ಳುತ್ತಿದ್ದವು. ಅಪಾಯದಲ್ಲಿ ಸಿಕ್ಕಿಕೊಂಡು ಬಿಡುಗಡೆ ಸಾಧ್ಯವಿಲ್ಲ ಅನಿಸಿದಾಗ ಆಗುವ ಹಾಗೆ ಮಂಗಗಳು ಮತ್ತು ಗೋವಿಂದ ಮತಿಭ್ರಮಣೆಗೊಂಡಂತಾದರು. ಗೋವಿಂದ ನೋಡುನೋಡುತ್ತಿದ್ದಂತೆ ಕತ್ತಲಾಯಿತು. ಮಠದ ದೀಪಗಳೆಲ್ಲ ಹೊತ್ತಿಗೆ ಮುಂಚೆಯೇ ಆರಿದವು. ಕತ್ತಲಾದಂತೆ ಮಂಜು ಕೂಡ ದಟ್ಟವಾಗತೊಡಗಿತು.

'ದೇವರೆ ನನ್ನನ್ನು ರಕ್ಷಿಸು' ಎಂದು ತನ್ನ ಎದುರಿಗಿದ್ದ ದೇವಸ್ಥಾನದಲ್ಲಿನ ಅಂಜನೇಯನಿಗೆ ಗೋವಿಂದ ಬೇಡಿಕೊಂಡ. ಸೆರೆಸಿಕ್ಕ ಮೂರು ಮಂಗಗಳು ಗೋವಿಂದನಿಗೆ ಗೊರ್‌ಗೊರ್ ಎನ್ನುತ್ತಲೇ ಒಂದನ್ನೊಂದು ಅಪ್ಪಿಕೊಂಡು ಬೋನಿನ ಒಂದು ಮೂಲೆಗೆ ಸರಿದು ಒಂದೇ ಮುದ್ದೆಯಂತೆ ಕುಳಿತವು. ಕೂಗಿಕೊಂಡಿದ್ದರಿಂದ ಗೋವಿಂದನಿಗೆ ಬಾಯಾರಿಕೆಯಾಗಿತ್ತು. ವಿಧಿ ಇಲ್ಲದೆ ಮಂಗಗಳು ತಿಂದು ಬಿಟ್ಟಿದ್ದ ಕ್ಯಾರೆಟ್ ಮತ್ತು ಸೌತೆಕಾಯಿ ತುಂಡುಗಳನ್ನು ತಿಂದು ತನ್ನ ಬಾಯಾರಿಕೆಯನ್ನು ಆರಿಸಿಕೊಂಡ.

ಬೋನಿನಲ್ಲಿ ನಿಂತುಕೊಳ್ಳಲೂ ಆಗದೆ 'ನನ್ನ ಗತಿ ಇಷ್ಟೇ' ಅಂತ ಕೈಕಾಲು ಮುದುರಿ ಕುಳಿತ. ಸ್ವಲ್ಪ ಹೊತ್ತಿನ ನಂತರ ಬೋನಿನ ಬಾಗಿಲನ್ನು ತೆರೆಯಲು ಮತ್ತೆ ಪ್ರಯತ್ನ ಶುರುಮಾಡಿದ. ಎಲ್ಲ ದಬ್ಬೆಯನ್ನೂ ಅಲುಗಾಡಿಸಿ ಕೀಳಲು ಪ್ರಯತ್ನಿಸಿದ. ಹೇಳಿಕೇಳಿ ರಾಘವಾಚಾರ್ರು ತಯಾರಿಸಿದ ಬೋನು ಅದು, ಅದು ಅಷ್ಟು ಸುಲಭಕ್ಕೆ ತೆರೆದುಕೊಳ್ಳುವಂತಹದ್ದಲ್ಲ. ಗೋವಿಂದನಿಗೆ ಒಂದು ರೀತಿ ಮಂಪರು ಶುರುವಾಯಿತು. ಆತನ ಪಕ್ಕದಲ್ಲೇ ಮಂಗಗಳು ನಿದ್ದೆಯಲ್ಲೂ ಗೊರ್‌ಗೊರ್ ಅಂತ ಶಬ್ದ ಮಾಡುತ್ತಿದ್ದವು. ಗೋವಿಂದನಿಗೆ ಇದೆಲ್ಲ ಕನಸೊ, ನನಸೊ ಗೊತ್ತಾಗಲಿಲ್ಲ.

ತನ್ನ ಯಾವ ತಪ್ಪಿಗೆ ಈ ಶಿಕ್ಷೆ ಎಂದು ಜಿಗುಪ್ಸೆಗೊಂಡ ಗೋವಿಂದ ತನ್ನ ಜೀವನಚರಿತ್ರೆಯನ್ನೆ ಮೆಲುಕು ಹಾಕಿದ. "ಆ ಬಡಪಾಯಿ ಸಿದ್ದನ ಮೇಲೆ ಪ್ರೈಪ್ರೋಟಿಗಿಳಿದು ಇಂಥ ಅಪಹಾಸ್ಯಕ್ಕೆ ಒಳಗಾದೆನಲ್ಲ, ನನ್ನ ಬುದ್ಧಿಗೇನಾಗಿತ್ತು" ಎಂದು ಪರಿತಪಿಸಿದ. ಮೊದಲೇ ಒಡೆಯರಿಗೆ ತನ್ನನ್ನು ಕಂಡರೆ ಅಷ್ಟಕ್ಕಷ್ಟೆ. ತಾನಿಲ್ಲದೆ ಇದ್ದರೆ ಆಗಲ್ಲ ಎಂಬ ಕಾರಣಕ್ಕೇ ತನ್ನನ್ನು ತಮ್ಮೊಂದಿಗೆ ಇಟ್ಟುಕೊಂಡಿದ್ದಾರೆ. ಒಡೇರ ಮನೆಯ ಆಳುಗಳು ಒಡೆಯರಿಗಿಂತ ಗೋವಿಂದನಿಗೇ ಹೆಚ್ಚು ಹೆದರುತ್ತಿದ್ದರು. ಆದ್ದರಿಂದ ಇವನ ಮಾತನ್ನು ಕೆಲಸದವರ ವಿಚಾರದಲ್ಲಿ ಒಡೇರರು ತೆಗೆದುಹಾಕುತ್ತಿರಲಿಲ್ಲ. ಗೋವಿಂದ ಒಡೇರ ಮನೆಯ ದಂಡನಾಯಕನಂತಿದ್ದ. ಅವನ ದೇಹ, ರೋಫು, ಗತ್ತುಗಳನ್ನು ಅಮ್ಮವರೂ ಮೆಚ್ಚಿಕೊಂಡಿದ್ದರು.



• ಕಲ್ಕುಳಿ ವಿಠ್ಠಲ ಹೆಗ್ಡೆ

ಒಡೇರ ಮನೆಯಲ್ಲಿ ವಿದೇಶಿ ಬ್ರಿಟನ್ ಗನ್ ಇತ್ತು. ಆದರೆ ಇವನದೆ ಆದ ರಾಘವಾಚಾರಿ ಮಾಡಿಕೊಟ್ಟಿದ್ದ ಬಂದೂಕೆ ಗೋವಿಂದನಿಗೆ ಅಚ್ಚುಮೆಚ್ಚು. ಇವನು ರಾತ್ರಿ ಶಿಕಾರಿಗೆಲ್ಲ ಅದನ್ನೇ ಬಳಸುತ್ತಿದ್ದ. ಮಾತ್ರವಲ್ಲ; ಆ ಬಂದೂಕಿನಿಂದಲೇ ಆತ ಹುಲಿ ಹೊಡೆದಿದ್ದ. ಇವನ ಕಣ್ಣಿಗೆ ಬಿದ್ದ ಪ್ರಾಣಿಗೆ ಗುರಿ ಇಟ್ಟನೆಂದರೆ ಗುಂಡು ವ್ಯರ್ಥವಾಗಿದ್ದೇ ಇಲ್ಲ. ಗೋವಿಂದ ಹುಲಿ ಹೊಡೆದಾಗ ಇವನ ಜೊತೆ ಇದ್ದ ಸಿದ್ದ ಹೆದರಿ ಉಚ್ಚೆ ಹೊಯ್ದುಕೊಂಡಿದ್ದ.

ತಾನು ಹುಲಿ ಹೊಡೆದದ್ದನ್ನೇ ಮತ್ತೆ ಮತ್ತೆ ಗೋವಿಂದ ಜ್ಞಾಪಿಸಿಕೊಂಡ. ಒಂದು ರಾತ್ರಿ ಸಿದ್ದನನ್ನು ಕರೆದು, ಆರು ಶೆಲ್ಲಿನ ಹೆಡ್‌ಲೈಟ್ ಕಟ್ಟಿಕೊಂಡು, ಗಡಿಗುಡ್ಡೆ ಎಂಬ ಗೊಂಡಾರಣ್ಯಕ್ಕೆ "ಕಡು ಹೊಡಿಯಾನ ಬಾ" ಎಂದು ಕರೆದುಕೊಂಡು ಹೋಗಿದ್ದ. ಕಡು ಶಿಕಾರಿಯಲ್ಲಿ ಗೋವಿಂದ ಆಡಿದ ಬೇಟೆಯನ್ನು ಊರವರಿಗೆಲ್ಲ ಹಂಚುತ್ತಿದ್ದನಾದ್ದರಿಂದ ಗೋವಿಂದ ಊರಲ್ಲಿ ಜನಪ್ರಿಯನಾಗಿದ್ದ. ಸಿದ್ದನಿಗೂ ಮಾಂಸ ತಿನ್ನಬೇಕು ಅನ್ನಿಸಿದಾಗಲೆಲ್ಲ "ಗೋವಿಂದಯ್ಯ, ಬರೂ ಅಮಾಸಿ ದಿನ ಶಿಕಾರಿಗೆ ಹೋಗಾನ" ಎನ್ನುತ್ತಿದ್ದ.

ಅಮಾವಾಸ್ಯೆಯ ಕತ್ತಲಲ್ಲಿ ಮಾತ್ರ ಲೈಟು ಹಾಕಿ ಶಿಕಾರಿ ಮಾಡಲಾಗುತ್ತದೆ. ಕಾಡಲ್ಲಿ ಒಂದು ಸಾರಿ ಹೆಡ್‌ಲೈಟ್ ಹಾಕಿದರೆ ಆ ಬೆಳಕು ಬೀಳುವಷ್ಟು ದೂರ ಮತ್ತೆ ಲೈಟನ್ನು ಹಾಕುವುದಿಲ್ಲ. ಅಕಸ್ಮಾತ್ ದಾರಿ ಮಧ್ಯದಲ್ಲಿ ಯಾವುದಾದರೂ ಶಬ್ದ ಕೇಳಿಸಿದರೆ ಮಾತ್ರ ಗೋವಿಂದ ಹೆಡ್‌ಲೈಟ್ ಅನ್ನು ಆನ್ ಮಾಡುತ್ತಿದ್ದ.

ಅಂದು ಗೋವಿಂದ ಮತ್ತು ಸಿದ್ದ ಕಾಡಿಗೆ ಹೊರಟಾಗ ಗೋವಿಂದ ಹೆಡ್‌ಲೈಟ್ ಧರಿಸಿದ್ದರೆ, ಸಿದ್ದನ ಕೈಯಲ್ಲಿ ಕಾಲು ಬೆಳಕಿಗೆ ಲಾಟೀನು ಮಾತ್ರ ಇತ್ತು. ಸಾಮಾನ್ಯವಾಗಿ ಮಂಗನ ಮಾಂಸ ತಿನ್ನುವ ಸಿದ್ದನನ್ನು ಗೋವಿಂದ ಮುಟ್ಟುತ್ತಿರಲಿಲ್ಲ. ಆದರೆ ಅವರು ಕಾಡಿನಲ್ಲಿ ಇದ್ದಾಗ ಗೋವಿಂದ ಹೆಡ್‌ಲೈಟ್ ಬಿಟ್ಟವನೇ ಸಿದ್ದನನ್ನು ಹಿಡಿದು ಸರಕ್ಕನೆ ತನ್ನ ಹತ್ತಿರಕ್ಕೆ ಎಳೆದುಕೊಂಡ. ಸಿದ್ದನಿಗೆ ಏನಾಗುತ್ತಿದೆ ಅಂಥ ಗೊತ್ತಾಗಲಿಲ್ಲ. ಆದರೆ ಗೋವಿಂದ ತನ್ನನ್ನು ಮುಟ್ಟಿದ್ದರಿಂದ ಏನೋ ಅಪಾಯ ಎದುರಾಗಿದೆ ಅಂತ ಆತನಿಗೆ ಅನ್ನಿಸಿತು.

ಗೋವಿಂದನ ಹೆಡ್‌ಲೈಟಗಿಂತ ಪ್ರಕಾಶಮಾನವಾದ ಎರಡು ಲೈಟುಗಳು ಕೆಂಪಗೆ ಹೊಳೆಯುತ್ತಿವೆ. ಹುಲಿ ಇವರ ಮೇಲೆ ಎಗರಲು ಬಾಲದ ತುದಿ ಸುರುಳಿಗಟ್ಟುತ್ತಿದೆ. ಇನ್ನೊಂದು ಕ್ಷಣದಲ್ಲಿ ಹಾರುವುದಕ್ಕೆ ಸಜ್ಜಾಗಿದೆ. ಗೋವಿಂದ 'ಲಾಟನನ್ನು ಇಲ್ಲೇ ಇಡು' ಎಂದು ಸಿದ್ದನಿಗೆ ಪಿಸುಗುಟ್ಟಿದ. ಸಿದ್ದ ಲಾಟೀನನ್ನು ಕೈಬಿಟ್ಟ. ಸಿದ್ದನನ್ನು ಧರಧರನೆ ಹತ್ತು-ಹದಿನೈದು ಅಡಿ ಎಳೆದುಕೊಂಡು ಹೋದ ಗೋವಿಂದ ಸಿದ್ದನ ದೂಡಿ ಬಸಾಡಿ ಹೆಡ್‌ಲೈಟ್ ಹಚ್ಚಿ ಢಂ ಅಂತ ಗುಂಡು ಹಾರಿಸಿದ.

ಸಿದ್ದನ ಬಾಯಲ್ಲಿ ಬಿಸಿ ಉಸಿರು. ಇಡೀ ಊರಿಗೆ ಊರೇ ಕಾಲಬುಡಕ್ಕೆ ಬಂದು ಬಿಂದಂಗೆ ಆಯಿತು. ಭೂಮಿಯೆಲ್ಲ ನಡುಗುವಂತೆ ಹುಲಿ ಬಾಯಿ ಬಿಟ್ಟಿತ್ತು. ಸಿದ್ದನ ಲಾಟನು ಬೆಳಕು ಮಾಯ. ಎಲ್ಲೆಡೆ ಕಗ್ಗತ್ತಲು. ಅದೆಂತಹದ್ದೋ ಉರುಳಾಡಿದ ವಿಚಿತ್ರ ಶಬ್ದ. ಗೋವಿಂದ ಸಿದ್ದನನ್ನು ಹೊತ್ತುಕೊಂಡೆ ಅದೆಷ್ಟೋ ದೂರ ಓಡಿದ. ಆಮೇಲೆ ಗೋವಿಂದ ತನ್ನ ಬಟ್ಟೆಯನ್ನು ಗಮನಿಸಿದ. ಅದು ಒದ್ದೆ ಆಗಿತ್ತು. ಹೆದರಿದ್ದ ಸಿದ್ದ ಗೋವಿಂದನ ಮೈಮೇಲೆ ಉಚ್ಚೆ ಹೊಯ್ದಿದ್ದ.

"ಹಾಳಾದೋನೆ, ಉಚ್ಚೆ ಹುಯ್ಯುದ್ಯೇನೊ" ಎಂದು ಗೋವಿಂಬ ಬೈದ. ಸಿದ್ದನಿಗೆ ಬಾಯಿ ಬರಲಿಲ್ಲ. ಸ್ವಲ್ಪ ಸಮಯದ ನಂತರ "ಎಂಥದಕ್ಕೆ ಹೊಡುದ್ರಿ" ಎಂದು ಸಿದ್ದ ಹೇಳಿದ. "ಹುಚ್ಚ ಹುಲಿ, ಹೆಬ್ಬುಲಿ" ಅಂದ ಗೋವಿಂದ. ಆ ರಾತ್ರಿ ಕಾಡಿಗೆ ಹತ್ತಿರವಾಗಿದ್ದ ತಮ್ಮಯ್ಯ ನಾಯಕರ ಮನೆಗೆ ಬಂದು ಮಲಗಿ ಬೆಳಗ್ಗೆ ಏನಾಗಿದೆ ಅಂತ ದೂರದಿಂದ ನೋಡುತ್ತಾರೆ... ಹುಲಿ ಸತ್ತು ಬಿದ್ದಿದೆ. ಆಮೇಲೆ ಊರಿಗೆ ಊರೇ ಸೇರ್ತು. ಊರಿನ ಅದೆಷ್ಟೋ ಜಾನುವಾರುಗಳನ್ನು ಆ ಹುಲಿ ಹಿಡಿದಿತ್ತಂತೆ. "ಈ ಹುಲಿಯಿಂದಾಗಿ ಬೈನೆ ಕಟ್ಟಕ್ಕೂ, ಎಂಥದಕ್ಕೂ ಕಾಡಿಗೆ ಹೋಗಂಗಿರಲಿಲ್ಲ. ಚೀಪ್ ಗೋವಿಂದ" ಎಂದು ಎಲ್ಲರೂ ಆ ಬೆಳಗ್ಗೆ ಗೋವಿಂದನನ್ನು ಹೊಗಳಿದ್ದೇ ಹೊಗಳಿದ್ದು. ಸಿದ್ದನ್ನ ಲಾಟೀನಿನ ಬುರುಡೆ ಚೂರುಚೂರಾಗಿ ಹೋಗಿತ್ತು. ಹುಲಿ ನೆಗೆದು ಒಂದೇ ಏಟಿಗೆ ಲಾಟನನ್ನು ಅಗೆದು ಹಾಕಿತ್ತು.

ಇನ್ನೊಂದು ಸಾರಿ ಗೋವಿಂದ ಹೆಬ್ಬಾವಿನ ಮೇಲೆ ನಿಂತುಕೊಂಡಿದ್ದನಂತೆ. "ಇದೆಂತ, ನೆಲವೇ ಓಡಾಡುತ್ತಿದೆ" ಅಂತ ನೋಡಿದರೆ ಆತನ ಕಾಲಡಿ ಹೆಬ್ಬಾವು. ಆಗಲೂ ಗೋವಿಂದ ಹೆದರಲಿಲ್ಲವಂತೆ. ಅಂಥ ಗೋವಿಂದ ಇಂದು ಮಂಗಗಳಿಗೆ ಹೆದರಿ ಬೋನಿನೊಳಗೆ ಕೂತಿದ್ದ. ಹೇಗಿದ್ದ ಗೋವಿಂದ ಹೇಗಾದ ಎಂದು ಆತನೇ ಪರಿತಪಿಸಿದ.


ಮಠದ ಹತ್ತಿರ ಅದೇನು ಗಲೀಜಿತ್ತೋ ಏನೋ. ಸೊಳ್ಳೆಗಳು ಬೋನಿಗೆ ಮುತ್ತಿಕೊಂಡವು. ಇಬ್ಬನಿ ಸುರಿಯುತ್ತಿದೆ. ಹೈಮಾಸ್ಕ್ ಲೈಟ್ ಚಂದ್ರನಂತೆ ಮಂದವಾಗಿ ಕಾಣುತ್ತಿದೆ. ಏನೋ ಶಬ್ದವಾಯಿತು. ಗೋವಿಂದ ನೋಡುತ್ತಾನೆ, ಮಂಗಗಳ ಹಿಂಡೇ ಬಂದಿದೆ. ಬೋನಿನ ಹಲಗಣೆಯನ್ನು ಎಳೆಯುತ್ತಿವೆ. ಒಳಗೆ ಕೈಹಾಕಿ ಸೆರೆ ಸಿಕ್ಕ ಮಂಗಗಳನ್ನು ಮುಟ್ಟುತ್ತಿವೆ. ದೊಡ್ಡದಾಗಿ ಬಾಯಿ ತೆರೆದು ಗೋವಿಂದನನ್ನು ಹೆದರಿಸುತ್ತಿವೆ. ರಂಪ ಮಾಡುತ್ತಿವೆ. ಗೋವಿಂದನಿಗೆ ಮತ್ತಷ್ಟು ಭಯವಾಯಿತು.

ಆ ಮಂಗಗಳೆಲ್ಲ ಸೆರೆ ಸಿಕ್ಕ ಮಂಗಗಳನ್ನು ಬಿಡಿಸಿಕೊಳ್ಳಲು ಬಂದಿದ್ದವು. ಆದರೆ ಅದು ಸಾಧ್ಯವಿಲ್ಲದಂತಾದ ಮೇಲೆ ವಾಪಸ್ಸು ಹೋದವು.

ಗೋವಿಂದನಿಗೆ ಸ್ಪಷ್ಟವಾಗಿತ್ತು; ತನ್ನನ್ನು ಬೋನಿಂದ ಹೊರತೆಗೆಯಬೇಕಾದರೆ ಸಿದ್ದ ಅಥವಾ ರಾಘವಾಚಾರಿಯೇ ಬರಬೇಕು. ಯಾಕೆಂದರೆ ರಾಘವಾಚಾರಿಯು ಕೆಲಸ ... ಅವನ ಕಳ್ಳ ಚಿಲಕದ ಬಗ್ಗೆ ಗೋವಿಂದ ಕೇಳಿದ್ದ.

ಮಂಗನ ಬ್ಯಾಟೆ

6



ರಾಘವಾಚಾರಿ ತನ್ನ ಕುಲುಮೆಗೆ ಬಂದವರಿಗೆಲ್ಲ ... ಅಜ್ಜನ ಅಜ್ಜನ ಕಥೆ ಹೇಳುತ್ತಿದ್ದ. ಅವನ ಅಜ್ಜನ ಅಜ್ಜ ... ಸುಲ್ತಾನ ಮಹಾರಾಜರಿಗೆ ಕತ್ತಿ, ಪಿಸ್ತೂಲು ಮಾಡಿಕೊಡು... ತ್ತಿದ್ದನಂತೆ. ಟಿಪ್ಪು ಮಹರಾಜರನ್ನು ಮೋಸದಿಂದ ಕೊ... ಬ್ರಿಟಿಷರು ಅವನಜ್ಜ ಮಾಡಿಕೊಟ್ಟ ಪಿಸ್ತೂಲನ್ನು ಇಂಗ್ಲೆಂ... ತಗೆದುಕೊಂಡು ಹೋಗಿ ಅಲ್ಲಿನ ತಮ್ಮ ಆಚಾರಿಗೆ ... ತೋರಿಸಿದರಂತೆ. ಆಗ ಇಂಗ್ಲಿಷ್ ಆಚಾರಿ 'ಈ ಪಿಸ್ತೂ... ಮಾಡಬೇಕಾದರೆ ನಾವು ಐದು ಜನ್ಮ ಎತ್ತಿ ಬರಬೇ... ಅಂತ ಹೇಳಿದ್ದನಂತೆ. ಅದನ್ನೆಲ್ಲ ಬ್ರಿಟಿಷರು ಪುಸ್ತ... ಬರೆದಿಟ್ಟಿದ್ದಾರೆ ಅಂತ ರಾಘವಾಚಾರಿ ಹೇಳಿಕೊಳ್ಳುತ್ತಿ...

ನಮ್ಮೂರಲ್ಲಿ ಆಚಾರರ ಬಗ್ಗೆ ಒಂದು ಕಥೆ ... ಎಲ್ಲರನ್ನು ಸೃಷ್ಟಿ ಮಾಡಿದ ಬ್ರಹ್ಮ ಒಮ್ಮೆ ಬಂದು ಎಲ್ಲ... "ಹೆಮ್ಮೆ ಬೇಕೋ, ಎಮ್ಮೆ ಬೇಕೋ" ಅಂತ ಕೇಳಿದ... ಎಲ್ಲರೂ "ಹೆಮ್ಮೆ ಕಟ್ಕೊಂಡು ಏನಾಗಬೇಕು, ಎಮ್ಮೆ ಇರಲಿ" ಅಂದರಂತೆ. ಆದರೆ ಆಚಾರರು ಮಾತ್ರ "ನಮ... ಹೆಮ್ಮೇನೆ ಇರಲಿ" ಅಂದರಂತೆ. ಆದ್ದರಿಂದಲೇ ತಲೆ ಖ... ಮಾಡಿ ಕೆಲಸ ಮಾಡುವ ಆಚಾರರು ಯಾವುದೇ ಕೆ... ಮಾಡಿದರೂ ಹೆಮ್ಮೆಯಿಂದಲೇ ಮಾಡುತ್ತಾರೆ ಎಂ... ಜನ ಹೇಳುತ್ತಾರೆ.

ಕುಶಲಕರ್ಮಿಗಳಾದ ಆಚಾರರ ಸಾವಿರ ವರ್ಷ... ಪರಂಪರೆಯನ್ನು ಒಟ್ಟು ಹಾಕಿ 'ಹೆರಿಟೇಜ್ ವಿಲೇಜ್'... ಜೋಡಿಸಿಟ್ಟಿರುವ ಮಣಿಪಾಲದ ವಿಜಯನಾಥ್ ಶೆ... ಅಜ್ಜನ ಅದ್ಭುತ ಸಂಗ್ರಹ ಲೋಕವನ್ನು ನೋಡಿ... ರಾಘವಾಚಾರ್ಯನ ಮಾತು ಎಷ್ಟು ಸತ್ಯ ಎಂ... ಅರಿವಾಗುತ್ತದೆ.

ಅದೇನೇ ಇರಲಿ, ನಮ್ಮೂರಲ್ಲೂ ವಿದೇಶಿಯ... ಎಂಜಲೇ ಶ್ರೇಷ್ಠ ಎಂದು ನಂಬಿರುವ ಅನೇಕ ದೊ... ದೊಡ್ಡ ಶ್ರೀಮಂತ ಜಮೀನ್ದಾರರುಗಳಿದ್ದಾರೆ. ಅದ... ಗೋವಿಂದನ ಒಡೆಯರೂ ಒಬ್ಬರು. ಅವರಿಗೆ ವಿದೇಶಿ... ರದ್ದೆಲ್ಲವು ಹೆಮ್ಮೆ. ಅವರ ಹತ್ತಿರ ಬ್ರಿಟಿಷ್ ಗನ್ ಇ... ಅವರಂತೆ ಬ್ರಿಟಿಷ್ ಅಥವಾ ಜರ್ಮನ್ ಗನ್‌ಗಳ... ಇಟ್ಟುಕೊಂಡು ಕೊಚ್ಚಿಕೊಳ್ಳುವವರಿಗೆ ನಮ್ಮ ಟಿಪ್ಪು ಸುಲ್ತಾ... ಕ್ಷಪಣೆ ಬಗ್ಗೆ ಗೊತ್ತೇ ಇಲ್ಲ.

ಎರಡನೆ ಮಹಾಯುದ್ಧದಲ್ಲಿ ವಿದೇಶಿಯರು ಬ... ಬಿಸಾಡಿದ್ದ ಗನ್‌ಗಳನ್ನು ಯಾವುದೋ ಕಂಪನಿಯವ... ಹರಾಜಿಗೆ ತಗೊಂಡು ನಮ್ಮ ದೇ... ಶ್ರೀಮಂತರಿಗೆಲ್ಲ ಮಾರಾಟ ಮಾಡಿ... ಅಂತಹ ಗನ್ನುಗಳನ್ನೇ ಪ್ರತಿಷ್ಠೆ ಎಂಬ... ಇವರೆಲ್ಲ ಕೊಚ್ಚಿಕೊಳ್ಳುತ್ತಾರೆ. "ನಾನು ಗ... ಮಾಡಿಕೊಡ್ತಿನಿ. ನನ್ನ ಕೋವಿ ಹೇಗುಂ... ಹೇಳು" ಎಂದು ರಾಘವಾಚಾರಿ ಗೋವಿಂದ... ನಿಗೆ ಒಂದು ಗನ್ ತಯಾರಿಸಿಕೊಟ್ಟ... ಅದೇ ಗೋವಿಂದನ ಪ್ರಿಯವಾದ ಗ... ಆಗಿತ್ತು. ಅದರಿಂದಲೇ ಆತ ಆ ಹು... ಯನ್ನು ಹೊಡೆದಿದ್ದ.

ರಾಘವಾಚಾರಿ ಪ್ರಕಾರ ಆಚಾ... ಮೇಲೆ ಶಾಪ ಇದ್ದಿದ್ದರಿಂದ ಅವರ ಹ... ಸಂಪತ್ತು ಉಳಿಯುವುದಿಲ್ಲವಂತೆ. ಅಷ್ಟೇ ಅ... ಅವರ ಪ್ರಕಾರ ಆದಿ ಶಂಕರಾಚಾರ್ಯನ ತಾ... ಆಚಾರರ ಜಾತಿಯವಳಂತೆ. "ನಾ... ಬ್ರಾಹ್ಮಣರಿಗಿಂತ ಶ್ರೇಷ್ಠರು. ಅವರಿಗಿಂತ ಆಚಾ... ಇದೆ. ನಾವು ಮಾಡಿಕೊಟ್ಟ ದೇವರಿಗೆ ಮ... ಹೇಳಿ, ದೇವರ ತಲೆ ಮೇಲೆ ನೀರು ಹೊ... ರಾಯ್ತು. ಬ್ರಾಹ್ಮಣರಿಗಿಂತ ದುಷ್ಟರಿಲ್ಲ. ಕೃತಜ್ಞ... ಇಲ್ಲದವರು. ದೇವಸ್ಥಾನ ಕಟ್ಟಿದವರನ್ನು ಹೊ... ನಿಲ್ಲಿಸುವ ಅವರಿಗೆ ಮಡಿ ಬೇರೆ ಕೇಡು. ಅವರಿಗೆ ಎ... ಗೊತ್ತು? ಅವರು ನೆಟ್ಟಗೆ ಒಂದು ಗೆರೆ ಎಳೀಲಿ ನೋಡಾ... ನಾನು ಅವರು ಹೇಳ್ದಂಗೆ ಕೇಳ್ತಿನಿ" ಎಂದೆಲ್ಲಾ ತನ್ನ ಕುಲುಮೆ... ಬಂದವರ ಹತ್ತಿರ ತನ್ನ ಸಮುದಾಯದ ಶ್ರೇಷ್ಠತೆ ಬ... ರಾಘವಾಚಾರಿ ಹೇಳುತ್ತಿದ್ದ...

(ಮುಂದುವರೆಯುವುದು)

ಸಾಲು ಮರದ ತಿಮ್ಮಕ್ಕ

ಹಸಿದ ಬದುಕಿನ
ಒಡಲಿಗೆ
ನೋವನ್ನುಣಬಡಿಸಿದವಳು
ಬಾಳ ಪಯಣದಲಿ,
ನೊಂದು ಬೆಂದವಳು!
ಕಷ್ಟಗಳ ಹಿಂಡಿ ಕುಡಿದು
ಭವದ ತೃಷೆಯ
ನೀಗಿದವಳು.

ಗುಡಿಸಲೊಳಗೆ ಕಂಡ
ಕನಸುಗಳು
ಎದೆಯೊಳಗೆ ನಾಟಿ,
ಮಣ್ಣಿನ ಮೇಲೆ ಹಸಿರು ಚಿತ್ರಗಳಾಗಿ
ಅರಳಿ ನಿಂತವು
ಉಸಿರ ನೀಡಲು!

ಕರುಳ ಕೊರೆದ 'ಬಂಜೆ' ಎಂಬ
ಪದಕ್ಕೆ ಉತ್ತರವ ಕೊಟ್ಟವಳು!
ಮೈಲುಗಟ್ಟಲೆ ಸಸಿಗಳ ನೆಟ್ಟು
ಜತನದಿಂದ ಪೊರೆದು
ತಾಯಿಯಾದಳು ತಿಮ್ಮಕ್ಕ-
ಸಾಲು, ಸಾಲು ಮರಗಳಿಗೆ.....!
ನೆರಳಾದಳು ನಾಡಿಗೆ.
ತಿಮ್ಮಕ್ಕನ ಬದುಕೆಂದರೆ
ನಮ್ಮ ಕಣ್ಮುಂದೆ ಪ್ರಜ್ವಲಿಸುವ ದೀವಿಗೆ!

• ಸಂತೋಷ ಅಂಗಡಿ



...ಮುಳುಸಿದ್ದಪ್ಪ ಗೆಲ್ದಿವ್ರೋದು ಸ್ವಾಭಿಮಾನ ಗೆಲ್ತದೆ ಬುಡ್ರ!

...ನೋರು ಕಡಿಕ್ಲಲ್ಲ ಸರಿಯಾದ ಮಳೆಯಾಯ್ತಂತೆ" ...

...ವ ಮಳೆನ್ಲ?" ಎಂದ ಸೀರ.

... ಕೆಟ್ಟ ಮ್ಯಾಲೆ ಯಾವ ಮಳೆಯಾದರೇನು, ...ಸ್ಟೆ ಹೋಯ್ತದಪ್ಪ."

... ಆಯ್ತಪ್ಪ, ಕೇಡುಗಾಲಕೆ ಅದೇನೊ ಆಯ್ತು ...ಂತ ಟೇಮಲ್ಲಿ ಮಳೆ ಬಂದ್ರೆ ಏನ್ಹೇಳನಾ."

...ನತ್ತು ಎಡ್ಯೂರಪ್ಪ ಈ ರಾಜ್ಯದ ಮುಖ್ಯಮಂತ್ರಿ ...ಅವತ್ತೇ ಕೇಡುಗಾಲ ಕಾಲಿಟ್ಟದೆ ಕಣೊ."

...ಂದು ಸುದ್ದಿ ಕೇಳಿದೆ ನಿಜವೇನ್ಲ ಉಗ್ರಿ?"

...ನು ಸುದ್ದಿನಪ್ಪಾ?"

...ಲು ಸೀ ಮ
...ಪ್ಪೆಪುರಾಣ
ಬಿ. ಚಂದ್ರೇಗೌಡ

...ರಪ್ಪ ಸರಕಾರ ಉಳಿಸಗಳಕ್ಕೆ ಬಸುರಿ ಹೆಂಗಸ ...ಕೊಗಿದ್ನಂತೆ ನಿಜವೆ?"

...ೊ ಸೀರ ಮಾವ ಹೇಳಿದೋರು?"

...ೇಳದೇನು, ಪೇಪ್ರಲ್ಲೆ ಕೊಟ್ಟವುರಂತೆ."

...ೀರೆ ನಿಜಬುಡು" ಎಂದು ಉಗ್ರಿ ಹೇಳಿದ ...ಜುಮ್ಮಿ ಬೆಚ್ಚಿದಂತೆ,

...್ಯೋ ರಾಮು, ಈ ಮುಂಡೆ ಮಗನಿಗೆ ...ೇನು ಬುದ್ಧಿ ಕೊಟ್ಟಿದ್ದನೂ. ಬಸರಿ ಹೆಂಗಸ ... ಅಂದ್ರೆ ಅದಿನ್ಯಾವ ತಾಯಿ ಹೆತ್ತಿದ್ದಳು ಇವುನ್ನ"

...ೊ ನಿನ್ನಂಥೋಳೆ ಹೆತ್ತಿರಬೇಕು."

...ಲಿ ಹುಟ್ಟಿದ್ರೆ ಮ್ಯಟ್ರೆ ಮುರುದು ತಿಪ್ಪೆಗೂಣ ...

...ೆ ನೀನು ಎಡೂರಪ್ಪ ಒಂದೆ ಅಂದಂಗಾಯ್ತವ್ವ."

...ಗ್ಯಾಕೋಲುಸ್ತಿಲ ನನ್ನ. ನಾವು ಹುಟ್ಟಿದ್ದೂ ... ನೋಡಲಿಲ್ಲ ಬುಡು."

...ನ್ಯಾಕಂತ ಕ್ಯಲಸಕೆ ಕೈಯಾಕಿದ್ದನೂ?" ಎಂದ ...

...ನು ಮನಿಂದ ಇದಾನಸೌದಕೆ ಹೋಗುವಾಗ ...ವಾಗ ರಗತ ಕಾರಿಕಂಡು ಸತ್ತೋಗಂಗೆ ಯಾರೋ ...ಮಾಡಿಸಿದ್ದರಂತೆ. ಅದ್ಕೆ ಇವುನು ಜೀವಸಯಿತ ...ಣಿ ಬಚಾವಾಗಕ್ಕೆ ನೋಡಿರಬೇಕು ಕಣಮಾವ" ...

...ಎರಿ ಕೋಡಿ ನಿಲ್ಲಲಿಲ್ಲ ಅಂದ್ರೆ ಜನ ಬಲಿ ...ೇಳಿದ್ದವಪ್ಪ."

"ನಾವು ಸಣ್ಣುಡಗನಲ್ಲಿ ಎಲ್ಯಾರ ಕ್ಯರೆ ಕಟ್ಟತಾಯಿದ್ರೆ, ಲೇ ಉಸಾರು ಜನ ಹಿಡಿತಾಯಿದ್ದರಂತೆ ಅಂತ ಹೆದರಸೋರು. ಈಗ ಬಸರಿ ಹೆಂಗಸು ಎಡೂರಪ್ಪನಿಗೆ ಸಿಕ್ಕದಂಗೆ ಕಾಯೋ ಕಾಲ ಬತ್ತಲ್ಲಾ ಹೇಳು" ಎಂದ ಸೀರ.

"ಹಿಂದ್ಲು ಕಾಲ್ದಲ್ಲಿ ಅಚಲಾಪರಮೇಶ್ವರಿ ಗದ್ದುಗೆಗೂ ಮನುಸುರ ತಂದು ಬಲಿಕೊಡ್ತಿದ್ರಂತೆ ಕಂಡ್ಯ. ಟಿಪ್ಪು ಸುಲ್ತಾನ್ ಕಾಲ್ದಲಿ ನಿಲ್ಲಿಸಿದನಂತೆ. ಈಗ್ಲು ಲಾಳಿನಕ್ಕರೆ ಅಚ್ಚಲಮ್ಮನ ಗದ್ದುಗೆ ಹಗದರೆ ಅದೇಟು ತಲೆಬುರುಡೆ ಮೂಳೆ ಸಿಗತವ್ರೊ ಏನೊ" ಎಂದ ಕಾಳಮಾವ.

"ಅಂಗರಚ್ಚಲಮ್ಮನಿಗೂ ಬಲಿ ಕೊಡ್ತಿದ್ರೆ ಮಾವ?" ಎಂದಳು ಜುಮ್ಮಿ.

"ಊ ಕಂಡ್ಯೆ. ಆಗಿನ ಕಾಲದಲ್ಲಿ ಈಗಿನಂಗೆ ಪೋಲಿಟೇಸನ್ ಇರಲಿಲ್ಲ. ಯಾವನಾರ ಬಂದ್ರು ಸಾಕು ಹಿಡಕಂಡು ತಗಂಡೋಗಿ ಬೆಳಗಿನ ಜಾವದಲ್ಲಿ ಬಲಿಕೊಡೋರಂತೆ. ಅದೇ ಈಗಂಗೆ ಮಾಡಕ್ಕಾದತೇ? ಪೇಪ್ರಿನೋರು ಸುಮ್ಮನೆ ಬುಟ್ಟರೆ?"

"ಪೇಪ್ರಿನೋರಿಗಿಂತ ಟಿವಿಯೋರ ಹಾವಳಿ ಜಾಸ್ತಿಯಾಗ್ಯದೆ ಕಣಮಾವ. ಆದ್ರು ಎಡೂರಪ್ಪ ಇಂತ ಕ್ಯಲಸಕೆ ಕೈ ಹಾಕಿದ್ದ ಅಂದ್ರೆ ಅವನ ಧೈರ್ಯನೆ ಧೈರ್ಯ ಬುಡು."

"ಯಾರಪ್ಪ ಅಷ್ಟೊಂತರ ಧೈರ್ಯವಂತ?" ಎಂದುಕೊಂಡು ವಾಟಿಸ್ಸೆ ಬಂದೆ.

"ಇನ್ನಾರು, ಎಡೂರಪ್ಪ ಕಣೊ."

"ಭಂಡತನನ್ಯಲ್ಲಿ ಧೈರ್ಯ ಅನ್ನಬ್ಯಾಡ ಕಣೊ ಉಗ್ರಿ. ಅದ್ಕೆ ಕೇಂದ್ರದೋರು ಎಡೂರಪ್ಪನ ಬುರಿಡಿಗೆ ಸಿಂಪಲ್ಲಾಗಿ ಒಂದೇಟು ಕೊಟ್ಟವುರೆ."

"ಏನೇಟು ಕೊಟ್ಟಿದ್ದರೂ?"

"ಧನಂಜಯಕುಮಾರ ಅಂತ ವಬ್ಬವುನೆ. ಎಡೂರಪ್ಪ ಭಂಡ ಅಂದ್ರೆ ಅವುನು ಭಂಡ್ರಲ್ಲಿ ಭಂಡ. ಅಂಥೊನ್ನ ಹಿಡಕಂಡು ಈ ಎಡೂರಪ್ಪ ರಾಜ್ಯಸಭೆಗೆ ಕಳುಸಕ್ಕೆ ಪ್ಲ್ಯಾನ್ ಮಾಡಿದ್ದ. ಮೇಗಲ ಬಿಜೆಪಿಗಳು ಧನಂಜಯ ಸದ್ದಿಕ್ಕೆ ವಿರಾಟ್ ನಗರದಲ್ಲಿ ಮಾಮೂಲಿ ಕ್ಯಲಸ ಮಾಡಿಕಂಡಿರ್ಲಿ, ನಮ್ಮ ಸೈರಂದ್ರಿ ರಾಜ್ಯಸಭೆಗೋಗ್ಲಿ ಅಂತ ಹೇಮಾಮಾಲಿನಿಯ ಸೆಲೆಕ್ಟ್ ಮಾಡಿ ನಿಲ್ಲಿಸ್ಯವುರೆ."

"ಯಾಮ ಮಾಲಿನಿ ಅಂದ್ರೆ ಅವುಳ್ಯಾರ್ಲ?"

"ಅವುಳ್ಯಾರು ಅಂತ ನಿನಿಗೆ ಪರಿಚಯ ಮಾಡದು ಕಷ್ಟ ದ್ವಡಪ್ಪ. ನಮ್ಮ ಕರ್ನಾಟಕದಲ್ಲೇ ಪರೆಗ್‌ಜಾಂಪಲ್ ಕೊಡದೆ ಆದ್ರೆ ಭಾರತಿ ಇದ್ದಂಗೆ. ಇವುಳು ವಿಷ್ಣುವರ್ಧನ್ ಮದಿವಾದ್ಲು ಅವುಳು ಧರ್ಮೇಂದ್ರನ್ನ ಮದಿವಾದ್ಲು. ಭಾರತಿ ವಿಷ್ಣುಗೆ ಪಸ್ಟ ಹ್ಯಾಂಡಾದ್ರೆ ಹೇಮಾ ಧರ್ಮೇಂದ್ರನಿಗೆ ಸ್ಯಕೆಂಡ್ ಹ್ಯಾಂಡು."

"ಯರಡ್ನೆ ಹೆಡತಿನೆ?"

"ಊ ಕಣಕ್ಕ. ಸಾಮಾನ್ಯವಾಗಿ ಸಿನುಮಾ ನಟಿರು ಯರಡ್ನೆ ಮದಿವಾಗದೇ ಜಾಸ್ತಿ. ಅಂಗೆ ಹೇಮಾ ಮಾಲಿನಿ ಧರ್ಮೇಂದ್ರನಿಗೆ ಸ್ಯಕೆಂಡು ವೈಪು."

"ಮಕ್ಕಳಿದ್ದವೆ?"

"ಯರಡೆಣ್ಣವೆ. ಅವುಕೂ ಇವುಳಂಗೆ ಭರತನಾಟ್ಯ ಕಲಿಸ್ಯವುಳೆ. ಈ ಬಿಜೆಪಿಗಳು ಭರತನಾಟ್ಯ ನೋಡದು ಜಾಸ್ತಿ. ಅವೇನಾರ ಕಾರ್ಯಕ್ರಮ ಮಾಡಿದ್ರೆ ಕರುದು ಕುಣುಸ್ತವೆ. ಅದೇ ಧನಂಜಯ ಕುಮಾರ ಅನ್ನೊ ದನವ ಕುಣಸಕ್ಕಾದತೆ? ಅವುನೇನಿದ್ರೂ ಎಡೂರಪ್ಪನ್ನ ಹೀನಾಮಾನ ಹೊಗಳಕ್ಕೇ ಸರಿ."

"ಅವುಳೆದ್ರಿಗ್ಯಾರು ನಿಂತವುರೆ?"

"ನಮ್ಮ ಮರುಳುಸಿದ್ದಪ್ಪನೋರು ನಿಂತವುರೆ."

"ನಿಮ್ಮರುಳುಸಿದ್ದಪ್ಪ ಅಂದ್ಯಾರ್ಲ?"

"ಸಾಯಿತಿ ಕಣಕ್ಕ ಅವುರು. ರಾಷ್ಟ್ರಕವಿ ಶಿವರುದ್ರಪ್ಪನೋರ ಅಳಿಯ. ತೂಕವಾನಿ ಮನ್ಸ. ಅದ್ಕೆ ಕಾಂಗ್ರೆಸ್, ಜೆಡಿಎಸ್‌ನೋರು ದುಸರ ಮಾತಾಡದಂಗೆ ಒಂದಾಗಿ ನಿಲ್ಲಿಸ್ಯವುರೆ."

"ಗೆಲ್ತರೇನ್ಲ?"

"ಗೆಲ್ದಿವ್ರೋದು ಕನ್ನಡದೋರ ಸ್ವಾಭಿಮಾನ ಗೆಲ್ತದೆ. ಈ ಬಿಜೆಪಿಗಳ ಬ್ಯಾಗಡೆ ಚಿನ್ನ ಸುಲಬಾಗಿ ಗೆದ್ದೊಗಬಾರ್ದು, ಒಂದು ಪೈಟ್ ಕೊಟ್ಟೇ ಕೊಡನ ಅಂತ ನಿಂತವುರೆ. ಬಿಜೆಪಿಲಿರೊ ಲಿಂಗಾಯಿತ್ರಿಗೆ ಮಾನ, ಮರಿಯಾದಿ, ಸ್ವಾಭಿಮಾನ ಇದ್ರೆ ನಮ್ಮ ಮರುಳಸಿದ್ದಪ್ಪನೋರು ಗೆದ್ದೇ ಗೆಲ್ತರೆ."





"ಲಿಂಗಾಯಿತ್ರು ಅಂತ ಧೈರ್ಯ ಮಾಡದಿಲ್ಲ ಕಣೊ. ಅವುರ್ಯಲ್ಲ ಒಂಥರಾ ಎಡೂರಪ್ಪ ಹಿಡಮಾಡಿದ ಟಗರಿನಂಗಾಗ್ಯವುರೆ."

"ಅದಕಿಂತ್ಲೂ ಉಗ್ರಿ, ಐದು ಜನ ಎಮ್ಮೆಲ್ಲೆಗಳು ಸ್ಥಾನಮಾನ ಕಳಕಂಡು ಹೋಗಿ ದ್ಯಾವೇಗೌಡನ ಮನೆಬಾಗಲಲ್ಲಿ ನಿಂತಿರದ ನೋಡಿದ್ರೆ, ಯಾವ ಎಮ್ಮೆಲ್ಲೆನೂ ಪಾರ್ಟಿ ಮಾತು ಮೀರಿ ಓಟು ಮಾಡದಿಲ್ಲ."

"ಹೋಗ್ಲಿ ಬುಡು, ಹೇಮಾಮಾಲಿನಿನೇ ಗೆಲ್ಲಲಿ. ಒಂದು ಕಾಲ್ದಲ್ಲಿ ಅವುಳು ಸಿನುಮ ನೋಡಿ ಭಾಳ ಖುಷಿಪಟ್ಟಿದ್ದಿವಿ. ಅರುವತ್ತೆರಡು ವಸಾದ್ರು ನಲವತ್ತೆರಡು ವರುಸಾಗಿರಂಗೆ ಕಾಣ್ತಾಳೆ. ಅಂತೂ ಅನಂತಕುಮಾರ ತಮುಳನಾಡಿನ ಅಯ್ಯಂಗಾರಿ ತಂದು ನಮ್ಮ ಕರ್ನಾಟಕದ ಸದಸ್ಯೆ ಮಾಡ್ತ ಅವುನೆ."

"ಅವುಳು ಸಿನುಮಾದಲ್ಲಿ ಕುಣೆಯುದು ಬುಟ್ರೆ ಇಲ್ಲಿಗ್ಯಾಕ್ ಬಂದ್ಲು?" ಎಂದ ಸೀರ.

"ವಯಿಸಾಯ್ತಲ್ಲ ಚಿಗಪ್ಪ ಈಗ ಈರೋಯಿನ್ ಪಾರ್ಟ್ ಸಿಗದಿಲ್ಲ. ಅಷ್ಟ ಅತ್ತೆ ಆಂಟರೋಲ್ ಮಾಡಕ್ಕೆ ಇಷ್ಟಯಿಲ್ಲ. ಅದ್ಕೆ ರಾಜಕಾರಣದಲ್ಲಿರೊ ಬ್ರೋಕರ್ ಹಿಡಕಂಡು ಇಲ್ಲಿಗೆ ಬತ್ತರೆ. ಇಲ್ಲಿ ವಯಿಸ್ಸು, ಆರೋಗ್ಯ ಯಾವುದೂ ಲೆಕ್ಕಕ್ಕೆ ಬರದಿಲ್ಲ. ನೋಡು ನಮ್ಮ ಯಸ್ಸೆಂ ಕಿಷ್ಣನಿಗೆ ಕಿವಿಯೇ ಕೇಳದಿಲವಂತೆ. ಆದ್ರು ವಿದೇಶಾಂಗ ಸಚಿವ ಆಗಿದ್ದು ಕಂಡು ನಮ್ಮ ಮಾನ ಕಳದ ಅತ್ಯಗೆ"

"ನಮ್ಮ ಮಾನ ಏನು ಕಳಿಯಕ್ಯೋಗಿದ್ದುನ್ಲ ಅವುನು?" ಎಂದ ಕಾಳಮಾವ.

"ಅವುನು ಪಾರಿನ್‌ಗೋಗಿದ್ದಾಗ ಅಲ್ಲಿ ನಮ್ಮ ದೇಸದ ಮ್ಯಾಲೆ ಭಾಸಣ ಮಾಡಬೇಕಾಗಿತ್ತಂತೆ ದ್ವಡಪ್ಪ. ಆಗ ಇವುನು ಬ್ಯಾರೆ ದೇಸದ ಭಾಸಣ ಓದಿಬುಟ್ನಂತೆ."

"ಸರಿಯಪ್ಪ ಅದರಲ್ಲಿ ಮಾನ ಹೋಗೋ ಅಂತದ್ದೇನೂ?"

"ನಮ್ಮ ದೇಸ ಇಂಗದೆ, ಅಂಗದೆ ಅನ್ನೊ ಜಾಗದಲ್ಲಿ ಪಾಕಿಸ್ತಾನದ ಮಾತು ಬಂದು ನಮ್ಮ ಪಾಕಿಸ್ತಾನ ಅನ್ನೊ ಮಾತು ಯಸ್ಸೆಂ ಕಿಷ್ಣನ ಬಾಯಿಲಿ ಬಂದ್ರೆ ಕತಿಯೇನು ದ್ವಡಪ್ಪ?"

"ಅದ್ಯಾಕಂಗನ್ನಕ್ಯೋಗಿದ್ದಾ?"

"ಅದು ಹಿಂಗೆ ಕಣಮಾವ. ಸಾಮಾನ್ಯವಾಗಿ ಬರದಿರೊ ಬಾಸಣ ಓತ್ತರೆ. ಅದ್ಯಾವೊ ಪೋಲಿ ಬಡ್ಡೆತ್ತವು ಬ್ಯಾರೆ ದೇಸದ ಭಾಸಣವ ಕಿಷ್ಣನ ಕೈಗೆ ಕೊಟ್ಟಿದ್ದವಂತೆ. ಅದು ಕಿಷ್ಣನ ತಪ್ಪೆ?" ಎಂದ ಉಗ್ರಿ.

"ನಾನೇಳತಾಯಿರದು ಅಂಗಲ್ಲ ಕಣೊ ಉಗ್ರಿ. ಯಸ್ಸೆಂ ಕಿಷ್ಣನಿಗೆ ಕಿವಿ ಸರಿಯಾಗಿ ಕೇಳಿದ್ರೆ, ಅವುನ ಮಾತು ಅವುನಿಗೆ ಕೇಳಿಸಿ, ಓಹೋ ಇದು ನಮ್ಮ ದೇಸದ ಭಾಷಣಲ್ಲ ಅನ್ನದು ಗೊತ್ತಾಗದು. ಕಿವಿ ಕೇಳದೆಯಿರದ್ರಿಂದ ಒಂದು ಪುಟ ಪೂರಾ ಓದಿದ್ದನಂತೆ. ನಾನೇಳದೇನಪ್ಪ ಅಂದ್ರೆ ಈ ತರದ ಹ್ಯಾಂಡಿಕ್ಯಾಪ್‌ಗಳು, ಓಎಪಿಗಳು, ವಿ.ಆರ್. ತಗಂಡ್ರೆ ಯುವ ಜನಾಂಗ ರಾಜಕಾರಣಕ್ಕೆ ಬತ್ತದೆ. ಇಲ್ಲಿ ಏನಾರ ಮಾಡಬವುದು. ಅದು ಬುಟ್ಟು, ಅವುರಿವುರ ಭುಜದ ಮೇಲೆ ಕೈಯಾಯ್ಕಂಡು, ಹಲ್ಲು ಕಟ್ಟಿಸಿಗಂಡು, ವಿಗ್ಗಾಯ್ಕಂಡು, ಒಂದಿದಿ ಮಾತ್ರೆ ತಿಂತ, ರಾಜಕಾರಣ ಮಾಡ್ರಪ್ಪ ಅಂತ ಯಾರಿವುರಿಗೇಳಿದ್ದರೂ. ಈ ಡರ್ಟಿ ವಿಜಿಡ್ ಫೆಲೋಸ್‌ಗಳಿಂದ ದೇಸಕ್ಕೇ ಅವುಮಾನ" ಎಂದ ವಾಟಿಸ್ಸೆ. ●


...ರ್ವರೋಗ ನಿವಾರಣಿ

...ಜಕೀಯ ಎಷ್ಟು ಕೆಟ್ಟುಹೋಗಿದೆ ಅಂದರೆ–ಮಾನವಂತರೂ ಕೂಡ ಸುಳ್ಳು ಹೇಳಿಕೊಂಡು ಓಡಾಡುತ್ತಾರೆ. ...ರೂ ಮುಖದ ಮೇಲೆ ಉಗಿಯಬಹುದು ಎಂಬ ಆತಂಕ ಕೂಡ ಅವರಿಗಿರಲ್ಲ. ಎನ್.ಟಿ. ರಾಮರಾವ್ ...ಎರಡು ರೂಪಾಯಿಗೆ ಕೆ.ಜಿ ಅಕ್ಕಿ ಕೊಡುವುದು ಕಷ್ಟ ಎನ್ನುವುದು ಈತನಿಗೆ ಗೊತ್ತಿತ್ತು, ಸಾರಾಯಿಯ ...ಕೂಡ ಆಗುವುದಿಲ್ಲ ಎನ್ನುವುದು ಗೊತ್ತಿರುತ್ತದೆ. ಆಗಲೇ ಐದು ವರ್ಷ ಮುಖ್ಯಮಂತ್ರಿಯಾಗಿದ್ದ ವ್ಯಕ್ತಿ ...ಜವಾಬ್ದಾರಿಯ ಸ್ಥಾನ ಹೇಗಿರುತ್ತದೆ ಎಂದು ನೋಡಿದ ವ್ಯಕ್ತಿ. ಆದರೂ ಪಾನನಿರೋಧ, ಅಗ್ಗದ ಅಕ್ಕಿಯ ಬಗ್ಗೆ ...ದರು. ಅಧಿಕಾರ ಬಂತು. ಅಲ್ಲಿ ಕೂತು ಮಾತು ಉಳಿಸಿಕೊಳ್ಳಲು ಪ್ರಯತ್ನಪಡಬಹುದು; ತೀರಾ ... ಅಕ್ಕಿ ಕೊಡುವುದು, ಹಳ್ಳಿಗಳಲ್ಲಿ ಮದ್ಯ ಸಿಗದಂತೆ ಮಾಡುವುದು; ಈ ತರಹದ ದೊಂಬರಾಟ ...ಮುದು. ಆದರೆ ಈ ರಾಮರಾಯರಿಗೆ ವಿನೋದಪ್ರಜ್ಞೆ ಇದ್ದಿದ್ದರೆ ಎಲ್ಲ ಸರಿಹೋಗುತ್ತಿತ್ತು. "ಅಲ್ರಯ್ಯ ...ರೂ ಒಂದು ಇಡೀ ರಾಜ್ಯದ ಜನಕ್ಕೆ ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡೋದಕ್ಕೆ ಆಗುತ್ತ? ನಾನು ...ಅಂತ ನಂಬಿಬಿಟ್ಟಿರಲ್ಲ! ಎಂಥ ಗುಗ್ಗುಗಳು! ನೀವು ನಂಬೋದಕ್ಕೆ ಕೂಡ ಕಾರಣ ಇದೆ. ...ಸ ನಾಲ್ಕು ರೂಪಾಯಿಗೆ ಕೆ.ಜಿ. ಕೊಡ್ತೇವೆ ಅಂದಿದ್ರೂ ನೀವು ನಂಬ್ತಿರಲಿಲ್ಲ. ನನ್ನನ್ನು ...). ಎಲ್ಲರೂ ಸೇರಿ ಯಾರೂ ಬರೀ ಹೊಟ್ಟೆಯಲ್ಲಿ ಮಲಗದಂತೆ ನೋಡಿಕೊಳ್ಳೋಣ. ...ಕೆಲಸ ಸಿಗುವಂತೆ ಏರ್ಪಾಟು ಮಾಡೋಣ!" ಎಂದು ಹೇಳಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

...ೋದಪ್ರಜ್ಞೆ ಇದ್ದರೆ ಮಾತ್ರ ಇದೆಲ್ಲ ಸಾಧ್ಯ. ಈ ಎನ್.ಟಿ. ರಾಮರಾಯ ಮತ್ತು ...ದ ಕಲ್ಲುಕಟ್ಟಿಕೊಂಡು ನೀರಿಗೆ ಹಾರಿದವರಂತೆ ಇದ್ದಾರೆ. ದೇವೇಗೌಡರಂತೂ ನಕ್ಕಿದ್ದನ್ನೇ ...ನೋಡಿಲ್ಲ. ಅದು ಅವರ ಗುಣ ಇರಬಹುದು. ಅವರ ಗುಣಕ್ಕೆ ವಿರುದ್ಧವಾಗಿ ಹೋಗುವುದನ್ನು ...ೀಕ್ಷಿಸುವುದು ಬೇಡ. ಆದರೆ ಹಾಸ್ಯ, ತಮಾಷೆ ಪ್ರತಿಯೊಬ್ಬನಿಗೂ ಬೇಕು. ಒಂದಾನೊಂದು ... ಕವಿಗಳು, ನಗು ಉತ್ತಮ ಔಷಧ' ಅಂತ ಹೇಳಿದ್ದರು. ಈಗ ಈ ಹೇಳಿಕೆ ಕವಿಗಳ ...ವಿಜ್ಞಾನಿಗಳ ಸುಪರ್ದಿಗೆ ಹೋಗಿದೆ. ವಿಜ್ಞಾನಿಗಳು ಪ್ರಯೋಗ ನಡೆಸಿ ಹೇಳುತ್ತಿರುವುದರ ...ನಗು ಒಬ್ಬ ವ್ಯಕ್ತಿಯ ಕಾಯಿಲೆಗಳನ್ನು ಗುಣಪಡಿಸಿ ಆರೋಗ್ಯವಂತನನ್ನಾಗಿ ಮಾಡುತ್ತದೆ. ...ನಸ್ಸುಪ್ರವೃತ್ತಿ, ಸಿನಿಕತನ, ಸಣ್ಣತನ–ಇವೆಲ್ಲಕ್ಕೆ ಮದ್ದು ತಮಾಷೆ. ಇದನ್ನು ನಟ ಬ್ರಾಂಡೋ ತನ್ನ ...ವರ್ಷದ ಅನುಭವದಿಂದ ಹೇಳುತ್ತಾನೆ.

...ಹೆಯ ವ್ಯಕ್ತಿ ಮಾತಿನಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ತಮಾಷೆಯನ್ನೇ ಅರಿಯದ ಪೆದ್ದ ...ಳ್ಳುತ್ತಾನೆ. ದೇವೇಗೌಡರನ್ನು 'ಗೌಡರ ಗೌಡ' ಎಂದು ಕರೆದರೆ ಅದನ್ನು ಗಂಭೀರವಾಗಿ ತೆಗೆದುಕೊಂಡು ಇನ್ನಷ್ಟು ಸೀರಿಯಸ್ಸಾಗುತ್ತಾರೆ. ಅವರಿಗೆ ವಿನೋದಪ್ರಜ್ಞೆ ಇದ್ದಿದ್ದರೆ 'ವೆಂಕಟಗಿರಿಗೌಡರಿಗೆ ಕೇಳಿಸೀತು, ಮೆಲ್ಲಗೆ ಹೇಳಿ' ಅಂತ ಹೇಳುವ ಲವಲವಿಕೆ ಇರುತ್ತಿತ್ತು. 'ಮಣ್ಣಿನ ಮಗ' ಅಂದರೆ 'ಹೌದ? ಎರೆಮಣ್ಣೋ ಕೆಮ್ಮಣ್ಣೋ?' ಎಂದು ಪ್ರತಿಯಾಗಿ ಕೇಳುವ ಕುಶಲತೆ ಇರುತ್ತಿತ್ತು. ನಿಜಕ್ಕೂ ನೋಡಿದರೆ ಈ ಜಾತ್ಯತೀತ ಉದ್ದೇಶಗಳ ವಾತಾವರಣದಲ್ಲಿ ಗೌಡರ ಗೌಡ ಮತ್ತು ಮಣ್ಣಿನ ಮಗ ಎನ್ನುವ ಮಾತುಗಳು ಅಂಥ ಹೊಗಳಿಕೆಯೇನಲ್ಲ. ಅವು ಹೊಗಳಿಕೆ ಎನ್ನುವಂತೆ ಹೇಳಿದಷ್ಟೂ ತಮಾಷೆ ಹೊಮ್ಮುವ ಸಂಭವವೇ ಹೆಚ್ಚು! ಪ್ರೊಫೆಸರ್ ಒಬ್ಬರನ್ನು 'ಮಣ್ಣಿನ ಮಗ' ಅಥವಾ 'ಗೌಡರ ಗೌಡ' ಅಂದು ನೋಡಿ–ಅವನ ಬಣ್ಣ ಇಳಿದುಹೋಗುತ್ತೆ! ಈ ದೃಷ್ಟಿಯಲ್ಲಿ ರಾಜಕಾರಣಿಯೇನೂ ಬೇರೆಯಲ್ಲ.

ತಮಾಷೆ ಯಾವಾಗಲೂ ತಿಳಿವಳಿಕೆಯ, ಲೋಕಾನುಭವದ ಗುರುತು. ಒಂದು ಉದಾಹರಣೆ ತಗೊಳ್ಳಿ. ಎಂದೂ ವೇದಿಕೆಗೇ ಹೋಗದಿರುವ ಒಬ್ಬ ಪದವೀಧರನಾದ ತರುಣನಿಗೆ ನೀವು ಇದ್ದಕ್ಕಿದ್ದಂತೆ ಶಾಲೆಯ ವೇದಿಕೆಯೊಂದನ್ನು ಅಲಂಕರಿಸಿ ಪುಟ್ಟ ಭಾಷಣ ಮಾಡಿ ಶಾಲೆಯ ಮಕ್ಕಳಿಗೆ ಬಹುಮಾನ ಕೊಡಲು (to distribute prizes) ಹೇಳುತ್ತೀರಿ. ಅವನು ವೇದಿಕೆಗೆ ಹೋಗುವುದೇ ಕಷ್ಟ. ಆತ ಚಿಕ್ಕವನಾಗಿದ್ದಾಗ ವೇದಿಕೆಗೆ ಬಂದ ಗಣ್ಯರೊಬ್ಬರು ಪ್ಯಾಂಟಿನ ಗುಂಡಿಯನ್ನೇ ಹಾಕಿಕೊಂಡಿರಲಿಲ್ಲ–ಇನ್ನೊಬ್ಬ ಬಹುಮಾನ ಕೊಡುವಾಗ ಅದು ಕೆಳಗೆ ಬಿತ್ತು. ಬಗ್ಗಿ ಎತ್ತಿಕೊಳ್ಳಲು ಹೋದಾಗ ಪ್ಯಾಂಟ್ ಹಿಂದುಗಡೆ 'ಪರ್.....' ಎಂದು ಸೀಳುಬಿಟ್ಟಿತು. ಆಮೇಲೆ ಭಾಷಣ, 'ನನ್ನನ್ನು ನೀವು ಈ ಐತಿಹಾಸಿಕ ಶಾಲೆಗೆ ಆಹ್ವಾನಿಸಿದ್ದು ನನಗೆ ಆನಂದವನ್ನುಂಟುಮಾಡಿದೆ' ಎಂಬ ಒಂದು ಮಾತಿನಲ್ಲಿ ಮೂರು ಸುಳ್ಳು ಅವನಿಗೆ ಕಾಣುತ್ತವೆ–ನಿಜಕ್ಕೂ ಆಹ್ವಾನಿಸಿಲ್ಲ, ಸೂಚಿಸಿದ್ದಾರೆ. ಈ ಶಾಲೆ ಎಲ್ಲಾ ಶಾಲೆಗಳಂತೆಯೇ; ಐತಿಹಾಸಿಕವಲ್ಲ–ಅವನಿಗೆ ಇಲ್ಲಿಗೆ ಬರಲು ಆನಂದವಾಗಿಲ್ಲ, ಪ್ರಾಣಸಂಕಟವಾಗಿದೆ! ಆತ ಈ ವಾಕ್ಯಗಳ ಸುಳ್ಳು ಬಿಡಿಸಿ ಹೇಳಿದರೇ ಸಾಕು, ಎಲ್ಲ ತಮಾಷೆಯಾಗುತ್ತದೆ. ಆದರೆ ನಿಜಕ್ಕೂ ತಮಾಷೆಯಾಗುವುದು ಆತ ಬಾಯಿ ಬಿಡುವುದಕ್ಕೇ ಆಗದಿದ್ದಾಗ.



ನಿಜಕ್ಕೂ, ಸಂಕೋಚದ, ಖಾಸಗಿಯಾದ ಜನ ತಮಾಷೆಯವರಾಗಿರುತ್ತಾರೆ; ಸಾರ್ವಜನಿಕ ಚಿಂತನೆ ಮತ್ತು ಕ್ರಿಯೆಗಳ ವ್ಯಕ್ತಿಯ ಜೋಕುಗಳೆಲ್ಲ ಹಳಸಲಾಗಿರುತ್ತವೆ. ಯಾಕೆಂದರೆ ಸಾರ್ವಜನಿಕವಾಗಿ ಅನ್ನಿಸುವ ವಿಷಯ ಹಲವು ಮಾತ್ರ. ಖಾಸಗಿಯಾಗಿ ಹೊಳೆಯುವಂಥವು ನೂರಾರು! ಸಂಕೋಚದ, ಖಾಸಗಿಯಾದ, ತೀವ್ರ ಕಾಮನೆಗಳ, ಸೂಕ್ಷ್ಮ ಭಾವನೆಗಳ ವ್ಯಕ್ತಿ ಮಾತಾಡಿದ್ದೆಲ್ಲ ತಮಾಷೆಯಾಗುವ ಸಾಧ್ಯತೆಗಳಿವೆ.

"ಏನ್ ಸ್ವಾಮಿ, ದೇಶದ ಪರಿಸ್ಥಿತಿಯ ಬಗ್ಗೆ ನಿಮಗೆ ಏನನ್ನುತ್ತೆ?" ಎಂದು ಗಟ್ಟಿಧ್ವನಿಯಲ್ಲಿ ಕೂಗುವವನನ್ನು ಕಂಡರೆ ಖಾಸಗಿ ವ್ಯಕ್ತಿಗೆ ಭಯ. ಆತ ಸುಮ್ಮನಿರುತ್ತಾನೆ. ಆದರೆ ಗಟ್ಟಿಧ್ವನಿಯವನು ತನ್ನ ಪ್ರಶ್ನೆಯನ್ನು ಇನ್ನಷ್ಟು ಜೋರಾಗಿ ಕೇಳುತ್ತಾನೆ. ಖಾಸಗಿ ವ್ಯಕ್ತಿ ನಿಲ್ಲುತ್ತಾನೆ. ನಿಂತು ಕಾಲಿಗೆ ನೆಟ್ಟ ಮುಳ್ಳು ತೆಗೆದುಕೊಳ್ಳುತ್ತಾ 'ಕ್ಷಮಿಸಿ' ಎಂದು ಹೊರಟುಹೋಗುತ್ತಾನೆ.

ಅಲ್ಲಿ ಅಪಾರ ತಮಾಷೆ ಇದೆ: ಆ ಪರಿಸ್ಥಿತಿ ನಿಮಗೆ ಅರ್ಥವಾದರೆ ಮಾತ್ರ.

● ಜನವರಿ 25, 1995

ಕೃಷ್ಣರ ಜೆಟ್‌ಲಾಗ್ ಭಾಷಣ

ಡಿಸೆಂಬರ್ ತಿಂಗಳು. ಬೆಳಗಿನ ಏಳುಏಳೂವರೆ ಗಂಟೆ ಸಮಯ. ಅಂದಮೇಲೆ ಬೆಂಗಳೂರು ಚಳಿ ಬಲವಾಗೇ ಇರುತ್ತೆ. ಇಂತಹ ಚಳಿ ಮುಹೂರ್ತದಲ್ಲಿ ಗಂಡ ಎಂಬ ಪ್ರಾಣಿ ಬೆಡ್‌ರೂಮಲ್ಲಿ ರಗ್ಗು ಹೊದ್ದು ಕಾಲು ಕುಕ್ಕರಿಸಿಕೊಂಡು ತೊಡೆ ಸಂದಿಗೆ ಕೈ ಸಿಗಿಸಿಕೊಂಡು ಮುದುರಿಕೊಂಡಿರುತ್ತೆ. ಆಹಾ ಇಂತಹ ಸಮಯದಲ್ಲಿ ಹೆಂಡತಿ ಅನ್ನಿಸಿಕೊಂಡೋಳು ರಗ್ಗೊಳಗೆ ಸೇರ್ಕೊಂಡ್ರೆ ಏನು ಪಸಂದಾಗಿರುತ್ತೆ ಅಲ್ವಾ ಅನ್ನೊ ಹಿತಕರ ಭಾವನೆ ಬಂದು ಬಡಿಯುತ್ತೆ. ಆದರೆ ರೊಮಾನ್ಸ್ ಕಲ್ಪನೇನೇ ಇಲ್ಲದ ಹೆಂಡತಿ ಅಡಿಗೆ ಮನೆ ಸೇರಿರುತ್ತೆ. ಅವ್ಳಿಲ್ಲದಿದ್ರೆ ಬ್ಯಾಡ ಒಂದು ಕಪ್ ಬಿಸಿಬಿಸಿ ಕಾಫೀನೋ ಇಲ್ಲ ಗರ್ಮಾಗರಂ ಚಹಾನೋ ಸಿಕ್ಕಿದರೆ ಚಪ್ಪರಿಸಿಕೊಂಡು ಹೀರ್‍ತಾ ಇದ್ರೆ ಬಲು ಹಿತವಾಗಿರುತ್ತೆ ಅನ್ನುತ್ತೆ. ಕೊರೆಯೊ ಚಳೀಲಿ ಕೆಲ್ಸ ಮಾಡ್ತಿರೋಳ್ನ ಕೇಳಿದ್ರೆ ಬೆಳಗ್ಗೆ ಏಳೊ ಕ್ಯಾಂಚೀನೆ ಸಹಸ್ರನಾಮಾನ ಕೇಳಬೇಕಲ್ಲ ಅನ್ನೊ ಸಂಕಟಕ್ಕೆ ಎದ್ದು ಅಡಿಗೆಮನೆ ಕಡೆ ಪಾದ ಬೆಳಸ್ತಾನೆ. ಹೆಂಡ್ತಿ ಅನ್ನಿಸಿಕೊಂಡೋಳು ಚಳೀಲೆ ನಡುಗ್ತಾ ಕಾಫಿ ಬೆರಸ್ತಿರೋದು ಕಣ್ಣಿಗೆ ಬೀಳುತ್ತೆ. ಅವ್ಳು ಹಿಂಭಾಗದಿಂದ ಎದ್ರೆ ಕಣ್ಣಿಗೆ ಬೇಲೂರು ಶಿಲಾ ಬಾಲಿಕೆಗಿಂತ ಒಂದಿಷ್ಟು ಜಾಸ್ತೀನೆ ಅನ್ನುತ್ತೆ. ಅವನಿಗೆ ಏನೇನೋ ಆಗೋಗ್ಯದೆ. ಕಳ್ಳಬೆಕ್ಕಿನ ಹೆಜ್ಜೇಲಿ ಹೋಗಿ ಅವುಳ್ನ ಗಕ್ಕನೆ ತಬ್ಬಿಕೊಳ್ತಾನೆ. ಆಮೇಲೆ ಏನಾಯಿತಂತೆ ಅಂದರೆ.... ಅವನು ತಬ್ಬಿಕೊಂಡಿದ್ದು ಹೆಂಡ್ತೀನೆ ಅಲ್ವಂತೆ. ಅವಳ ಸೀರೆಯಂತಹುದ್ದೇ ಸೀರೆ ಉಟ್ಟಿದ್ದ ಕೆಲಸದವಳಂತೆ! ಇಂತಹ ಹಳಸಲು ಜೋಕ ಕೇಳೇ ಇರ್ತೀರಿ ಇಲ್ಲ ಸಿನಿಮಾಗಳಲ್ಲಿ ನೋಡೇ ಇರ್ತೀರಿ. ಅವನು ಹೆಂಡ್ತೀನೆ ತಬ್ಬಿಕೋಬೇಕು ಅಂತ ಹಿಂಗ್ಮಾಡಿದನೋ ಅಥ್ವಾ ಕೆಲಸದವಳ ಆಕರ್ಷಣೇನೆ ಹಿಂಗೆ ಮಾಡಿಸ್ತೊ ಹೇಳೋಕೆ ಬರೋದಿಲ್ಲ. ಮನೆ ಯಜಮಾನರು ಅನ್ನಿಸಿಕೊಂಡ ಚಪಲಚೆನ್ನಿಗರಾಯರ ಕಪಿಚೇಷ್ಟೆಗಳನ್ನು ಕಂಡಿದ್ದ ಆಕೆ ಅವನ ಕೆನ್ನೆಗೆ ಬಲವಾಗಿ ಬಾರಿಸಿರಬೇಕು. ಈ ದೃಶ್ಯಾವಳಿಗೆ ಪ್ರೇಕ್ಷಕಿಯಾಗಿದ್ದ ಚಂಡಿ ಚಾಮುಂಡಿಯ ಅವತಾರಿಣಿಯಾದ ಹೆಂಡತಿಯ ಬಾಯಿ ಬೊಂಬಾಯಿ ಆಗಿರುವುದಕ್ಕೆ ಬೆದರಿದ ಪತಿಮಹಾಶಯ 'ನೀನೂ ಅನ್ಕೊಂಡು ತಬ್ಕೊಂಡೆ ಕಣೆ' ಅಂತ ತೊದಲ್ನುಡಿ ಆಡಿರಬೇಕು ಎಂದೆಲ್ಲ ಬಿಸಿಬಿಸಿ ಚರ್ಚೆ ಮಾಡೇ ಇರ್ತೀರಿ. ಈ ಹಳಸಲು ಪುರಾಣ ಯಾಕೆ ವದರ್ತಿದೀನಿ ಅಂದ್ರೆ ನಮ್ಮ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣ ಅವರೂ ಹಸಿರು ಸೀರೆ ತೊಟ್ಕೊರೆಲ್ಲ ನನ್ನೆಂಡ್ತಿ ಹಂಗೇ ಕಾಣ್ತಾರೆ ಅನ್ನೊ ಹಂಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೇಲಿ ಫಜೀತಿ ಮಾಡ್ಕೊಂಡವ್ರೆ.


ಅದೇನಾಗಿತ್ತು ಅಂದ್ರೆ ಪೋರ್ಚುಗಲ್ ವಿದೇಶಾಂಗ ಮಂತ್ರಿ ತನ್ನ ಪ್ರವಚನ ತನ್ನ ದೇಶದ ಭಾಷೆಯಲ್ಲೇ ವದರಿದನಂತೆ. ಆಮೇಲೆ ತೆಪ್ಪಗಿದ್ದರೂ ಆಗುತ್ತಿತ್ತು, ಏನೂ ಸೂರೋಗುತ್ತಿರಲಿಲ್ಲ. ಯಾಕೆಂದರೆ ಇಂತಹ ದೊಡ್ಡ ಮನುಷ್ಯರ ಸಭೆ ಅಂದರೆ ಯಾರೂ ಯಾರ ಮಾತನ್ನು ಆಲಿಸುವುದಿಲ್ಲ. ಎಲ್ಲರ ಕಿವಿಗಳಿಗೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ದೊಡ್ಡ ರಂಧ್ರವನ್ನೇ ಕೊರೆದುಕೊಂಡಿರುತ್ತಾರೆ. ಒಂದು ಕಿವಿಯಿಂದ ಒಳಬಂದ ಮಾತು ಮತ್ತೊಂದು ಕಿವಿಯಿಂದ ಯಾವುದೇ ಅಡೆತಡೆಗಳಿಲ್ಲದೆ ಹೊರಗೆ ಹೋಗುತ್ತವೆ. ಆದರೆ ಈ ಮಹಾಶಯನಿಗೆ ಏನೋ ಭ್ರಮೆ. ತಾನು ಅತ್ಯಮೂಲ್ಯ ಸಲಹೆಗಳು ನೀಡಿದ್ದೇನೆ, ಅವು ಎಲ್ಲರ ಪರಿಶೀಲನೆಗೆ ಅರ್ಹವಾದವು ಅನ್ನೋ ಭ್ರಾಂತು. ಅದನ್ನ ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿ ಸಭಾಸದರ ಮೇಜಿನ ಮೇಲೆ ಇಡಿಸಲು ಏರ್ಪಾಟು ಮಾಡಿದ್ದ. ಹಿಂಗೆ ಹಂಚಬಾರದ್ದ ಹಂಚಿದ್ನಲ್ಲಾ ಅದೇ ಯಡವಟ್ಟಾಗೋಯ್ತು. ಅದೇನು ಅಂದ್ರೆ.... ಸತತವಾಗಿ ವಿಮಾನಯಾನ ಮಾಡ್ತೋರ್‍ಗೆ ಅದೆಂತದೋ ಜೆಟ್ ಲಾಗೊಪಟ್ ಲಾಗೋ ಎಂತದೋ ಒಂದು ಲಾಗಾಯ್ತದಂತಲ್ಲ ಅದು ಕೃಷ್ಣರಿಗೆ ಆಗಿರಬೇಕು. ಇಂತಹ ಮಂಪರು ಅವಸ್ಥೆಯಲ್ಲೇ ಭಾಷಣಕ್ಕೆ ನಿಂತರು. ಸೊಗಸಾದ ಇಂಗ್ಲಿಷ್ ಬರೋ ಮನುಷ್ಯ ಅಲ್ವಾ. ಮೂರು ನಾಲ್ಕು ನಿಮಿಷ ಭರ್ಜರಿಯಾಗೇ ಭಾಷಣ ಬಿಗಿದ್ರಂತೆ.

ಆದರೆ... ತನ್ನ ಹೆಂಡತಿ ಅಂತ ಕೆಲಸದವಳನ್ನ ತಬ್ಬಿಕೊಂಡವನ ಕತೆಯೇ ಇಲ್ಲೂ ಆಗಿತ್ತಂತೆ. ಆ ಭಾಷಣ ಅವರ ಭಾಷಣಾನೆ ಅಲ್ವಂತೆ, ಪೋರ್ಚುಗಲ್ ಮಂತ್ರಿ ಮಾಡಿದ ಭಾಷಣ ಅಂತೆ! ಯಡವಟ್ಟಾಗೋಯ್ತಲ್ಲ ಅಂತಾವ ಯಾರೋ ಒಬ್ಬರು 'ಅದು ಅವರ ಭಾಷಣ. ನಿಮ್ಮ ಭಾಷಣ ಓದಿ' ಅಂತ ತಿದ್ದಿದರಂತೆ. ಆಮೇಲೆ ಕೃಷ್ಣಾರು ಭಾಷಣಾನ ಸೊಗಸಾಗಿ ಮಾಡಿದ್ರಂತೆ. ಅಲ್ಲಿದ್ದೋರೆಲ್ಲ 'ಭೇಷ್ ಕಣಯ್ಯ ಭೇಷ್' ಅಂದ್ರು ಅಂತಾರೆ, ಅದ ಕಂಡೋರು.

ಕೃಷ್ಣಾರು ಹಿಂಗೆ ದ್ವಾಪರಯುಗದ ಕೃಷ್ಣ ಕೊಳಲು ಊದಿ ಗೋಪಿಕಾಸ್ತ್ರೀಯರನ್ನು ಮರಳು ಮಾಡಿದ್ನಲ್ಲಾ ಹಂಗೇನೇ ಇವ್ರು ಅಲ್ಲಿದ್ದೋರ್‍ಗೆಲ್ಲ ಕಿವಿ ನೊಚ್ಚೆಗಾಗುವಂಗೆ ಮಾಡವ್ರಲ್ಲ ಅಂತ ತಲೆದೂಗೋಕೋಗಿಲ್ಲ ತಲೆ ಬಗೀತಾ ಕುಂತವ್ರೆ. ಪೋರ್ಚುಗಲ್ ಭಾಷಣ ಓದಿ ದೇಶಕ್ಕೆ ಅಪಕೀರ್ತಿ ತಂದವ್ರೆ, ಅವಮಾನ ಆಗದೆ ಹಂಗೆಹಿಂಗೆ ಅಂತ ಆಡ್ಕೊತಾ ಬಿದ್ದವ್ರೆ.... ಅಲ್ಲ ಆಗಬಾರದ್ದು ಏನಾಗೋಗದೆ ಅಂತೀನಿ. ಎಲ್ರೂ ಓದೋದು ಅವರಿವರು ಬರೆದುಕೊಟ್ಟ ಭಾಷಣಾನೇಯ. ಇವ್ರು ಅವರು ಬರೆದುಕೊಟ್ಟಿದ್ದ ಓದವ್ರೆ ಅಷ್ಟೇಯ! ಬರ್ದು ಕೊಟ್ಟಿರೋದ್ನೂ ನೆಟ್ಟಗೆ ಓದಕೆ ಬರಲ್ವಾ ಅಂತಾರೆ. ಆರೆ ಜೆಟ್‌ಲಾಗ್ ಎಫೆಕ್ಟ್‌ನಿಂದ ಹಿಂಗಾಗದೆ. ಬರ್ದು ಕೊಟ್ಟೋನಾದ್ರು ಇದ ತಿಳ್ಕಬಾರ್ದ. ಇವ್ರು ಜೆಟ್‌ಲಾಗ್‌ನಿಂದ ಲಾಗ ಹೊಡಿಯೋ ಮನುಷ್ಯ. ಇವರ ಸರದಿ ಬಂದಾಗ ಓದಕ್ಕೆ ಕೊಡಬೇಕು ಅನ್ನೋದ. ಯಾವತ್ತೋ ಕೊಟ್ಬುಬುಟ್ರು ಜೆಟ್ ಲಾಗ್ ಮಂಪಿನಲ್ಲಿರುವಾಗ ಓದು ಅಂದ್ರೆ ಆಯ್ತದಾ ಅಂದ್ರೆ ಬಿಷ್ಣೇ ಬಲ್ಲರು. ಅವರೇಳೋದೇನೂ ಅಂದ್ರೆ ಒಬ್ಬೊಬ್ಬನಿಗೂ ಒಂದೊಂದು ದಕ್ಷತೆ ಹಂತ ಅಂತ ಇರ್ತದಂತೆ. ಓಹೋಹೋ ಇವನು ಈ ಹಂತದಲ್ಲಿ ಬುದ್ಧಿವಂತ ಆಗವ್ನೆ ಅಂತ ಮೇಲಕ್ಕೇರಿಸಿದ್ರೆ ದಡಕ್ಕನೆ ಉರುಳೋಯ್ತನಂತೆ. ಅದೇ ಕೃಷ್ಣ ಅವರಿಗೂ ಆಗದೆ ಅಂತಾರೆ. ಹೆ... ಹಂಗಿಲ್ಲ ಕಣ್ರಿ. ಅವರ್‍ನ ಸಿಂಗ್‌ರು, ಮೇಡಂರೂ ಮೆಚ್ಕಂಡವ್ರೆ ಅಂದದ್ಕೆ ಅದ್ಕೆ ಅವರಿನ್ನೂ ಮಂತ್ರಿಯಾಗಿರೋದು ಅನ್ನುದೋದ.....

ಪತಿ ಮೀರಿದ ಪತ್ನಿಯರು

ಅಸ್ಸಾಂನ ತರುಣತರುಣಿಯರಿಗೆ ಬಲೇ ತಲೆ ಬಿಸಿಯಾಗದಂತೆ. ಏನೇನು ಮಾಡಿದ್ರೂ ಹೆಂಗೆಂಗೆ ಮಾಡಿದ್ರೂ ಕೆಲಸ ಅನ್ನೋದು ಮರೀಚಿಕೆಯಾಗೇ ಇದ್ದತ್ತಂತೆ. ಮನೇಲಿ ಉಗಿತ, ಬೀದೀಲಿ ಅಲೆತ ಅವರ ಪಾಡಾಗಿದ್ದದಂತೆ. ಇಂತೋರು ಇಪ್ಪತ್ತೈದು ಲಕ್ಷ ಜನ ಅಲ್ಲಿದ್ದಾರಂತೆ. ಹತ್ತಾರು ವರ್ಷಗಳಿಂದ ಉಗ್ರಗಾಮಿಗಳು ಕೊಟ್ಟ ಕಾಟಾನೆ ಇದ್ಕೆಲ್ಲ ಕಾರಣ ಅಂತೆ. ಮನೇಲಿ ಬಯ್ಸಿಸಿಕೊಂಡು, ಬಯ್ಸಿಸಿಕೊಂಡು ಜೀವನಾನೇ ಬ್ಯಾಸರ ಆಗಿತ್ತಲ್ಲ ಅವ್ರೆಲ್ಲ ಇದಕ್ಕೇನಾದರೂ ಪರಿಹಾರ ಕಂಡುಹಿಡಿಯಲೇಬೇಕು ಅಂತ ತಲೆ ಒಂದಾಗಿಸಿದ್ರಂತೆ. ಹಿಂಗೆ ಯೋಚಿಸ್ತಾ ಇದ್ದಂಗೆ ದಢಕ್ಕನೆ ತಲೆಗೆ ಏನೋ ಹೊಳೀತಂತೆ. ಅರೆರೆ ಬಡ್ಡಿ ಐದಂದು ಇಷ್ಟು ದಿನ ನಮ್ಮ ಹತ್ತಿರಾನೆ ಸುಳಿದಿರ್‍ಲಿಲ್ಲ ಅಂತ ಕೈಕೈ ಹಿಸುಕಿಕೊಂಡ್ರಂತೆ. ಈಗ್ಲಾದ್ರೂ ಸುಳೀತಲ್ಲ ಅಂತ ನಗ್ಮುಕ ಮಾಡಿಕೊಂಡ್ರಂತೆ. ಇದ್ಕೆ ಅವರೇ ಸರಿ ಅಂತಾವ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಅವರ ಪಾದ ತಳಕ್ಕೆ ಹೋಗಿಬಿತ್ತಂತೆ. ತಾಯಂದಿರಾ ಅಕ್ಕಂದಿರಾ ನಿಮ್ಮ ಅಸಾಧಾರಣ ಬುದ್ಧಿಮತ್ತೆ ಕಂಡು ಶರಣ ಶರಣಾಗಿವಿ. ನಿಮ್ಮ ಸಾಧನೆಗೆ ಸೈ ಅಂತೀವಿ. ನಾವು ಇಪ್ಪತ್ತೈದು ಲಕ್ಷ ಹುಡುಗ ಹುಡುಗೀರಿದೀವಿ. ಕೆಲಸ ಇಲ್ಲದೆ, ಖರ್ಚಿಗೆ ಕಾಸಿಲ್ದೆ ಬೀದಿಬೀದೀಲಿ ಅಲೀತಿದ್ದೀವಿ. ಯಾರು ಯಾರನ್ನೋ ಕಂಡೊ.



ಎಚ್.ಎಲ್. ಕೇಶವಮೂರ್ತಿ

ಅಣಕ


ಯಾರೂ ಸರಿಯಾಗಿ ಮಾರ್ಗದರ್ಶನ ಮಾಡ್ಲೇ ಇಲ್ಲ. ಇದಕ್ಕೆ ನೀವೇ ಸರಿಯಾದೋರು ಅಂತ ನಿಮ್ ಪಾದಕ್ಕೆ ಬಂದು ಬಿದ್ದೀವಿ. ಯಾಕೆ ಅಂದ್ರೆ ನಿಮ್ ತಲಿ ಅಂತದ್ದು. ನಿಮಗೆ ಉದ್ಯೋಗ ಇಲ್ಲ. ಯಾವ ವೃತ್ತೀನೂ ಮಾಡ್ತಿಲ್ಲ. ಆದ್ರೂ ಕೋಟ್ಯಾಧೀಶರಾಗಿದ್ದೀರಿ. ಮಂತ್ರಿಗಳಾಗಿರೋ ನಿಮ್ಮ ಕೋಟ್ಯಾಧಿಪತಿ ಗಂಡನ್ನ ಮೀರ್‍ಸಿದೀರಿ. ಕೋಟ್ಯಾಧಿಪತಿಗಿಂತ ಕೋಟ್ಯಾಧಿಪತ್ನಿಯೇ ಮೇಲು ಅನ್ನೋದ ಜಾಹೀರು ಪಡಿಸಿದ್ದೀರಿ. ಈ 'ಕಲೆ'ನ ನಮ್ಗೂ ವಸಿ ಹೇಳ್ಕೊಡಿ ಅಂತಾ ಕೇಳಿದ್ದಾರಂತೆ.

ಅರೆರೆ ಈ ಹುಡುಗ ಮುಂಡೇವ್ಕೆ ಇಂತಾದ್ದೆಲ್ಲ ಹೆಂಗೆ ಹೊಳೀತು ಅಂದ್ರೆ ಅಲ್ಲಿ ಮುಖ್ಯಮಂತ್ರಿ ತರುಣ್ ಗೊಗಾಯ್ ಮಂತ್ರಿಮಂಡಳ ಆಸ್ತಿ ವಿವರ ನೀಡ್ದಾಗ ಮಂತ್ರಿಗಳಿಗಿಂತ ಅವರ ಪತ್ನಿಯರೇ ಹೆಚ್ಚು ಆಸ್ತಿ ಹೊಂದಿರೋದು ಬಹಿರಂಗ ಆಯ್ತಂತೆ. ಹೆಂಡತೀರು ಆಸ್ತಿವಂತರೂ ಆಗಿರ್‍ಲಿಲ್ಲವಂತೆ; ಯಾವುದೇ ವೃತ್ತಿನೂ ಮಾಡ್ತಿರಲಿಲ್ವಂತೆ. ಓಹೋಹೋ ಅವ್ರು ಯಾವ್ದೋ ವಿದ್ಯೆ ಕರಗತ ಮಾಡ್ಕೊಂಡವ್ರೆ ಅದ್ಕೇ ಅಷ್ಟೊಂದು ಹಣ ಮಾಡಕ್ಯಾಗದೆ ಅಂತಾವ ಅವ್ರರ್‍ನ ಹಿಡ್ಕೊಂಡವ್ರಂತೆ. 'ರಾಜ್ಯ ಸಲಹಾ ಕೇಂದ್ರ' ಶುರು ಮಾಡಿ ಆ ಕಲೇನ ಹಂಚಿ ಅಂತ ಕುಂತವ್ರಂತೆ.

ವಿದ್ಯಾರ್ಥಿ ಸಂಘದೋರು ಒಳ್ಳೆ ಕೆಲ್ಸಾನೆ ಮಾಡವ್ರೆ. ಅಸ್ಸಾಂನ ನಿರುದ್ಯೋಗ ಪರಿಹಾರ ಆಗಲಿ ಅಂತ ಮೆಚ್ಚಿಕೊಂಡರೂ ಈ ವಯಸ್ಸಿಗೇ ಇಷ್ಟೊಂದು ಸ್ವಾರ್ಥಿಗಳಾಗಬಾರದು ಎಂಬುದೇ ನಮ್ಮ ಆಸೆ. ಇಂತಹ ಪ್ರತಿಭಾ ಪ್ರಚಂಡೆಯರಿಗೆ ಬರ ಬರುವಷ್ಟು ಯಾವ ರಾಜ್ಯವೂ ಬಂಜೆ ಆಗಿಲ್ಲದಿರುವುದು ನಮ್ಮ ಪೂರ್ವಜನ್ಮದ ಸುಕೃತವೇ ಸರಿ. ಎಲ್ಲಾ ರಾಜ್ಯಗಳ ಪ್ರತಿಭಾ ಪ್ರಚಂಡೆಯರೂ ಒಗ್ಗೂಡಿ 'ರಾಷ್ಟ್ರೀಯ ಸಲಹಾ ಕೇಂದ್ರ' ತೆರೆದು, ಪ್ರತಿ ರಾಜ್ಯದಲ್ಲೂ ಅದರ ಶಾಖೆಗಳನ್ನು ತೆರೆದರೆ.... ದೇಶದ ನಿರುದ್ಯೋಗ ಸಮಸ್ಯೆಯನ್ನೇ ದೂರಮಾಡಬಹುದಾಗಿದೆ... ಹೌದಾ.....!



ನಿಜವಾದ ಸಮಾಜವಾದಿ ಪ್ರಕಾಶರೂ ಹೆಲ್ಮೆಟ್ ಕಿರಿಕಿರಿಯೂ




ಎಂ.ಪಿ.ಪ್ರಕಾಶ್ ಜೀವಂತವಾಗಿದ್ದಾಗ 'ಲಂಕೇಶ್' ವಾರಪತ್ರಿಕೆಯೊಂದನ್ನು ಹೊರತುಪಡಿಸಿ ಬೇರಾವ ಪತ್ರಿಕೆಗಳೂ ಅವರ ಸರಳತೆ, ಸಜ್ಜನಿಕೆ, ಶುದ್ಧಹಸ್ತವನ್ನು ಹೊಗಳುತ್ತಿರಲಿಲ್ಲ. ಆದರೆ ಈಗ ಅವರು ತೀರಿಕೊಂಡ ಮೇಲೆ ಎಲ್ಲಾ ಪತ್ರಿಕೆಗಳೂ (ಕೃತ್ರಿಮವಾಗಿ) ಅವರನ್ನು ಹಾಡಿಹೊಗಳುತ್ತಿರುವುದು ವಿಪರ್ಯಾಸ.

2008ರ ವಿಧಾನಸಭೆ ಚುನಾವಣೆಯ ಸಮಯದಲ್ಲಿ ಪ್ರಕಾಶರ ಎದುರಾಳಿ ಗಣಿಕಳ್ಳ, ಗಡಿಚೋರ ರೆಡ್ಡಿಪಡೆ ಪ್ರಕಾಶರನ್ನು ಅತಿ ಹೀನ ಪದಗಳಲ್ಲಿ ಬಯ್ದು ಅವಮಾನಿಸುತ್ತಿತ್ತು, ಮಾಧ್ಯಮಗಳಲ್ಲಿ ಯಾರೂ ಇದನ್ನು ಖಂಡಿಸಲಿಲ್ಲ, ಇದನ್ನು ವಿರೋಧಿಸಿ ನಾನು ಹಲವಾರು ಪತ್ರಿಕೆಗಳಿಗೆ ಬರೆದ ಪತ್ರಗಳೆಲ್ಲವೂ ಸಂಪಾದಕರ ಕಸದಬುಟ್ಟಿ ಸೇರಿತ್ತು.

ನಿಜವಾದ ಸಮಾಜವಾದಿಯಾಗಿದ್ದ ಪ್ರಕಾಶರು ಅಪರೂಪದ ಪ್ರಾಮಾಣಿಕ ರಾಜಕಾರಣಿಯಾಗಿದ್ದರಷ್ಟೇ ಅಲ್ಲ, ಕನ್ನಡದ ಸಾಹಿತಿ ಹಾಗೂ ಕಲಾಕಾರರೂ ಆಗಿದ್ದರು. ಆದುದರಿಂದ ಕರ್ನಾಟಕದ ಪ್ರಾಕೃತಿಕ ಸಂಪತ್ತನ್ನು ಲೂಟಿಗೈದು ಕನ್ನಡಿಗರ ಮೇಲೆಯೇ ಸವಾರಿ ಮಾಡುತ್ತಿದ್ದ ಮಹಾವಂಚಕ ಘಟಿಂಗ ತೆಲುಗು ರಾಜಕಾರಣಿಗಳು ಪ್ರಕಾಶರನ್ನು ಈ ರೀತಿ ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ಅವಮಾನಿಸುತ್ತಿದ್ದಾಗ ಕನ್ನಡ ಸಾಹಿತಿಗಳು, ಕನ್ನಡ ಪತ್ರಕರ್ತರು ಪ್ರತಿಭಟಿಸಬೇಕಿತ್ತು,

ಆದರೆ ಗಣಿಗಳ್ಳರ ಹಣದ ಆಸೆಗೆ ಬಿದ್ದ ಮತದಾರರು ಅಭಿವೃದ್ಧಿಪರ ಪ್ರಕಾರನ್ನು ಬಹು ಅಂತರದಿಂದ ಸೋಲಿಸಿದ್ದು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇನ್ನೂ ಸರಿಯಾಗಿ ನೆಲೆಗೊಂಡಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು



ಇತ್ತೀಚೆಗೆ ಮರಣ ಹೊಂದಿದ ಮಾಜಿ ಮಂತ್ರಿ ಎಂ.ಪಿ.ಪ್ರಕಾಶ್ ಅವರನ್ನು ನಿಮ್ಮ ಪತ್ರಿಕೆಯೂ ಸೇರಿದಂತೆ ಎಲ್ಲರೂ ಹೊಗಳಿದ್ದೇ ಹೊಗಳಿದ್ದು. ಆದರೆ ಈ ಪ್ರಕಾಶ್ ದ್ವಿಚಕ್ರ ವಾಹನಗಳ ಚಾಲಕರಿಗೆ ನೀಡಿದ ಹಿಂಸೆ ಬಗ್ಗೆ ಯಾರೂ ಚಕಾರವೆತ್ತಿಲ್ಲ, ಅದನ್ನು ಟೀಕಿಸಿಲ್ಲ. ಹೆಲ್ಮೆಟ್‌ಅನ್ನು ಕಡ್ಡಾಯ ಮಾಡಿರುವುದು ನಿಮಗೆ ಚಿಕ್ಕ ವಿಷಯದಂತೆ ಕಾಣಿಸಬಹುದು, ಆದರೆ ಅದು ಪ್ರತಿನಿತ್ಯ ಲಕ್ಷಾಂತರ ಜನರ ಬದುಕಿನಲ್ಲಿ ಕಿರಿಕಿರಿ ಉಂಟುಮಾಡುತ್ತಿದೆ.

1993ರಲ್ಲಿ ಆಗಿನ ಮುಖ್ಯಮಂತ್ರಿ ಹೆಲ್ಮೆಟ್ ಅನ್ನು ಕಡ್ಡಾಯ ಮಾಡಿದ್ದಾಗ ಇದೇ ಪ್ರಕಾಶರು ಅದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದರು ಎಂಬುದು ನಿಮಗೆ ನೆನಪಿಲ್ಲದಿರಬಹುದು. ಹಾಗೆಯೇ 2004ರಲ್ಲಿ ಮುಖ್ಯಮಂತ್ರಿ ಧರಂ ಸಿಂಗ್ ಹೆಲ್ಮೆಟ್ ಕಡ್ಡಾಯ ಮಾಡುವ ಬಗ್ಗೆ ಪ್ರಸ್ತಾಪಿಸಿದಾಗ ಅದನ್ನು ಜೆಡಿಎಸ್ ತೀವ್ರವಾಗಿ ವಿರೋಧಿಸಿತ್ತು.


ಆದರೆ ಎಚ್.ಡಿ.ಕುಮಾರಸ್ವಾಮಿ ಅಧಿಕಾರಕ್ಕೆ ಬಂದಕೂಡಲೆ ಈ ಪ್ರಕಾಶ್ ಹೆಲ್ಮೆಟ್ ಅನ್ನು ಕಡ್ಡಾಯ ಮಾಡಿದರು. ಅದಕ್ಕೆ ಕಾರಣ ಹೆಲ್ಮೆಟ್ ಲಾಬಿಯೊಂದಿಗೆ ಅವರಿಗಿದ್ದ ನಂಟು ಎಂಬ ಸಂಶಯವೂ ಆಗ ವ್ಯಕ್ತವಾಗಿತ್ತು.

ಆಂಧ್ರ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಜನರ ಪರವಾದ ನಿಲುವನ್ನು ಹೊಂದಿದ್ದು ಹೆಲ್ಮೆಟ್ ಅನ್ನು ತಮ್ಮ ರಾಜ್ಯಗಳಲ್ಲಿ ಕಡ್ಡಾಯ ಮಾಡಿಲ್ಲ. ಆದ್ದರಿಂದ ಅಲ್ಲಿ ಅದನ್ನು ಧರಿಸದಿದ್ದರೂ ಪೊಲೀಸರು ಫೈನ್ ಕಟ್ಟಿಸಿಕೊಳ್ಳುವುದಿಲ್ಲ, ಆದರೆ ಸಜ್ಜನನಂತೆ ಕಾಣಿಸುತ್ತಿದ್ದ ಪ್ರಕಾಶ್ ತನ್ನ ಬಳ್ಳಾರಿ ಜಿಲ್ಲೆಯವರಿಗೆ ಮಾತ್ರ ಹೆಲ್ಮೆಟ್‌ನಿಂದ ಬಿಡುಗಡೆ ನೀಡಿ ರಾಜ್ಯದ ಇತರೆಡೆ ಇರುವ ಲಕ್ಷಾಂತರ ಜನರಿಗೆ ಅದನ್ನು ಕಡ್ಡಾಯ ಮಾಡಿ ಶಿಕ್ಷೆ ನೀಡಿದ್ದಾರೆ.

ಇವತ್ತಿಗೂ ಶೇ. 90 ದ್ವಿಚಕ್ರ ವಾಹನಗಳ ಚಾಲಕರು ಹೆಲ್ಮೆಟ್ ಅನ್ನು ವಿರೋಧಿಸುತ್ತಾರೆ ಮತ್ತು ಅದನ್ನು ಕಡ್ಡಾಯ ಮಾಡಿದ ಕಾರಣಕ್ಕೆ ಪ್ರತಿ ದಿನ ಮಾನ್ಯ ಪ್ರಕಾಶರನ್ನು ಶಪಿಸುತ್ತಾರೆ. ಅದೆಲ್ಲೋ ಬೆರಳೆಣಿಕೆಯಷ್ಟು ಅಲ್ಪಸಂಖ್ಯಾತರ ಮೇಲಾದ ಹಲ್ಲೆಯನ್ನು ದೊಡ್ಡದಾಗಿ ವರದಿ ಮಾಡುವ ನಿಮ್ಮ ಪತ್ರಿಕೆ ಇನ್ನು ಮುಂದಾದರೂ ಪ್ರತಿನಿತ್ಯ ಲಕ್ಷಾಂತರ ಜನರ ಮೇಲಾಗುತ್ತಿರುವ 'ಹೆಲ್ಮೆಟ್ ಕಡ್ಡಾಯ' ಎಂಬ ದೌರ್ಜನ್ಯವನ್ನು ಸೀರಿಯಸ್ ಆಗಿ ಪರಿಗಣಿಸುವ ಜವಾಬ್ದಾರಿ ಹೊಂದಿರುತ್ತದೆ ಎಂದು ಆಶಿಸುತ್ತೇನೆ.

- ಕೆ.ಆರ್. ಶೇಷುಪ್ರಸಾದ್, ಈ ಮೇಲ್ ಮೂಲಕ

...ಸುಗಾರನ ...ಕೆಟ್ಟ ಕನಸು ...ತವರು!




...ವ ಹಿಂದಷ್ಟೇ 25ನೇ ವರ್ಷದ ವೆಡ್ಡಿಂಗ್ ...ಆಚರಿಸಿಕೊಂಡಿದ್ದ ಕ್ರೇಜಿ ಸ್ಟಾರ್ ... ಅವತ್ತು ನಿಜಕ್ಕೂ ಗಾಬರಿ ಬಿದ್ದಿದ್ದರು! ...ಗಳೂ ಆಕಳಿಸಿ ನಿದ್ರಿಸುವ ಹೊತ್ತಿನಲ್ಲಿ ...ಟೀವಿ ಚಾನಲ್‌ಗಳು ರಾಜಾಜಿನಗರದ ...ರ್ ಮನೆ ಮುಂದೆ ಕ್ಯಾಮೆರಾ, ಲೈವ್ ...ಸಮೇತ ಪ್ರತ್ಯಕ್ಷರಾಗಿದ್ದರು.

... ಇಷ್ಟೇ: ಯಾರೋ ಕಿಡಿಗೇಡಿಗಳು ...ಗೆ ಏನೋ ಆಗಿದೆಯಂತೆ! ಹೌದಾ?" ಎಂದು ... ಬಿಟ್ಟು ಅದು ಎಲ್ಲೆಡೆ ನುಸುಳುವಂತೆ ... ಈ ವಿಚಾರ ನಿಜವೋ ಇಲ್ಲವೋ ಎಂದು ...ಡಿಕೊಳ್ಳುವ ಮುನ್ನವೇ 'ಬ್ರೇಕಿಂಗ್ ನ್ಯೂಸ್' ...ತುರಗೆಟ್ಟ ಚಾನಲ್‌ನವರು ಗೌವ್ ಎನ್ನುತ್ತಿದ್ದ ...ಲ್ಲಿ ರವಿ ಮನೆ ಮುಂದೆ ಕ್ಯಾಮೆರಾ ಮೈಕು ಹಿಡಿದು ಅಮಾವಾಸ್ಯೆ ನಾಯಿಗಳಂತೆ ಅರಚಲು ಅಣಿಯಾಗಿದ್ದವು.

ಅಂದು ಗೋವಾಕ್ಕೆ ಹೋಗಿದ್ದ ರವಿಚಂದ್ರನ್ ಮನೆಗೆ ಬರುವುದು ಸ್ವಲ್ಪ ತಡವಾಗಿತ್ತು, ಅಷ್ಟರಲ್ಲಾಗಲೇ ಇಷ್ಟೆಲ್ಲಾ ರಾದ್ಧಾಂತ ನಡೆದಿತ್ತು, ಆಗ ಹೊರಬಂದ ರವಿ ಸಹೋದರ ಬಾಲಾಜಿ "ಏನೂ ಆಗಿಲ್ಲ, ಅಣ್ಣನಿಗೆ ಏನೂ ಆಗಿಲ್ಲ, ಹಚ್ಯಾ ಹಚ್ಯಾ" ಎಂದು ಗೇಟಿನ ಮುಂದಿದ್ದವರನ್ನು ಓಡಿಸಿದ್ದಾರೆ.

ಕೆಲವೇ ತಿಂಗಳ ಹಿಂದೆ 'ರೆಬೆಲ್ ಸ್ಟಾರ್‌ಗೆ ಹಾರ್ಟ್ ಅಟ್ಯಾಕಾಯ್ತಂತೆ' ಎಂದು ಇದೇ ರೀತಿ ಸುದ್ದಿ ಹಬ್ಬಿಸಲಾಗಿತ್ತು, ವರ್ಷಕ್ಕೆ ಮುನ್ನ 'ದುನಿಯಾ ವಿಜಿ ವಿಷ ಕುಡಿದು ಸೂಸೈಡ್ ಮಾಡಿಕೊಂಡನಂತೆ' ಎಂದೂ ಎಸ್ಸೆಮ್ಮೆಸ್ಸುಗಳು ರವಾನೆಯಾಗಿದ್ದವು. ಡಾ.ರಾಜ್ ಮತ್ತು ವಿಷ್ಣು ಬದುಕಿದ್ದಾಗ ಇಂಥ ಕೆಟ್ಟ ಬಯಕೆಯ ಸುದ್ದಿ ಸುಮ್ಮನೇ ಹುಟ್ಟಿಕೊಳ್ಳುತ್ತಿದ್ದವು. ಈಗ ಕನಸುಗಾರನ ಹೆಸರು ಕೂಡಾ ಆ ಲಿಸ್ಟಿಗೆ ಸೇರಿದೆ...



ಕಾರ್ತಿಕ್ ಚಿತ್ರದಲ್ಲಿ ಅರ್ಚನಾಗುಪ್ತ ಕಾರ್ತಿಕ್

ರಂಜಿತಾ-ಕುಮಾರಣ್ಣ ಒಟ್ಟೊಟ್ಟಿಗೆ...?



ಮಾಜಿ ಮುಖ್ಯಮಂತ್ರಿ ಮತ್ತು ಮಾಜಿ ನಿರ್ಮಾಪಕ ಎರಡೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಅವರ ಸಿನಿಮಾದೊಂದಿಗಿನ 'ನಂಟು' ಮತ್ತಷ್ಟು ಗಟ್ಟಿಯಾಗಿದೆ... ಇದೇನಿದು ನಟಿ ರಾಧಿಕೆಗೆ ಮತ್ತೊಂದು ಮಗುವನ್ನು ಕರುಣಿಸಿದ್ದಾರಾ? ಎಂದು ಪ್ರಶ್ನಿಸಬೇಡಿ.


... ಕುಮಾರಣ್ಣ ಕ್ಯಾಮೆರಾ ಮುಂದೆಯೂ ನಟಿಸಲು ಶುರುಮಾಡಿದ್ದಾರೆ. 'ಶಿವಕಾಶಿ' ಎನ್ನುವ ಚಿತ್ರದಲ್ಲಿ ...ಸ್ವಾಮಿ ನಿಜ ಜೀವನದಂತೆ ರಾಜಕಾರಣಿಯ ಪಾತ್ರದಲ್ಲೇ ನಟಿಸುತ್ತಿದ್ದಾರೆ. ಕಂಠೀರವ ಸ್ಟುಡಿಯೋದ ...ಟೆಯಿರುವ ಕಂಠೀರವ ನಗರದಲ್ಲಿ ಭಾನುವಾರ ನಡೆದ ಚಿತ್ರೀಕರಣದಲ್ಲಿ ...ಸ್ವಾಮಿ ಭಾಗವಹಿಸಿದ್ದಾರೆ. ಅವರು ಮಾಡಿದ ರಾಜಕೀಯ ಭಾಷಣವನ್ನು ...ಲಾಗಿದೆ. ಮುಂಗಾರು ಮಳೆ ನಿರ್ಮಾಪಕ ಹಾಗೂ ವಿಧಾನಪರಿಷತ್ ...ಕೃಷ್ಣಪ್ಪ ಕೂಡ ಕುಮಾರಸ್ವಾಮಿ ಜೊತೆಗಿನ ಈ ದೃಶ್ಯದಲ್ಲಿ ಪಾಲ್ಗೊಂಡಿದ್ದಾರೆ. ... ಮಂಡ್ಯದಲ್ಲಿ ನಡೆಯಲಿರುವ ಚಿತ್ರೀಕರಣದಲ್ಲಿ ಕೂಡ ಕುಮಾರಸ್ವಾಮಿ ...ಸಲಿದ್ದಾರೆ.



... ಚಿತ್ರದಲ್ಲಿ ಕಾಮಿಸ್ವಾಮಿ ನಿತ್ಯಾನಂದನ ಪ್ರಿಯತಮೆ ರಂಜಿತಾ ಕೂಡಾ ...ಟಂ ಸಾಂಗ್‌ನಲ್ಲಿ ಕುಣಿಯುತ್ತಿದ್ದಾಳಂತೆ. ಆದರೆ ಅದು ಕುಮಾರಣ್ಣನೊಂದಿಗಾ ...ಷ್ಟು ಗೊತ್ತಾಗಿಲ್ಲ, ಅಸಲಿಗೆ ರಂಜಿತಾ ಈ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ...ನ್ನು ಇಡೀ ಚಿತ್ರತಂಡ ಗುಟ್ಟಾಗೇ ಇಟ್ಟಿದೆ. ಕಳೆದ ಮೂರೂವರೆ ವರ್ಷಗಳಿಂದ ... ತೆವಳುತ್ತಾ ಚಿತ್ರೀಕರಣಗೊಳ್ಳುತ್ತಿರುವ 'ಶಿವಕಾಶಿ' ಅದ್ಯಾವಾಗ ...ವಾಗುತ್ತೋ ಗೊತ್ತಿಲ್ಲ, ಆದರೆ ಕುಮಾರಣ್ಣನ ಪಾಲಿಗೆ 'ರಾಧಿಕಾ ಹೋದ್ಲು ...ಬಂದ್ಲು ಡುಂ ಡುಂ ಡುಂ' ಎನ್ನುವಂತಾಗದಿದ್ದರೆ ಪುಣ್ಯ!!

...ಲಾರಿ' ಈಗ ತೆಲುಗರ ಬಿಡ್ಡ!

...ಬೆಗೆ ಸೂಪರ್ ಹಿಟ್ ಆಗಿರುವ ಶಿವಣ್ಣನ ...' ತೆಲುಗಿಗೆ ರಿಮೇಕ್ ಆಗುತ್ತಿದೆಯಂತೆ. ಇಂಥ ... ಚಿತ್ರಗಳು ತೆಲುಗಲ್ಲಿ ಬಂದು ...ದರೂ ಇಲ್ಲಿ ಹಿಟ್ ಆಗಿರುವ ...', ಆಂಧ್ರಾವಾಲಾಗಳು ...'ಯ ಹಕ್ಕಾಗಿ ನಾಮುಂದು, ...ತು ಎಂದು ಕ್ಯೂ ನಿಂತಿದ್ದಾರಂತೆ. ...ವರ ಚಂದ್ರು ನಿರ್ದೇಶನದ ...99ನೇ ಚಿತ್ರ ...'ಯನ್ನು ...ಕ ದಾ. ರಿ. ...ಯನ್ನು ...ಸಾದಿನಲ್ಲೇ ಪೊಸ್ಟೆ ...ಶ್ರೀ. ಬೆಲ್ಲಕೊಂಡ ಸುರೇಶ್, ಶಿವಾಜಿ ಮುಂತಾದ ತೆಲುಗು ನಿರ್ಮಾಪಕರು ಸಹ ನೇರವಾಗಿ ಬೆಂಗಳೂರಿಗೆ ಬಂದು 'ಮೈಲಾರಿ'ಯನ್ನು ನೋಡಿ ಮೆಚ್ಚಿಕೊಂಡಿದ್ದಾರೆ. ನಿರ್ದೇಶಕ ಚಂದ್ರು ಅವರ ಮೊದಲ ಚಿತ್ರ 'ತಾಜ್‌ಮಹಲ್' ಕೂಡ ತೆಲುಗಿಗೆ ರಿಮೇಕ್ ಆಗಿತ್ತು, ಈಗ 'ಮೈಲಾರಿ'ಯೂ ಆಂಧ್ರದತ್ತ ಹೋಗುತ್ತಿದೆ. ಅಲ್ಲಿ ಶಿವಣ್ಣನ ಪಾತ್ರವನ್ನು ವಿಕ್ಟರಿ ವೆಂಕಟೇಶ್ ನಿಭಾಯಿಸಲಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.



ಬರೀ ಮೂರು ಕೋಟಿ ರೂಪಾಯಿಗಳಲ್ಲಿ ಸಿನಿಮಾ ಮುಗಿಸಿ, ನಾಲ್ಕು ಪಟ್ಟು ಲಾಭ ಮಾಡಿಕೊಳ್ಳುತ್ತಿರುವ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಮಹಾನ್ ಚಾಲಾಕಿ ಎಂಬುದಂತೂ ಗ್ಯಾರೆಂಟಿ!

ಚಿತ್ರರಂಗ ಬಂದ್ ಬಸಂತ್ ಬಂಡಾಟ


ಮುಂದಿನ ತಿಂಗಳು ಚಲನಚಿತ್ರ ಉದ್ಯಮಕ್ಕೆ ಐದು ದಿನಗಳ ಕಾಲ ರಜಾ ಘೋಷಿಸಲಾಗಿದೆ.




ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ಚಿತ್ರರಂಗದವರು ಭಾಗವಹಿಸಲು ಅನುಕೂಲವಾಗಲೆಂದು ಈ ರಜಾ ಘೋಷಣೆ. ಇತ್ತೀಚಿಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆದಾಗಲೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಇದೇ ತರಹ ಒಂದು ದಿನದ ರಜೆಯನ್ನು ಘೋಷಿಸಿತ್ತು.

ಆದರೆ, ಇಂತಹ ಭಾಷಾ ಸಮಾವೇಶಗಳು ನಡೆಯುವಾಗ ಒಂದೆರಡು ದಿನ ರಜಾ ಘೋಷಿಸಿದ ಮಾತ್ರಕ್ಕೆ ಸಿನಿಮಾದವರು ಭಾಷಾ ಪ್ರೇಮವನ್ನು ಮೆರೆದಂತೆ ಆಗುತ್ತದೆಯೇ? ವಿಶ್ವ ಕನ್ನಡ ಸಮ್ಮೇಳನದ ಎಲ್ಲಾ ದಿನಗಳಲ್ಲಿ ಚಿತ್ರೋದ್ಯಮದ ಸಮಸ್ತ ಕಲಾವಿದರು, ತಂತ್ರಜ್ಞರು, ಇತರರು ಸಕ್ರಿಯವಾಗಿ ಭಾಗವಹಿಸುತ್ತಾರೆಯೇ? ಅಥವಾ ಬೆಂಗಳೂರಿನಲ್ಲಾದಂತೆ ಬೆಳಗಾವಿಯಲ್ಲೂ ತಮ್ಮ ಮುಖ ತೋರಿಸಿ ಮಾಯವಾಗುತ್ತಾರೆಯೇ? ಎಂಬಿತ್ಯಾದಿ ಪ್ರಶ್ನೆಗಳು ಈ ಸಂದರ್ಭದಲ್ಲಿ ಉದ್ಭವವಾಗುತ್ತವೆ.

ವಾಸ್ತವವಾಗಿ ಕನ್ನಡ ಸಿನಿಮಾ ರಂಗದಲ್ಲಿ ಕನ್ನಡ ಭಾಷೆಯ ಬಗ್ಗೆ ಅಪಾರವಾದ ಪ್ರೀತಿ ಮತ್ತು ಅಭಿಮಾನವನ್ನು ತೋರಿಸುವ ನಾಲ್ಕು ಗುಂಪುಗಳಿವೆ. ಮುಖ್ಯವಾಗಿ ಡಾ. ರಾಜ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಒಂದು ಕಡೆ ಇದ್ದರೆ ಮತ್ತೊಂದೆಡೆ ಕಾರ್ಮಿಕ ನಾಯಕ ಮತ್ತು ಕನ್ನಡ ಹೋರಾಟಗಾರ ಅಶೋಕ್ ಗುಂಪು ಇದೆ. ಇವರಿಬ್ಬರ ನಡುವೆ ಸರ್ಕಾರಿ ಕೃಪಾಪೋಷಿತ ಸಿನಿಮಾ ಅಕಾಡೆಮಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಮತ್ತು ಕನ್ನಡ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಇದ್ದಾರೆ. ಈ ನಾಲ್ವರು ಈಗ ಇಡೀ ಸಮ್ಮೇಳನವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ. ಪರಿಣಾಮವಾಗಿ ಚಿತ್ರರಂಗ ನಾಲ್ಕು ದಿನಗಳ ರಜೆ ಘೋಷಿಸಿದೆ.



ಇವರ ಹೊರತಾಗಿಯೂ ಚಿತ್ರರಂಗದ ಕೆಲವರಲ್ಲಿ ದಿಢೀರ್ ಎಂದು ಭಾಷಾ ಪ್ರೇಮ ಹೆಚ್ಚಾಗಲು ಕಾರಣ ಅವರಿಗೆ ಈ ಸರ್ಕಾರದ ಜೊತೆಗಿರುವ ನಂಟು. ಈ ಕಾರಣಕ್ಕಾಗಿ ಬಿಜೆಪಿ ಪಕ್ಷದಿಂದ ಶಾಸಕರಾಗಿರುವ ಜಗ್ಗೇಶ್ ಮತ್ತು ಶ್ರೀನಾಥ್ ಸಮ್ಮೇಳನದಲ್ಲಿ ನಟನಟಿಯರು ಭಾಗವಹಿಸಬೇಕು ಎಂದು ಓಡಾಡುತ್ತಿದ್ದಾರೆ. ಹಾಗೆಯೇ ಕಿರುತೆರೆಯ ಸಂಘದ ಅಧ್ಯಕ್ಷ ರವಿಕಿರಣ್ ಈಗಾಗಲೇ ಬಿಜೆಪಿ ಪಕ್ಷದ ಜೊತೆ ಗುರುತಿಸಿಕೊಂಡಿರುವುದರಿಂದ ಮತ್ತು ಬಿಜೆಪಿ ಸರ್ಕಾರ ಕಿರುತೆರೆಯ ಕಲಾವಿದರ ಸಂಘಕ್ಕೆ ಕೆಂಗೇರಿ ಬಳಿ ಜಮೀನು ನೀಡಿರುವುದರಿಂದ ಕಿರುತೆರೆಯ ಸಮಸ್ತ ಕಲಾವಿದರು ಬೆಳಗಾವಿಗೆ ಹೊರಡಲು ನಿರ್ಧರಿಸಿದ್ದಾರೆ.



ಆದರೆ ನಮ್ಮ ಸಿನಿಮಾದವರ ಭಾಷಾ ಪ್ರೇಮ ಹೇಗಿದೆ ಎಂದರೆ, ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಚಲನಚಿತ್ರ ವಾಣಿಜ್ಯ ಮಂಡಳಿ ಸರ್ಕಾರದಿಂದ ಎರಡು ಕೋಟಿ ರೂಪಾಯಿ ಅನುದಾನವನ್ನು ಕೇಳಿತ್ತು, ಆದರೆ ಸರ್ಕಾರದ ಅಧಿಕಾರಿಗಳು ಮತ್ತು ಚಿತ್ರೋದ್ಯಮದ ಪ್ರತಿನಿಧಿಗಳ ನಡುವೆ ಚೌಕಾಸಿ ನಡೆದು ಅಂತಿಮವಾಗಿ ಸರ್ಕಾರ 50 ಲಕ್ಷ ದೇಣಿಗೆಯನ್ನು ಚಿತ್ರೋದ್ಯಮಕ್ಕೆ ನೀಡುತ್ತಿದೆ.

ಈ 50 ಲಕ್ಷ ರೂಪಾಯಿಗಳಲ್ಲಿ ಹಂಸಲೇಖ ನೇತೃತ್ವದಲ್ಲಿ ಚಿತ್ರೋದ್ಯಮದವರು ಒಂದು ರಸಮಂಜರಿ ಕಾರ್ಯಕ್ರಮವನ್ನು ನೀಡುತ್ತಾರಂತೆ. ಉಳಿದಂತೆ ಚಿತ್ರೋದ್ಯಮದ ನಾಯಕ ನಾಯಕಿಯರು ಲಾರಿ ಮೇಲೆ ಬೆಳಗಾವಿಯಲ್ಲಿ ಮೆರವಣಿಗೆ ಹೋಗುವುದಕ್ಕಷ್ಟೇ ಅವರ ಭಾಷಾ ಪ್ರೇಮ ಸೀಮಿತವಾಗುತ್ತದೆ.

ಕಳೆದ ವರ್ಷ ಚಿತ್ರೋದ್ಯಮಕ್ಕೆ 75 ವರ್ಷ ತುಂಬಿದ ಸಂದರ್ಭದಲ್ಲಿಯೂ ಆಗಿನ ಅಧ್ಯಕ್ಷೆ ಜಯಮಾಲ ಎರಡು ವಾರ ರಜಾ ಘೋಷಿಸಿದ್ದರು. ಆಗಲೂ ಸರ್ಕಾರದ ಬಳಿ ಎರಡು ಕೋಟಿ ರೂಪಾಯಿ ಅನುದಾನ ಕೇಳಿದ್ದರು.

ಆದರರ್ಥ ದುಡ್ಡು ಕೊಟ್ಟರೆ ಚಿತ್ರರಂಗಕ್ಕೆ ಕನ್ನಡ ಮತ್ತು ಸಾಹಿತ್ಯದ ಬಗ್ಗೆ ಪ್ರೀತಿ ಹುಟ್ಟುತ್ತದೆ ಎಂದಲ್ಲವೇ?

ಸರ್ಕಾರದಿಂದ ಹಣವನ್ನು ಪಡೆದು ಸಮ್ಮೇಳನದಲ್ಲಿ ಭಾಗವಹಿಸುವುದು ಎಷ್ಟು ಸೂಕ್ತ ಮತ್ತು ಸಮಂಜಸ ಎಂದು ಚಿತ್ರರಂಗದ ಯಾರೂ ಪ್ರಶ್ನಿಸಿರುವಂತಿಲ್ಲ, ಹೀಗೆ ಸರ್ಕಾರದಿಂದಲೇ ಹಣ ಪಡೆಯುವ ಬದಲಿಗೆ ಸರ್ಕಾರಿ ನೌಕರರಂತೆ ಚಿತ್ರೋದ್ಯಮದವರೇ ಒಂದು ದಿನದ ಸಂಭಾವನೆಯನ್ನು ಸಮ್ಮೇಳನದ ಸಂಘಟಕರಿಗೆ ಸಾಂಕೇತಿಕವಾಗಿ ನೀಡಿ ತಮ್ಮ ಭಾಗವಹಿಸಿಕೆಗೆ ಅರ್ಥ ನೀಡಬಹುದಿತ್ತು, ಅದಿಲ್ಲದಿದ್ದರೆ ಕನಿಷ್ಠ ಒಂದು ತಿಂಗಳು ಕನ್ನಡದ ಸರ್ವ ಶ್ರೇಷ್ಠ ಸಿನಿಮಾಗಳ ಪಟ್ಟಿ ಮಾಡಿ ಒಂದು ಉತ್ಸವವನ್ನು ನೀಡಬಹುದಿತ್ತು ಅಥವಾ ಪ್ರತಿ ಜಿಲ್ಲೆಯಲ್ಲೂ ವಿಶ್ವ ಕನ್ನಡ ಸಮ್ಮೇಳದ ನೆನಪಿಗಾಗಿ ಒಂದೊಂದು ಥಿಯೇಟರ್‌ನ್ನು ನಿರ್ಮಿಸಿ ಎಂದು ಸರ್ಕಾರಕ್ಕೆ ಮನವಿ ಮಾಡಬಹುದಿತ್ತು.

ಇಂತಹ ಯಾವುದೇ ಅರ್ಥಪೂರ್ಣ ಕಾರ್ಯಕ್ರಮವನ್ನು ಕಲ್ಪಿಸಿಕೊಳ್ಳಲಾಗದೇ ಐದು ದಿನ ರಜಾ ಘೋಷಿಸಿದ ಛೇಂಬರ್ ಅಧ್ಯಕ್ಷ ಬಸಂತಕುಮಾರ್ ಪಾಟೀಲ್ ಮತ್ತು ಇತರೆ 'ಹಿರಿಯರು' ತಮ್ಮ ಬರಡುತನವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಇಂತಹ ಅಪರೂಪದ ಸಮ್ಮೇಳನದಲ್ಲಿ ಚಿತ್ರರಂಗದವರು ಇನ್ನೂ ಅರ್ಥಪೂರ್ಣವಾಗಿ ಮತ್ತು ಕ್ರಿಯಾಶೀಲರಾಗಿ ಭಾಗವಹಿಸಬಹುದಿತ್ತು, ಉದಾಹರಣೆಗೆ ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರ, ಹೀಗೆ ಎರಡೂ ಮಾಧ್ಯಮಕ್ಕೆ ಸಲ್ಲುವ ವ್ಯಕ್ತಿಗಳಾದ ಜಯಂತ್ ಕಾಯ್ಕಿಣಿ, ನಾಗತಿಹಳ್ಳಿ ಚಂದ್ರಶೇಖರ್, ಬರಗೂರು ರಾಮಚಂದ್ರಪ್ಪ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ್, ಹೆಚ್.ಎಸ್. ವೆಂಕಟೇಶ್‌ಮೂರ್ತಿ ಮೊದಲಾದವರನ್ನು ಛೇಂಬರ್ ಅಧ್ಯಕ್ಷ ಬಸಂತ್ ಕುಮಾರ್ ಪಾಟೀಲ್ ಕರೆಸಿ ಮಾತನಾಡಿಸಿ ಅವರಿಂದ ಚಿತ್ರೋದ್ಯಮದ ಬಗ್ಗೆ ಅಥವಾ ದೊಡ್ಡ ದೊಡ್ಡ ಕಲಾವಿದರ ಬಗ್ಗೆ ಪುಸ್ತಕ ಬರೆಸಬಹುದಾಗಿತ್ತು, ಕನ್ನಡ ಚಿತ್ರೋದ್ಯಮದ 75 ವರ್ಷದ ವೈಭವವನ್ನು ಪ್ರದರ್ಶಿಸುವ ಕಿರುಚಿತ್ರವನ್ನು ನಿರ್ಮಿಸಬಹುದಿತ್ತು, ಆದರೆ ಇದ್ಯಾವುದೂ ಚಿತ್ರರಂಗದ ಗಣ್ಯರಿಗೆ ಹೊಳೆದೇ ಇಲ್ಲ!

ಈ ಮಧ್ಯೆ ನಿಜವಾಗಿಯೂ ಭಾಷಾ ಪ್ರೇಮವನ್ನು ಮತ್ತು ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸಿದವರು ನಿರ್ದೇಶಕರ ಸಂಘದ ಅಧ್ಯಕ್ಷ ರಮೇಶ್ ಮತ್ತು ಅದರ ಸದಸ್ಯರು. "ನಮಗೆ ಬೆಳಗಾವಿಯಲ್ಲಿ ಭಾಗವಹಿಸಲು ಸರ್ಕಾರದಿಂದ ನೆರವು ಮತ್ತು ಹಣಕಾಸು ಏನೂ ಬೇಡ. ನಾವು 120 ಸದಸ್ಯರು ನಮ್ಮಷ್ಟಕ್ಕೆ ಎರಡು ಬಸ್‌ಗಳಲ್ಲಿ ಬೆಳಗಾವಿಗೆ ಬರುತ್ತೇವೆ. ಅಲ್ಲಿ ಉಳಿದುಕೊಳ್ಳಲು ನಾವೇ ವ್ಯವಸ್ಥೆಮಾಡಿಕೊಳ್ಳುತ್ತೇವೆ. ಆದರೆ ವೇದಿಕೆಯಲ್ಲಿ ನಮಗೆ ಕುಳಿತುಕೊಳ್ಳಲು ಮಾತ್ರ ಅವಕಾಶ ಮಾಡಿಕೊಡಿ" ಎಂದು ರಮೇಶ್ ವಾಣಿಜ್ಯ ಮಂಡಳಿಗೆ ಹೇಳಿದ್ದಾರೆ.

ಅದೇರೀತಿ ಬರೀ ಬೆಳಗಾವಿಗೆ ಮೆರವಣಿಗೆ ಹೋದರೆ ಮಾತ್ರ ಸಾಕಾಗುವುದಿಲ್ಲ, ಅದರ ಬದಲಿಗೆ ಗಡಿ ಪ್ರದೇಶದಲ್ಲಿ ಕನ್ನಡ ಚಿತ್ರಗಳು ಎಲ್ಲೆಲ್ಲಿ ತೆರೆಕಾಣುವುದಿಲ್ಲವೋ ಅಂತಹ ಪ್ರದೇಶಗಳಲ್ಲೂ ಕನ್ನಡವನ್ನು ಜಾಗೃತಗೊಳಿಸುವ ಉದ್ದೇಶದಿಂದ ತಾರೆಯರು ಮೆರವಣಿಗೆ ಹೋಗಬೇಕು ಎಂದು ಒತ್ತಾಯ ಮಾಡಿದ್ದಾರೆ ಕಾರ್ಮಿಕ ನಾಯಕ ಅಶೋಕ್. ಅದೀಗ ಕಾರ್ಯಗತವಾಗುತ್ತಿರುವುದು ಸಂತೋಷ.

ಅದೇನೇ ಇರಲಿ, ವಿಶ್ವ ಕನ್ನಡ ಸಮ್ಮೇಳನ ಮುಗಿದನಂತರ ಗಾಂಧಿನಗರ ಮಾಯಾ ಲೋಕದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ನಿಸ್ಸಂಕೋಚವಾಗಿ ಹೇಳ ಬಹುದು. ಯಾಕೆಂದರೆ ಸಿನಿಮಾದವರ ಕನ್ನಡ ಪ್ರೇಮ, ಭಾಷಾ ಪ್ರೇಮ ಎಷ್ಟಾದರೂ ಬಣ್ಣ ಹಚ್ಚಿದಾಗ ಮಾತ್ರ. ಮುಖಕ್ಕೆ ಹಚ್ಚಿದ ಬಣ್ಣ ತೆಗೆದನಂತರ ಅವರ ನಿಜ ಬಣ್ಣ ಬಯಲಾಗುತ್ತದೆ ಎಂಬುದಕ್ಕೆ ಇತಿಹಾಸದಲ್ಲಿ ಬೇಕಾದಷ್ಟು ಉದಾಹರಣೆಗಳಿವೆ.

ಭಾಷೆಯೊಂದಿಗೆ ಚಿತ್ರರಂಗದವರು ಅಭಿಮಾನವನ್ನು, ಗಟ್ಟಿ ನಂಟನ್ನು ಬೆಳೆಸಿಕೊಂಡರೆ ಮಾತ್ರ ಅವರ ಭಾಗವಹಿಸುವಿಕೆಗೆ ಅರ್ಥ ಬರುತ್ತದೆ. ಇಲ್ಲವಾದರೆ ಅದೂ ಕೂಡ ಒಂದು 'ಶೋ' ಆಗುತ್ತದೆ...

• ರೇಣ್ಕೆ




ಲಂಕೇಶ್-76

ಸ್ಥಳ:
ಸಂಸ ಬಯಲು ರಂಗಮಂದಿರ
ರವೀಂದ್ರ ಕಲಾಕ್ಷೇತ್ರದ ಹಿಂಭಾಗ
ದಿನಾಂಕ:
6.3.2011 ಭಾನುವಾ...
ಸಂಜೆ 5.30ರಿಂದ 8.3...

ಪಿ. ಲಂಕೇಶ್ 76 ನೇ ಹುಟ್ಟುಹಬ್ಬ
'ಲಂಕೇಶ್' ವಾರ ಪತ್ರಿಕೆ ಹಾಗೂ 'ಗ್ರೇಡ್'
ಮಾಸಿಕದ ವಾರ್ಷಿಕೋತ್ಸವ ಸಮಾರಂಭ,

ಪುಸ್ತಕ ಬಿಡುಗಡೆ-ವಿಚಾರಗೋಷ್ಠಿ



ಪುಸ್ತಕ ಬಿಡುಗಡೆ ಇಂದಿರಾ ಲಂಕೇಶ್‌ರಿಂದ

1. ಪಿ. ಲಂಕೇಶರ - 'ಮರೆಯುವ ಮುನ್ನ' ಸಂಗ್ರಹ-3
   ಸಂಯೋಜನೆ-ಗೌರಿ ಲಂಕೇಶ್
2. ಗೌರಿ ಲಂಕೇಶರ - 'ಕಂಡಹಾಗೆ' ಸಂಗ್ರಹ-2
   ಸಂಪಾದಕೀಯ ಬರಹಗಳ ಸಂಕಲನ

ಲಂಕೇಶ್ ನೆನಪು

ಲಂಕೇಶರ ಬರವಣಿಗೆ ಹಾಗೂ ಕಾಳಜಿಗಳ ಕುರಿತು **ಡಾ. ನಟರಾಜ್ ಹುಳಿಯಾರ್**

ವಿಚಾರ ಗೋಷ್ಠಿ

ಕರ್ನಾಟಕದ ಬಿಕ್ಕಟ್ಟುಗಳು ಮತ್ತು ಪರಿಹಾರದ ದಾರಿಗಳು

ಪ್ರಸ್ತಾವನೆ	-	**ಪಾರ್ವತೀಶ**
ಮುಖ್ಯ ಅತಿಥಿ	-	**ನ್ಯಾ. ಸಂತೋಷ್ ಹೆಗಡೆ,** ಮಾನ್ಯ ಲೋಕಾಯುಕ್ತರು
ಅತಿಥಿಗಳು	-	**ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕರು
		ವೈ.ಎಸ್.ವಿ. ದತ್ತ, ವಿಧಾನ ಪರಿಷತ್ ಸದಸ್ಯರು
		ಎನ್. ಮಹೇಶ್, ಬಹುಜನ ಸಮಾಜ ಪಕ್ಷದ ನಾಯಕರು
		ಡಾ. ವಾಸು, ಸಂಚಾಲಕರು, ಕರ್ನಾಟಕ ಜನಶಕ್ತಿ
		ಡಾ. ಸಿದ್ದನಗೌಡ ಪಾಟೀಲ್, ಸಿಪಿಐ ಕಾರ್ಯದರ್ಶಿ
ಅಧ್ಯಕ್ಷತೆ	-	**ಗೌರಿ ಲಂಕೇಶ್**



ಎಲ್ಲರಿಗೂ ಪ್ರೀತಿಯ ಸ್ವಾಗತ

ಕಾರ್ಯಕ್ರಮದ ದಿನದಂದು ಲಂಕೇಶ್ ಪ್ರಕಾಶನದ ಪುಸ್ತಕಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ

ಲಂಕೇಶ್ ವಿಶೇಷಾಂಕ

ಮಾರ್ಚ್ 3 ರಂದು ಮಾರುಕಟ್ಟೆಯಲ್ಲಿ...

ವಾರ್ಷಿಕೋತ್ಸವದ ಅಂಗವಾಗಿ ಲಂಕೇಶ್ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆಯಾಗುತ್ತಿದೆ...

'ಹೊಸ ತಲೆಮಾರಿನ ತಲ್ಲಣಗಳು'

ಹೊಸ ತಲೆಮಾರಿನ ಯುವ ಬರಹಗಾರರಿಂದ ವಿಶೇಷ ಲೇಖನಗಳು, ಪ್ರಬಂಧ, ಕತೆ, ಪದ್ಯ, ಸಿನಿಮಾ-ಕ್ರೀಡಾ ಬರಹಗಳನ್ನು ಹೊಂದಿರುವ ಸಂಚಿಕೆ
ಓದುಗರ 'ನನಗೇಕೆ ಇವರು ಮೆಚ್ಚುಗೆಯೆಂದರೆ' ಬರಹಗಳು

ಪುಟಗಳು 24
ಬೆಲೆ 12



ಇದೀಗ ಬಿಡುಗಡೆಯಾಗಿದೆ

ಗ್ರೇಡ್

PDO- SDA-FDA

ನೇಮಕಾತಿಯ ಸಮಗ್ರ ಮಾಹಿತಿಗಳ

ವಿಶೇಷಾಂಕ

ಪ್ರತಿಗಳಿಗಾಗಿ ಸಂಪರ್ಕಿಸಿ:
9880302817, 26676427
ಎಲ್ಲೆಡೆ ಲಭ್ಯ

ಮಾರ್ಚ್ 2011ರ ಸಂಚಿಕೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 267642...
Fax : 26604536, E-mail :lankesh70@rediffmail.com, Printed at Rajhans Enterprises, #134...